ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಫೆಬ್ರವರಿ 6, 2025

ಸಂಪುಟ : 51 ಸಂಚಿಕೆ : 265 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ತಮ್ಮ ಯಶಸ್ಸಿಗೆ ಮತ್ತೊಬ್ಬರನ್ನು ತುಳಿಯದಿರಿ

### ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಭಾಷಣಕಾರ್ತಿ ಸಂಧ್ಯಾ ಶೆಣ್ಯೆ

ದಾವಣಗೆರೆ, ಫೆ.5- ಮತ್ತೊಬ್ಬರ ಚಿಕ್ಕ ಪುಟ್ಟ ತಪ್ಪುಗಳನ್ನೇ ಹೇಳುತ್ತಾ, ಅವರನ್ನು ನಿಂದಿಸುತ್ತಾ ನಮ್ಮ ಜೀವನ ಹಾಳು ಮಾಡಿಕೊಳ್ಳುವ ಬದಲು, ವಿರಸವನ್ನು ಮರೆತು ಇದ್ದುದರಲ್ಲೇ ಸಂತಸದಿಂದ ಬದುಕುವುದನ್ನು ಕಲಿಯೋಣ ಎಂದು ಉಡುಪಿಯ ಹಾಸ್ಯ ಭಾಷಣಕಾರ್ತಿ ಸಂಧ್ಯಾ ಶೆಣ್ಯೆ ಹೇಳಿದರು.

ಚಿತ್ರದುರ್ಗ ತಾಲ್ಲೂಕು ಭರಮಸಾಗರದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಎರಡನೇ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದ್ವೇಷ, ಅಸೂಯೆಯಿಂದ ಒಬ್ಬರನ್ನು ಹಿಂದಕ್ಕೆ ತಳ್ಳಬೇಕೆಂಬ ಉದ್ದೇಶದಿಂದ ಎಲ್ಲವನ್ನೂ ತ್ಯಾಗ ಮಾಡುತ್ತಿದ್ದೇವೆ. ನಮ್ಮ ಯಶಸ್ಸಿಗೆ ಮತ್ತೊಬ್ಬರನ್ನು ತುಳಿಯುವ ಅಗತ್ಯವಿಲ್ಲ. ಎಲ್ಲಾ ಸಂತೋಷಗಳನ್ನು ಅನುಭವಿಸುತ್ತಾ ಮುಂದೆ ಸಾಗಲು ಸಾಧ್ಯವಿದೆ ಎಂದು ಹೇಳಿದರು.

ಮಂಥರೆಗೆ ಅಪಮಾನ ಮಾಡಿದ್ದ ಕಾರಣ ಆಕೆ ಕೈಕೆಯ ಮೂಲಕ ಸೇಡು ತೀರಿಸಿಕೊಳ್ಳುತ್ತಾಳೆ. ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನಿಗೆ ಗೌರವ ಕೊಡದೆ ಮಾಡಿದ ಅಪಮಾನದ ಬೆಂಕಿ ಇಡೀ ರಾಮಾಯಣಕ್ಕೆ ಕಾರಣವಾಯ್ತು. ಅಂತಹ ಮಂಥರೆ, ಕೈಕೆಯವರು ಪ್ರಪಂಚಕ್ಕೆ ಬೇಕಿಲ್ಲ ಎಂದು ಹೇಳಿದರು.

ಇನ್ನೊಬ್ಬರ ಬೆನ್ನು ತಟ್ಟಿ ಅವರಲ್ಲಿರುವ ಉತ್ತಮ ಗುಣವನ್ನು ಪ್ರೋತ್ಸಾಹಿಸಿದರೆ, ಎಲ್ಲಿಯೂ ಕೈಕೆ, ಮಂಥರೆಯರು ತಯಾರಾಗುವುದಿಲ್ಲ. ನಾವೆಲ್ಲಾ ಬದುಕುತ್ತಿರುವುದು ಒಂದು ಮುಷ್ಠಿ ಪ್ರೀತಿಗಾಗಿ. ಅದಕ್ಕಾಗಿ (2ನೇ ಪುಟಕ್ಕೆ)



ಭರಮಸಾಗರದ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಮಾತನಾಡಿದರು.

> ನಾನೂ ಅಲ್ಲ, ನೀನೂ ಅಲ್ಲ. ಎಲ್ಲರೂ ಸಮಾನರು. ಸರ್ವವೂ ಸೃಷ್ಟಿಯಿಂದ ಬಂದಿದೆ. ಇದನ್ನರಿತು ನಾವೆಲ್ಲಾ ಸುಖವಾಗಿ ಬಾಳಿ ಬದುಕಬೇಕಿದೆ. ಪರಸ್ಪರ ಒಳಿತು ಬಯಸಲು ಸಕಾರಾತ್ಮಕ ನಿಲುವುಗಳನ್ನು ಹೊಂದಬೇಕು. ಒಬ್ಬರ ಉನ್ನತಿಗೆ ಮತ್ತೊಬ್ಬರ ಕೈ ಜೋಡಿಸುತ್ತಾ ಹೋದರೆ ದೇಶ ಉನ್ನತಿಯಾಗುತ್ತದೆ.
> - ಉಮಾಶ್ರೀ, ವಿಧಾನ ಪರಿಷತ್ ಸದಸ್ಯೆ

## ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸಾಕಷ್ಟು ಲೋಪಗಳು: ಡಿಕೆಶಿ

ಬೆಂಗಳೂರು,ಫೆ.5- ಕೇಂದ್ರ ಸರ್ಕಾರ ಹಾಗೂ ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ಮೇಲೆ ಒತ್ತಡ ತಂದು ಅನೇಕ ಲೋಪ ದೋಷ ಹೊಂದಿರುವ ರಾಷ್ಟ್ರೀಯ ಶಿಕ್ಷಣ ನೀತಿ ಹಿಂಪಡೆಯಲು ಎಲ್ಲರೂ ಸೇರಿ ಆಗ್ರಹಿಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ದಕ್ಷಿಣ ರಾಜ್ಯಗಳ ಉನ್ನತ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಜಾರಿಗೆ ತಂದ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸಾಕಷ್ಟು ಲೋಪಗಳಿದ್ದವು, ಕರ್ನಾಟಕ ಸರ್ಕಾರ ಧೈರ್ಯದಿಂದ ಒಂದಷ್ಟು ತಿದ್ದುಪಡಿ ಮಾಡುವ ತೀರ್ಮಾನ ತೆಗೆದುಕೊಂಡಿದೆ ಎಂದರು.

ಸಮ್ಮೇಳನದಿಂದ ಹೊರ ಹೊಮ್ಮುವ ವಿಚಾರಗಳು ಕೇಂದ್ರ ಸರ್ಕಾರಕ್ಕೆ ಮುಟ್ಟಬೇಕು, ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳ ಶೈಕ್ಷಣಿಕ ಗುಣಮಟ್ಟ ಅತ್ಯುತ್ತಮವಾಗಿದ್ದು, ಸೌಲಭ್ಯ ಕೊಡುವುದರಲ್ಲೂ ಮುಂದಿದ್ದೇವೆ, ಕಳೆದ 30 ವರ್ಷಗಳ ಹಿಂದೆಯೇ ಉತ್ತರ ಭಾರತದ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆಯಲು ದಕ್ಷಿಣ ಭಾರತ ರಾಜ್ಯಗಳಿಗೆ ವಲಸೆ ಬರುತ್ತಿದ್ದುದ್ದನ್ನು ಗಮನಿಸಿದ್ದೇನೆ.

ಕರ್ನಾಟಕದಲ್ಲಿ ಸುಮಾರು 70ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳು, 250ಕ್ಕೂ ಹೆಚ್ಚು ಎಂಜಿನಿಯರಿಂಗ್ ಕಾಲೇಜುಗಳಿವೆ, ತಮಿಳು ನಾಡು, ಕೇರಳ, ತೆಲಂಗಾಣ, ಆಂಧ್ರಪ್ರದೇಶಗಳೂ ಹೆಚ್ಚು ಕಾಲೇಜುಗಳನ್ನು ಹೊಂದಿವೆ, ಆದರೆ ನಮ್ಮ ಶಿಕ್ಷಣ ನೀತಿಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ ಎಂಬುದೇ ದೊಡ್ಡ ಪ್ರಶ್ನೆಯಾಗಿ ಕಾಡುತ್ತಿದೆ.

ಕಳೆದ 30 ವರ್ಷಗಳಲ್ಲಿ ಇಡೀ ಶಿಕ್ಷಣ ವ್ಯವಸ್ಥೆಯೇ ಬದಲಾಗಿದೆ, ಜೊತೆಗೆ ಸಾಕಷ್ಟು ಬದಲಾವಣೆಗಳನ್ನೂ ನಾವು ನೋಡಿದ್ದೇವೆ, ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬೆರಗು ಹುಟ್ಟಿಸಿದೆ, ಯುವಜನತೆಗೆ ಅವಕಾಶ ಸೃಷ್ಟಿಸುವುದು (2ನೇ ಪುಟಕ್ಕೆ)



**ಹಿಂಪಡೆಯಲು ಆಗ್ರಹಿಸುವಂತೆ ದಕ್ಷಿಣ ರಾಜ್ಯಗಳ ಉನ್ನತ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ಉಪ ಮುಖ್ಯಮಂತ್ರಿ ಕರೆ**

## ಶೇ. 4ಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳಿಂದ 'ಸ್ವಯಂ' ಸಂಪೂರ್ಣ

**ಅವಧಿ ಮೀರಿದ ಪಠ್ಯ ಎಂದು ಸಂಸದೀಯ ಸಮಿತಿ ಆಕ್ಷೇಪ**

ನವದೆಹಲಿ, ಫೆ. 5 - 'ಸ್ವಯಂ' ಕೋರ್ಸ್‌ಗಳಿಗೆ ನೋಂದಾಯಿಸಿದ ವಿದ್ಯಾರ್ಥಿಗಳಲ್ಲಿ ಶೇ. 4ರಷ್ಟು ಮಾತ್ರ ಶಿಕ್ಷಣ ಪೂರ್ಣಗೊಳಿಸಿದ್ದಾರೆ. ಅವಧಿ ಮೀರಿದ ಪಠ್ಯ, ಹೊಂದಾಣಿಕೆ ರಹಿತ ಬೋಧನೆ ಹಾಗೂ ಕಳಪೆ ಮೂಲ ಸೌಲಭ್ಯಗಳೇ ಇದಕ್ಕೆ ಕಾರಣ ಎಂದು ಸಂಸದೀಯ ಸಮಿತಿ ತಿಳಿಸಿದೆ.

ಡಿಜಿಟಲ್ ಶಿಕ್ಷಣ ನೀಡಲು ರೂಪಿಸಲಾದ ಸ್ವಯಂ ವೇದಿಕೆಗೆ ಸಕ್ರಿಯವಾಗಿ ನೆರವು ನೀಡಬೇಕು. ಇಲ್ಲವಾದಲ್ಲಿ ವಿದ್ಯಾರ್ಥಿಗಳಿಂದ ನೀರಸವಾದ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ ಎಂದು ರಾಜ್ಯಸಭಾ ಸದಸ್ಯ ದಿಗ್ವಿಜಯ್ ಸಿಂಗ್ ನೇತೃತ್ವದ ಸಮಿತಿ ಹೇಳಿದೆ. 9ನೇ ತರಗತಿಯಿಂದ ಹಿಡಿದು (2ನೇ ಪುಟಕ್ಕೆ)

## ಅಕ್ರಮ ಪಂಪ್‌ಸೆಟ್‌ಗಳ ತೆರವು ಆರಂಭ

**ಮಲೇಬೆನ್ನೂರು : ಮೊದಲು ಮೇಲ್ಭಾಗದಲ್ಲಿ ತೆರವುಗೊಳಿಸಿ ; ನಂದಿಗಾವಿ ಶ್ರೀನಿವಾಸ್ ಆಗ್ರಹ**

ಮಲೇಬೆನ್ನೂರು, ಫೆ.5- ಭದ್ರಾ ನಾಲೆಗೆ ಅಳವಡಿಸಿರುವ ಅಕ್ರಮ ಪಂಪ್‌ಸೆಟ್‌ಗಳ ತೆರವು ಕಾರ್ಯಾಚರಣೆ ಬುಧವಾರ ಮಲೇಬೆನ್ನೂರು ಭಾಗದಲ್ಲಿ ಆರಂಭವಾಗಿದ್ದು, ಗುರುವಾರವೂ ಕಾರ್ಯಾಚರಣೆ ಮುಂದುವರಿಯಲಿದೆ.

ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಅಕ್ರಮ ಪಂಪ್‌ಸೆಟ್‌ಗಳ ತೆರವಿನ ಜೊತೆಗೆ ವಿದ್ಯುತ್ ಸಂಪರ್ಕವನ್ನು ಕಟ್ ಮಾಡಿದ್ದೇವೆ ಎಂದು ಉಪತಹಶೀಲ್ದಾರ್ ಆರ್.ರವಿ ತಿಳಿಸಿದರು.

ಎಇಇ ಕೃಷ್ಣಮೂರ್ತಿ, ಗ್ರಾಮ ಆಡಳಿತಾಧಿಕಾರಿ ಅಣ್ಣಪ್ಪ ಮತ್ತು ಪೊಲೀಸ್ ಸಿಬ್ಬಂದಿ, ಬೆಸ್ಕಾಂ ಸಿಬ್ಬಂದಿ ಈ ವೇಳೆ ಹಾಜರಿದ್ದರು.

ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳಲ್ಲೂ ಅಕ್ರಮ ಪಂಪ್‌ಸೆಟ್‌ಗಳ ತೆರವು ಕಾರ್ಯಾಚರಣೆ ಆದಾಗ ಮಾತ್ರ ಅಚ್ಚುಕಟ್ಟಿನ ಕೆಳಭಾಗಕ್ಕೆ ಸಮರ್ಪಕ ನೀರು ಹರಿದು ಬರಲಿದೆ ಎಂದು ಕಾಂಗ್ರೆಸ್ ಮುಖಂಡ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಹರಿಹರ ತಾ. ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್ ಅವರು ಕೊಮಾರನಹಳ್ಳಿ ಬಳಿ ನಾಲೆ ನೀರಿನ ಗೇಜ್ ವೀಕ್ಷಿಸಿ ಮಾತನಾಡಿದರು.

ಕೊಮಾರನಹಳ್ಳಿ ಬಳಿ ನಾಲೆಯಲ್ಲಿ ನಿತ್ಯವೂ 5 ಅಡಿಗಿಂತ ಹೆಚ್ಚು ನೀರು ಹರಿಯುವಂತೆ ನೋಡಿಕೊಳ್ಳಿ ಎಂದು ಶ್ರೀನಿವಾಸ್ ಅವರು ಮಲೇಬೆನ್ನೂರು ನೀರಾವರಿ ಕಚೇರಿಗೆ ತೆರಳಿ ಪ್ರಭಾರ ಇಇ ಮಂಜುನಾಥ್, ಬಸವಾಪಟ್ಟಣ ಎಇಇ ಧನಂಜಯ, (2ನೇ ಪುಟಕ್ಕೆ)

## ಶ್ರೀಶೈಲ ಕ್ರೆಡಿಟ್ ಸೊಸೈಟಿ ಅಧ್ಯಕ್ಷರಾಗಿ ವೆಂಕಟರೆಡ್ಡಿ, ಉಪಾಧ್ಯಕ್ಷರಾಗಿ ಪ್ರಕಾಶ್





ದಾವಣಗೆರೆ, ಫೆ. 5- ನಗರದ ಪ್ರತಿಷ್ಠಿತ ಕೋ-ಆಪರೇಟಿವ್ ಸೊಸೈಟಿಗಳಲ್ಲೊಂದಾದ ಶ್ರೀ ಶ್ರೀಶೈಲ ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಸಂಘದ ಹಾಲಿ ಅಧ್ಯಕ್ಷ ಆರ್. ವೆಂಕಟರೆಡ್ಡಿ, ಉಪಾಧ್ಯಕ್ಷರಾಗಿ ಸಂಘದ ಹಾಲಿ ಉಪಾಧ್ಯಕ್ಷ ವಿ. ಪ್ರಕಾಶ್ ಅವರುಗಳು ಮತ್ತೊಂದು ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆಡಳಿತ ಮಂಡಳಿಗೆ ಕಳೆದ 2025, ಜನವರಿ (2ನೇ ಪುಟಕ್ಕೆ)

## ಸರ್ಕಾರಿ ಕಚೇರಿಗಳಲ್ಲಿ ಪ್ಲ್ಯಾಸ್ಟಿಕ್ ಬಾಟಲ್ ಬಳಕೆ ನಿಷೇಧ

ಬೆಂಗಳೂರು,ಫೆ.5-ಸರ್ಕಾರಿ ಕಚೇರಿ ಹಾಗೂ ಕಾರ್ಯಕ್ರಮಗಳಲ್ಲಿ ಇನ್ನು ಮುಂದೆ ಕುಡಿಯುವ ನೀರಿನ ಪ್ಲ್ಯಾಸ್ಟಿಕ್ ಬಾಟಲ್‌ಗಳ ಬಳಕೆ ನಿಷೇಧಿಸಲಾಗಿದೆ. ಈ ಸಂಬಂಧ ಸುತ್ತೋಲೆ ಹೊರಡಿಸಿ ರುವ ಸರ್ಕಾರ ಪ್ಲ್ಯಾಸ್ಟಿಕ್ ವಸ್ತುಗಳ ಅತಿಯಾದ ಬಳಿಕೆಯಿಂದ ಆರೋಗ್ಯ ಮತ್ತು ಪರಿಸರದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ತಡೆಯುವ ದೃಷ್ಟಿಯಿಂದ ನಿರ್ಧಾರ ಕೈಗೊಳ್ಳಲಾಗಿದೆ.

ಸಚಿವಾಲಯ ಸೇರಿದಂತೆ ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಕಚೇರಿ, ಸರ್ಕಾರಿ ಸ್ವಾಮ್ಯದ ಮಂಡಳಿ-ನಿಗಮ, ವಿಶ್ವವಿದ್ಯಾಲಯಗಳು, ಅನುದಾನಿತ ಸಂಸ್ಥೆಗಳು ಏರ್ಪಡಿಸುವ ಸಭೆ, ಸಮಾರಂಭಗಳಲ್ಲಿ ಒಂದು ಬಾರಿ ಬಳಕೆಯ ಕುಡಿಯುವ ನೀರಿನ ಪ್ಲ್ಯಾಸ್ಟಿಕ್ ಬಾಟಲಿಗಳನ್ನು ನಿಷೇಧಿಸಲಾಗಿದೆ. ಇಂತಹ ಸಭೆ, ಸಮಾರಂಭಗಳಲ್ಲಿ ಕುಡಿಯುವ ನೀರನ್ನು ಸಂದರ್ಭಾನುಸಾರ ಶುಚಿತ್ವವಾಗಿ ಗ್ಲಾಸ್, ಸ್ಟೀಲ್, ಪೇಪರ್ ಮತ್ತಿತರ ಪ್ಲ್ಯಾಸ್ಟಿಕ್ ಅಲ್ಲದ, ಲೋಟಗಳಲ್ಲಿ ಸರಬರಾಜು (2ನೇ ಪುಟಕ್ಕೆ)

## ವರ್ಷದಲ್ಲೇ ಎ.ಐ. ವೆಚ್ಚ 10 ಪಟ್ಟು ಇಳಿಕೆ

ನವದೆಹಲಿ, ಫೆ. 5 - ವರ್ಷದಲ್ಲೇ ಕೃತಕ ಬುದ್ಧಿವಂತಿಕೆ (ಎ.ಐ.) ವೆಚ್ಚ 10 ಪಟ್ಟು ಇಳಿಕೆಯಾಗಲಿದೆ ಎಂದು ಓಪನ್‌ಎಐ ಸಿಇಒ ಸ್ಯಾಮ್ ಆಲ್ಟ್‌ಮನ್ ಹೇಳಿದ್ದಾರೆ.

ಎಐ ಮಾದರಿಗಳು ಈಗಲೂ ಕಡಿಮೆ ವೆಚ್ಚದವೇನು ಅಲ್ಲ. ಆದರೆ ಮಾದರಿಗಳನ್ನು ರೂಪಿಸುವ ಸಾಧ್ಯತೆಗಳು ಹೆಚ್ಚಾಗಿವೆ. ಇದರಿಂದ ಎಐ ವಲಯದಲ್ಲಿ ತ್ವರಿತ ಬೆಳವಣಿಗೆ ಆಗಲಿದೆ ಎಂದು ಆಲ್ಟ್‌ಮ್ಯಾನ್ ಹೇಳಿದ್ದಾರೆ. ಎಐ ಘಟಕ ಅಭಿವೃದ್ಧಿಪಡಿಸುವ ವೆಚ್ಚ ವರ್ಷದ ನಂತರ 10 ಪಟ್ಟು ಕಡಿಮೆಯಾಗುತ್ತದೆ ಎಂದವರು ಅಂದಾಜಿಸಿದ್ದಾರೆ.


Narayana Health
Gastro Care

ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಆಸ್ಪತ್ರೆಯ ಸರ್ಜಿಕಲ್ ಗ್ಯಾಸ್ಟ್ರೋ ತಜ್ಞ ವೈದ್ಯರು ಈಗ ದಾವಣಗೆರೆಯಲ್ಲಿ

ಸಾಮಾನ್ಯ ಲಕ್ಷಣಗಳು : ಗ್ಯಾಸ್ಟ್ರಿಕ್ ಸಮಸ್ಯೆ | ಹೊಟ್ಟೆ ನೋವು | ಅಪೆಂಡಿಕ್ಸ್ | ಪಿತ್ತಕೋಶದಲ್ಲಿ ಕಲ್ಲು | ಹರ್ನಿಯ ಮೂಲವ್ಯಾದಿ | ಫಿಸ್ತೂಲ | ಮಲಬದ್ಧತೆ | ಲ್ಯಾಪ್ರೊಸ್ಕೋಪಿಕ್ ಶಸ್ತ್ರಚಿಕಿತ್ಸೆ

ಡಾ. ಸತೀಶ್ ಕುಮಾರ್ ಬಿ ಎಂ - ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ & ಲಿವರ್ ಟ್ರಾನ್ಸ್‌ಪ್ಲಾಂಟ್




7ನೇ ಫೆಬ್ರವರಿ 2025 (ಶುಕ್ರವಾರ) | ಬೆಳಿಗ್ಗೆ 10:30 ರಿಂದ ಮಧ್ಯಾಹ್ನ 1:00 ರವರೆಗೆ
ಯುನಿಟಿ ಹೆಲ್ತ್ ಸೆಂಟರ್, ಸೈಂಟ್ ಪಾಲ್ಸ್ ಕಾನ್ವೆಂಟ್ ರಸ್ತೆ, 5ನೇ ತಿರುವು, ದಾವಣಗೆರೆ

ಸಹ್ಯಾದ್ರಿ ನಾರಾಯಣ ಆಸ್ಪತ್ರೆ
ಎನ್‌ಟಿ ರಸ್ತೆ, ಹರಕೆರೆ, ಶಿವಮೊಗ್ಗ
Take Care
88844 31388, 73494 48215



CCH
TRUSTWELL HOSPITALS
Your Trust. Our Care

ಲಿವರ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕ್



ಟ್ರಸ್ಟ್ ವೆಲ್ ಹಾಸ್ಪಿಟಲ್ ಬೆಂಗಳೂರು,
ಇಲ್ಲಿನ ಪ್ರಮುಖ ಗ್ಯಾಸ್ಟ್ರೋ, ಹೆಚ್ ಪಿ ಬಿ ಮತ್ತು
ಲಿವರ್ ಟ್ರಾನ್ಸ್‌ಪ್ಲಾಂಟ್ ತಜ್ಞರು
ದಾವಣಗೆರೆಯಲ್ಲಿ ಸಮಾಲೋಚನೆಗೆ ಲಭ್ಯರಿರುತ್ತಾರೆ



ಡಾ. ಸುನಿಲ್ ಶೆಣೈ
MS - General Surgery,
MCh - Surgical Gastroenerology,
FASTS(Fellow of American Society of Transplant Surgeons)

ದಿನಾಂಕ: ಶುಕ್ರವಾರ, 7 ಫೆಬ್ರವರಿ 2025
ಸಮಯ: ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ

ಸ್ಥಳ: ಸಿಟಿ ಸೆಂಟ್ರಲ್ ಆಸ್ಪತ್ರೆ,
#17, ಎ ವಿ ಕೆ ಕಾಲೇಜ್ ರಸ್ತೆ, ಪಿ ಜೆ ವಿಸ್ತರಣೆ, ದಾವಣಗೆರೆ


ಈ ಕೆಳಗಿನ ರೋಗ ಲಕ್ಷಣಗಳು ಕಂಡುಬಂದಲ್ಲಿ ವೈದ್ಯರನ್ನು ಸಮಾಲೋಚಿಸಿ

- ಕಾಮಾಲೆ
- ಹೆಪಟೈಟಿಸ್
- ಲಿವರ್ ಫೈಬ್ರೋಸಿಸ್
- ಲಿವರ್ ವೈಫಲ್ಯ
- ರಕ್ತ ವಾಂತಿ
- ಮದ್ಯಪಾನದಿಂದ ಬರುವ ಲಿವರ್ ಖಾಯಿಲೆಗಳು
- ಸ್ವಯಂ ನಿರೋಧಕ ಲಿವರ್ ಕಾಯಿಲೆ
- ಹೊಟ್ಟೆ ಮತ್ತು ಪಾದಗಳಲ್ಲಿ ಊತ
- ಹೊಟ್ಟೆಯಲ್ಲಿ ಅಧಿಕ ರಕ್ತದೊತ್ತಡ
- ಹೆಪಟೋಲೆಂಟಿಕ್ಯುಲರ್ ಡಿಜೆನರೇಶನ್
- ಬಿಲಿಯರಿ ಅಟ್ರೇಸಿಯಾ
- ಲಿವರ್ ಸಿರೋಸಿಸ್
- ಲಿವರ್ ಕ್ಯಾನ್ಸರ್
- ಅನ್ನನಾಳದ ರಕ್ತಸ್ರಾವ
- ಮಕ್ಕಳಲ್ಲಿ ಲಿವರ್ ಖಾಯಿಲೆ

ನೋಂದಣಿಗಾಗಿ ಕರೆಮಾಡಿ: +91 76767 97676



ತರಳಬಾಳು ಶ್ರೀಗಳಿಂದ ಗೌರವಿಸಲ್ಪಟ್ಟ
ಶಶಿಧರ್ ನಾಗರಾಜಪ್ಪ ಅವರಿಗೆ
ಹೃತ್ಪೂರ್ವಕ ಅಭಿನಂದನೆಗಳು







ತರಳಬಾಳು ಹುಣ್ಣಿಮೆಯಲ್ಲಿ ಮಾತೃಭಾಷಾ ಸಾಕ್ಷರತೆಯ ಕುರಿತು ಉಪನ್ಯಾಸ ನೀಡಿ ತರಳಬಾಳು ಶ್ರೀಗಳಿಂದ ಗೌರವಿಸಲ್ಪಟ್ಟ ದುಬೈನ ಕರ್ನಾಟಕ ಸಂಘದ ಅಧ್ಯಕ್ಷ ನಮ್ಮ ಹೆಮ್ಮೆಯ ಗೆಳೆಯ

ಶಶಿಧರ್ ನಾಗರಾಜಪ್ಪ

ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ದಶಕಗಳಿಂದ ದುಬೈ, ಅಭುದಾಬಿ, ಶಾರ್ಜಾದಲ್ಲಿ ಕನ್ನಡದ ಕಹಳೆ ಊದುತ್ತಾ ಅಲ್ಲಿನ ಕನ್ನಡ ಕಂದಮ್ಮಗಳಿಗೆ ಕನ್ನಡ ಕಲಿಸುವ ಕಾಯಕದ ಮೂಲಕ ಕನ್ನಡ ಡಿಂಡಿಮವನ್ನು ಬಾರಿಸುತ್ತಿರುವ ಶಶಿಧರ್ ನಾಗರಾಜಪ್ಪ ನೀವು ಸೂರ್ಯನಂತೆ ಬೆಳಗಿರಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

– ಎ.ಎ. ಸನ್ನಿ



# 22ಕ್ಕೆ ಗುರು ಕೊಟ್ಟೂರೇಶ್ವರ ಮಹಾ ರಥೋತ್ಸವ

## ಭಕ್ತರಿಗೆ ತೊಂದರೆಯಾಗದಂತೆ ವ್ಯವಸ್ಥೆ ಕಲ್ಪಿಸಲು ಅಧಿಕಾರಿಗಳಿಗೆ ಶಾಸಕ ಕೆ. ನೇಮಿರಾಜನಾಯ್ಕ ಸೂಚನೆ



ಕೊಟ್ಟೂರು, ಫೆ.5- ಇಲ್ಲಿನ ಕೊಟ್ಟೂರೇಶ್ವರ ಸ್ವಾಮಿಯ ಮಹಾ ರಥೋತ್ಸವವು ಇದೇ ದಿನಾಂಕ 22ರಂದು ನಡೆಯಲಿದ್ದು, ಪಾದಯಾತ್ರೆ ಮೂಲಕ ಜಾತ್ರೆಗೆ ಬರುವ ಭಕ್ತಾದಿಗಳಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳಬೇಕೆಂದು ಹಗರಿಬೊಮ್ಮನಹಳ್ಳಿ ಶಾಸಕ ಕೆ. ನೇಮಿರಾಜನಾಯ್ಕ ಅಧಿಕಾರಿಗಳಿಗೆ ಸೂಚಿಸಿದರು.

ಹಿಂದೂ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಇಲ್ಲಿನ ಹಿರೇಮಠದ ಮುಂಭಾಗ ಆಯೋಜಿಸಿದ್ದ 'ರಥೋತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಟ್ಟಣವನ್ನು ಸಂಪರ್ಕಿಸುವ 6 ಪ್ರಮುಖ ರಸ್ತೆಗಳನ್ನು ದುರಸ್ತಿಗೊಳಿಸುವ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಿದ್ದೇವೆ. ಜಾತ್ರೆ ಆರಂಭಕ್ಕೂ ಮುನ್ನವೇ ದುರಸ್ತಿ ಕಾಮಗಾರಿ ಮುಗಿಯಲಿದೆ ಎಂದು ತಿಳಿಸಿದರು.

**ಗಚ್ಚಿನಮಠ ದತ್ತಿ ಇಲಾಖೆಗೆ ಒಳಪಡಿಸಿ..!**

**ಗುರು ಕೊಟ್ಟೂರೇಶ್ವರ ಸ್ವಾಮಿಯು ಜೀವಂತ ಸಮಾದಿಯಾದ ಗಚ್ಚಿನಮಠವು ಖಾಸಗಿ ಅವರ ಸುಪರ್ಧಿಯಲ್ಲಿದ್ದು, ವರ್ಷಕ್ಕೆ ಕೋಟಿಗಟ್ಟಲೇ ಆದಾಯ ಗಳಿಸಲಿದೆ. ಕೂಡಲೇ ಈ ಮಠವನ್ನು ಧಾರ್ಮಿಕ, ದತ್ತಿ ಇಲಾಖೆ ವಶಪಡಿಸಿಕೊಳ್ಳಬೇಕು ಮತ್ತು ಈ ಮಠದ 2019-20-21ನೇ ಸಾಲಿನ ಆಡಿಟಿಂಗ್‌ನಲ್ಲಿ ನಡೆದ ಅವ್ಯವಹಾರ ತನಿಖೆ ಮಾಡಿಸುವಂತೆ ಕೆ. ಕೊಟ್ರೇಶ್ ಜಿಲ್ಲಾಧಿಕಾರಿಗಳ ಗಮನ ಸೆಳೆದರು.**

ಜಾತ್ರೆಗೆ ಆಗಮಿಸುವ ಜನರಿಗೆ ನೀರಿನ ಬವಣೆ ಆಗದಂತೆ ನೋಡಿಕೊಳ್ಳಬೇಕು. ನೀರಿನ ಸಮಸ್ಯೆ ಉಲ್ಬಣ ವಾದಲ್ಲಿ ಪ.ಪಂ ಆಡಳಿತವು ಹೆಚ್ಚುವರಿ ಟ್ಯಾಂಕರ್ ಗಳ ಮೂಲಕ ನಾಗರಿಕರಿಗೆ ನೀರು ಪೂರೈಸಬೇಕು ಎಂದರು.

ಪಟ್ಟಣದ ಎಲ್ಲಾ ವಾರ್ಡ್‌ಗಳನ್ನು ಸ್ವಚ್ಛಗೊಳಿಸ ಬೇಕು. ಎಲ್ಲಿಯೂ ಕಸದ ರಾಶಿ ಕಾಣದಂತೆ ಪಟ್ಟಣದ ಸ್ವಚ್ಛತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡ ಬೇಕು ಎಂದು ಮುಖ್ಯಾಧಿಕಾರಿಗಳಿಗೆ ತಿಳಿಸಿದರು.

ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಮಾತನಾಡಿ, ಜಾತ್ರೆಯ ಸೊಬಗನ್ನು ಇಮ್ಮಡಿಗೊಳಿಸಲು ನಗರದ ಪ್ರಮುಖ ಬೀದಿಗಳಲ್ಲಿ ವಿದ್ಯುತ್ ದೀಪಗಳಿಂದ ಅಲಂಕರಿಸಲು ಅಧಿಕಾರಿ ಗಳು ಮುಂದಾಗಬೇಕು ಎಂದು ಹೇಳಿದರು.


ನಗರದ ರಸ್ತೆಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಪಟ್ಟಣದೊಳಗೆ ಬ್ಯಾನರ್‌ಗಳನ್ನು ಹಾಕಬಾರದು ಮತ್ತು ಸುರಕ್ಷತಾ ನಿಟ್ಟಿನಲ್ಲಿ ಹೆಚ್ಚಿನ ಭದ್ರತೆ ನೀಡಬೇಕು ಎಂದು ಹೇಳಿದರು.

ಮುಖಂಡರಾದ ಎಂ.ಎಂ.ಜೆ. ಹರ್ಷವರ್ಧನ್, ಬಿ. ಮರಿಸ್ವಾಮಿ, ಟಿ. ಹನುಮಂತಪ್ಪ ಮಂಜುನಾಥ ಗೌಡ, ರುದ್ರಪ್ಪ, ಕೂಡ್ಲಿಗಿ ಕೊಟ್ರೇಶ, ಅಡಕಿ ಮಂಜುನಾಥ ಸಲಹೆಗಳನ್ನು ಹಂಚಿಕೊಂಡರು.

ಈ ವೇಳೆ ಅಧಿಕಾರಿಗಳಾದ ಶಿವಪ್ರಕಾಶ್ ಕೊಟ್ಟೂರು, ಪಿ.ಹೆಚ್. ದೊಡ್ಡರಾಮಣ್ಣ, ಐ. ದಾರುಕೇಶ್, ಮಹಮದ್ ಅಲಿ ಅಕ್ರಮ್ ಷಾ, ಡಾ. ಆನಂದ್ ಕುಮಾರ್, ರೇಖಾ ಬದ್ದಿ ರಮೇಶ್, ಜಿ.ಕೆ. ಅಮರೇಶ್, ಜಿ. ಸಿದ್ದಯ್ಯ, ಪ.ಪಂ ಸದಸ್ಯರಾದ ಮರಬದ ಕೊಟ್ರೇಶ್, ತೋಟದ ರಾಮಪ್ಪ, ವೀಣಾ ವಿವೇಕಾನಂದಗೌಡ, ಗಂಗಾಧರಪ್ಪ, ಹನುಮಂತಪ್ಪ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಅಕ್ರಮ ಪಂಪ್‌ಸೆಟ್‌ಗಳ ತೆರವು ಆರಂಭ





**(1ನೇ ಪುಟದಿಂದ)** ಮಲೇಬೆನ್ನೂರು ಎಇಇ ಕೃಷ್ಣಮೂರ್ತಿ ಅವರಿಗೆ ಹೇಳಿದರು.

ನಂತರ ಶ್ರೀನಿವಾಸ್ ಅವರು ಕೊಮಾರನಹಳ್ಳಿ ಬಳಿ ನಾಲೆಯಲ್ಲಿ ನೀರಿನ ಗೇಜ್ ವೀಕ್ಷಿಸಿ, ಇಲ್ಲಿ 5 ಅಡಿ ನೀರು ಹರಿದರೆ ಮಾತ್ರ ಕೆಳಭಾಗಕ್ಕೆ ನೀರು ಹೋಗಲಿದೆ ಎಂದು ಇಂಜಿನಿಯರ್‌ಗಳಿಗೆ ತೋರಿಸಿ ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ ಮತ್ತಿತರರು ಈ ವೇಳೆ ಹಾಜರಿದ್ದರು.

# ತಮ್ಮ ಯಶಸ್ಸಿಗೆ ಮತ್ತೊಬ್ಬರನ್ನು ತುಳಿಯದಿರಿ




**(1ನೇ ಪುಟದಿಂದ)** ಏನನ್ನೂ ಖರ್ಚು ಮಾಡಬೇಕಿಲ್ಲ. ಆ ಪ್ರೀತಿಯನ್ನು ಭರಪೂರವಾಗಿ ಸುತ್ತ ಮುತ್ತಲಿನವರಿಗೆ ನೀಡಬೇಕಿದೆ ಎಂದರು.

ನಮ್ಮ ಮಕ್ಕಳು ಏನಾಗಬೇಕೋ ಅದನ್ನು ನಾವು ಮಾಡಿ ತೋರಿಸಬೇಕು. ಆನಂತರವೂ ಮಗು ಅದನ್ನು ಮಾಡದಿದ್ದರೆ ಮಾತ್ರ ಅದಕ್ಕೆ ದಂಡಿಸುವ ಹಕ್ಕು ನಮಗಿರುತ್ತದೆ. ನಾವೇ ಹೆಚ್ಚು ಟಿವಿ, ಮೊಬೈಲ್ ನೋಡುತ್ತಾ, ಮಗುವಿಗೆ ಓದು ಎಂದರೆ ಕೇಳುತ್ತದೆಯೇ? ಎಂದು ಪ್ರಶ್ನಿಸಿದರು.

**ರಾಜಕೀಯದಲ್ಲಿ ಶೇ.33 ಮೀಸಲಾತಿ ಕೊಡಿ:** ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕೊಟ್ಟರೆ ನಮ್ಮ ಸ್ವಂತಿಕೆ, ಸಾಮರ್ಥ್ಯ ತೋರಿಸಲು ಅವಕಾಶ ಸಿಗುತ್ತದೆ ಎಂದು ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ್ ಹೇಳಿದರು.

ಸುಮಾರು ವರ್ಷಗಳಿಂದ ತರಳಬಾಳು ಉತ್ಸವ ನಡೆಸಲಾಗುತ್ತಿದೆ. ಅದರಲ್ಲಿ ಮಹಿಳೆಯರಿ ಗಾಗಿ ಪ್ರತ್ಯೇಕವಾಗಿ ಗೋಷ್ಠಿ ನಡೆಸುತ್ತಿರುವುದು ಸಂತಸ ತಂದಿದೆ. ಈ ಮಹೋತ್ಸವ ಸರ್ವ ಧರ್ಮಗಳ ಶರಣೋತ್ಸವವಾಗಿದೆ ಎಂದರು.

**ವಯಸ್ಸಿನ ಪರಿವೇ ಇಲ್ಲದೆ ಶೋಷಣೆ:** ಬದುಕು ರೂಪಗೊಂಡಿರುವುದೇ ಸ್ತ್ರೀ ಪುರುಷರ ಸಮಾಗಮದಿಂದ. ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಪರಸ್ಪರ ಹೊಂದಾಣಿಕೆಯಿಂದ ಕುಟುಂಬದಲ್ಲಿ ನೆಮ್ಮದಿಯಿಂದ ಇರಲು ಸಾಧ್ಯ ಎಂದು ಕೊಪ್ಪಳ ಇರಕಲಗಡ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರಾದ ಡಾ. ನಾಗಪುಷ್ಪಲತಾ ಹೇಳಿದರು.

ಸಂಸ್ಕೃತಿ, ಪರಂಪರೆ, ಧರ್ಮ, ಆಚಾರ ವಿಚಾರ, ನೋವು, ನಲಿವು ಎಲ್ಲದರ ಭಾಗವಾಗಿ ಕಂಡು ಬರುತ್ತಾಳೆ ಮಹಿಳೆ. ಆದರೆ ಪ್ರಸ್ತುತ ದಿನಗಳಲ್ಲಿ ಹೆಣ್ಣಿನ ಮೇಲೆ ವಯಸ್ಸಿನ ಪರಿವೇ ಇಲ್ಲದೆ ಶೋಷಣೆ, ಅತ್ಯಾಚಾರ ನಡೆಯುತ್ತಿದೆ ಇದು ನೋವಿನ ವಿಚಾರ ಎಂದರು.

ನಮ್ಮ ಶಿಕ್ಷಣ ಕೇವಲ ಅಂಕಗಳಿಗೆ ಸೀಮಿತವಾಗಿದೆ. ಮಕ್ಕಳಿಗೆ ವಿದ್ಯೆ ಜೊತೆಗೆ ಸಂಸ್ಕಾ ರವನ್ನೂ ತಿಳಿಸಿಕೊಟ್ಟಾಗ, ಜೊತೆಗೆ ಮಹಿಳೆಯ ರನ್ನು ಪೂಜಿಸುವುದು ಬೇಡ, ಕನಿಷ್ಟ ಅವಳೂ ಮನುಷ್ಯಳು ಎಂದು ಭಾವಿಸಿದಲ್ಲಿ ಸ್ವಸ್ಥ್ಯ ಸಮಾಜ ನಿರ್ಮಾಣವಾಗಲು ಸಾಧ್ಯ ಎಂದು ಹೇಳಿದರು.

**ಮಹಿಳೆಯರ ಹೋರಾಟ ಗಂಡು ಮಕ್ಕಳ ವಿರುದ್ಧವಲ್ಲ:** ಮಹಿಳೆಯರು ಹಕ್ಕುಗಳ ಕುರಿತು ಹೋರಾಟ ಮಾಡುವ ಸಂದರ್ಭದಲ್ಲಿ ಅದು ಗಂಡು ಮಕ್ಕಳ ವಿರುದ್ಧದ ಹೋರಾಟ ಎಂದು ಯಾರೂ ಭಾವಿಸಬಾರದು ಎಂದು ಧಾರವಾಡ ಜಿಲ್ಲಾಧಿಕಾರಿ ಜಿ.ಆರ್.ಜೆ. ದಿವ್ಯ ಪ್ರಭು ತಿಳಿಸಿದರು.

ಹೆಣ್ಣು ಮಕ್ಕಳು ಓದಲು ಆರಂಭಿಸಿದ್ದು 60-70 ವರ್ಷಗಳಿಂದೀಚೆ ಅಷ್ಟೆ. ಆದರೆ ಗಂಡು ಮಕ್ಕಳು 2 ಸಾವಿರ ವರ್ಷಗಳಿಂದಲೂ ಶಿಕ್ಷಣ ಪಡೆಯುತ್ತಿದ್ದರು. ಈ ಅಂತರವನ್ನು ತುಂಬಿಕೊಳ್ಳಬಹುದು ಯಾವ ರೀತಿ ಶ್ರಮ ಪಡಬೇಕು ಎಂದು ಚಿಂತಿಸಬೇಕಿದೆ ಎಂದರು.

ಒಂದು ಹೆಣ್ಣಿಗೆ ಶಿಕ್ಷಣ ನೀಡಿದರೆ ಅದು ಇಡೀ ಕುಲಕ್ಕೆ ಶಿಕ್ಷಣ ಕೊಡಿಸಲು ದಾರಿ ಮಾಡಿಕೊಡುತ್ತದೆ. ಆದರೆ ಈಗಲೂ ಸಮಾಜದಲ್ಲಿ ಗಂಡು ಮಕ್ಕಳೇ ಬೇಕು ಎಂದು ಅಪೇಕ್ಷಿಸುತ್ತಿರುವುದು ವಿಷಾದನೀಯ ಎಂದರು.

**ಶೋಷಣೆ ನಡೆದರೆ ಪೊಲೀಸರಿಗೆ ತಿಳಿಸಿ :** ಮಹಿಳೆಯರಿಗೆ ಎಷ್ಟೇ ಅಪಮಾನಗಳಿದ್ದರೂ ಎದುರಿಸಿ ನಿಲ್ಲುವ ಶಕ್ತಿ ಇರಬೇಕು. ಶೋಷಣೆಗೆ ಒಳಗಾಗಬೇಡಿ. ಯಾರಾದರೂ ನಿಮ್ಮನ್ನು ಶೋಷಣೆಗೆ ಗುರಿಪಡಿಸಿದರೆ ಹತ್ತಿರದ ಪೊಲೀಸ್ ಠಾಣೆಗೆ ಹೋಗಿ ಅಂಜಿಕೊಳ್ಳದೇ ದೂರು ಸಲ್ಲಿಸಿ ಎಂದು ಹೇಳಿದರು. ಮಹಿಳೆಯರೂ ಯಾರೊಂ ದಿಗೆ ತಮ್ಮ ಫೋಟೋಗಳನ್ನು ಹಂಚಿಕೊಳ್ಳಬೇಡಿ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಕಿವಿ ಮಾತು ಹೇಳಿದರು.

ಯಾವುದೇ ಕಾರ್ಯಕ್ರಮಗಳಲ್ಲಿ ವೇದಿಕೆ ಮೇಲೆ ಮಹಿಳೆ ಪ್ರಾರ್ಥನೆ ಹೇಳಲು, ಹೂಗುಚ್ಚ ಕೊಡಲು ಮಾತ್ರ ಸೀಮಿತಳಾಗಿದ್ದಾಳೆ. ಈ ಕೆಲಸವನ್ನು ಪುರುಷರೂ ಮಾಡಲಿ ಎಂದರು.

ಹೆಣ್ಣು ಭ್ರೂಣ ಹತ್ಯೆ ಹೆಚ್ಚಾಗಿದೆ. 800 ಲಕ್ಷ ಹೆಣ್ಣು ಮಕ್ಕಳ ಭ್ರೂಣ ಹತ್ಯೆ ನಡೆದಿರುವುದು ಕಳವಳ ಕಾರಿ ಸಂಗತಿ. ಎಲ್ಲದಕ್ಕೂ ಮಹಿಳೆ ಬೇಕು. ಅವರೇ ಇಲ್ಲದಿದ್ದರೆ ಪ್ರಪಂಚ ನಡೆಯುವುದಾದರೂ ಹೇಗೆ? ಎಂದವರು ಪ್ರಶ್ನಿಸಿದರು.

ಚಾಮರಾಜ ನಗರ ಎಸ್ಪಿ ಡಾ.ಬಿ.ಟಿ. ಕವಿತಾ, ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯೆ ಬಿ.ವಿ. ಗೀತಾ, ಸಾಹಿತಿ ಶಾಲಿನಿ ಶ್ರೀ ಶೈಲ ದೊಡ್ಡಮನಿ ಉಪಸ್ಥಿತರಿದ್ದರು. ಶಾಂತಮ್ಮ ಭರಮಸಾಗರ ಸ್ವಾಗತಿಸಿದರು.

ಬೆಂಗಳೂರಿನ ಕೈಲಾಶಾಶ್ರಮದ ಪೀಠಾಧಿಪತಿ ಶ್ರೀ ಜಯೇಂದ್ರ ಪುರಿ ಮಹಾಸ್ವಾಮೀಜಿ ಆಶೀರ್ವಚನ ನೀಡಿದರು. ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸಮ್ಮುಖ ವಹಿಸಿದ್ದರು.

## ಐಸಿಟಿ ಕಾಮಗಾರಿಗಳನ್ನು ಪರಿಶೀಲಿಸಿದ ಸ್ಥಾಯಿ ಸಮಿತಿ ಅಧ್ಯಕ್ಷೆ ಸವಿತಾ ಹುಲ್ಲುಮನೆ



ದಾವಣಗೆರೆ, ಫೆ. 5 - ಸ್ಮಾರ್ಟ್ ಸಿಟಿ ವತಿಯಿಂದ ಅನುಷ್ಠಾನಗೊಳಿಸಿರುವ ಐಸಿಟಿ ಕಾಮಗಾರಿಗಳ ಪರಿಶೀಲನೆಯನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಹುಲ್ಲುಮನೆ ಗಣೇಶ್ ಸ್ಮಾರ್ಟ್ ಸಿಟಿ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು.

ಈ ಕಾಮಗಾರಿಯಲ್ಲಿ ನಗರದ ಸರ್ವೈವಲೆನ್ಸ್‌ಗಾಗಿ 112 ಸ್ಥಳಗಳಲ್ಲಿ 220 ಸಿಸಿ ಟಿ.ವಿ. ಕ್ಯಾಮೆರಾಗಳನ್ನು 53 ಪಿ ಟಿ ಝೆಡ್ ಕ್ಯಾಮೆರಾ ಅಳವಡಿಸುವ ಜೊತೆಗೆ ವಿಡಿಯೋ ಸಂಸ್ಕರಣಾ ವ್ಯವಸ್ಥೆ ಇದೆ. ಸರ್ಕಲ್‌ಗಳಲ್ಲಿ ಅಡಾಪ್ಟಿವ್ ಟ್ರಾಫಿಕ್ ಸಿಗ್ನಲ್‌ಗಳನ್ನೂ ಅಳವಡಿಸಲಾಗಿದೆ. ಇದರಿಂದ ಸಿಗ್ನಲ್‌ಗಳಲ್ಲಿ ಟ್ರಾಫಿಕ್ ಆಧಾರಿತವಾಗಿ ಸಿಗ್ನಲ್‌ಗಳು ಬದಲಾಗುತ್ತವೆ.

ಪಬ್ಲಿಕ್ ಅಡ್ರೆಸ್ ಸಿಸ್ಟಮ್, ವೇರಿಯೇಬಲ್ ಮೆಸೇಜ್ ಸೈನ್ ಬೋರ್ಡ್ಸ್, ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ, ಇಂಟಲಿಜೆಂಟ್ ಟ್ರಾನ್ಸ್‌ಪೋರ್ಟ್, ಸಿಸ್ಟಮ್ ಸೇರಿದಂತೆ ಅನೇಕ, ಟ್ರಾಫಿಕ್ ಮತ್ತು ನಗರದ ಸೆಕ್ಯುರಿಟಿ ಆಧಾರಿತ ಕಂಟ್ರೋಲ್‌ಗಾಗಿ ಕಮಾಂಡ್ ಕಂಟ್ರೋಲ್ ರೂಮ್ ಸ್ಥಾಪಿಸಲಾಗಿದ್ದು, ನಗರದ ಭದ್ರತೆ ದೃಷ್ಟಿಯಿಂದ ಉತ್ತಮ ಯೋಜನೆಯಾಗಿದ್ದು, ಇದರ ಸರಿಯಾದ ನಿರ್ವಹಣೆ ಮತ್ತು ಬಳಕೆಗೆ ಹೆಚ್ಚು ಒತ್ತು ಕೊಡಲು ಅಧಿಕಾರಿಗಳಿಗೆ ಸೂಚಿಸಿದರು.

# ಮಲೇಬೆನ್ನೂರಿನಲ್ಲಿ ಸಂಭ್ರಮದ ಗಂಧದ ಮೆರವಣಿಗೆ

ಮಲೇಬೆನ್ನೂರು, ಫೆ.5- ಇಲ್ಲಿನ ಹಿಂದೂ - ಮುಸ್ಲಿಂ ಬಾಂಧವರ ಭಾವೈಕ್ಯತೆಯ ಸಂಕೇತವಾದ ಸೂಫಿ ಸಂತ ಹಜರತ್ ಸೈಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ಉರುಸ್ ಅಂಗವಾಗಿ ಗಂಧದ (ಸಂದಲ್) ಮೆರವಣಿಗೆ ಬುಧವಾರ ಸಂಜೆ ಪಟ್ಟಣದಲ್ಲಿ ಸಂಭ್ರಮದಿಂದ ಜರುಗಿತು.

ಮುಸ್ಲಿಂ ಧರ್ಮ ಗುರುಗಳು ಹಿಂದೂಗಳ ಮನೆಯಲ್ಲಿ ಶ್ರೀಗಂಧವನ್ನು ಪೂಜಿಸಿ ತಂದ ನಂತರ ದರ್ಗಾದಿಂದ ಆರಂಭವಾದ ಗಂಧದ ಮೆರವಣಿಗೆ ಪಟ್ಟಣದ ರಾಜ ಬೀದಿಯಲ್ಲಿ ವಿವಿಧ ಮೇಳಗಳೊಂದಿಗೆ ಸಂಚರಿಸಿತು.

ಈ ವೇಳೆ ಹಿಂದೂ - ಮುಸ್ಲಿಮರು ಗಂಧಕ್ಕೆ ಸಕ್ಕರೆ ನಿವೇದಿಸಿ, ಭಕ್ತಿ ಸಮರ್ಪಣೆ ಮಾಡಿದರು.

ಗಂಧ ಮತ್ತು ಉರುಸ್ ಅಂಗವಾಗಿ ಬುಧವಾರ ಇಡೀ ದಿನ ದರ್ಗಾ ಆವರಣದಲ್ಲಿ ಇದೇ ಮೊದಲ ಬಾರಿಗೆ ಹಮ್ಮಿಕೊಂಡಿದ್ದ ಸಾಮೂಹಿಕ ಅನ್ನ ಸಂತರ್ಪಣೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು.



ಸುನ್ನಿ ಜಾಮೀಯಾ ಮಸೀದಿಯ ಅಧ್ಯಕ್ಷ ಎಂ.ಬಿ. ಮಹಮ್ಮದ್ ಹಶಿಮ್, ಉಪಾಧ್ಯಕ್ಷ ಸೈಯದ್ ಸಾಬೀರ್, ಕಾರ್ಯದರ್ಶಿ ದಾದಾವಲಿ, ಖಜಾಂಚಿ ಯೂಸೂಫ್ ಖಾನ್ ಸೇರಿದಂತೆ ಕಮಿಟಿಯ ಇತರೆ ಪದಾಧಿಕಾರಿಗಳು ಹಾಜರಿದ್ದು, ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ನಾಳೆ ಗುರುವಾರ ಇಡೀ ದಿನ ಭಕ್ತರು ದರ್ಗಾಕ್ಕೆ ಆಗಮಿಸಿ ಭಕ್ತಿ ಸಲ್ಲಿಸಲಿದ್ದು, ರಾತ್ರಿ 9 ಕ್ಕೆ ದರ್ಗಾ ಆವರಣದಲ್ಲಿ ಪ್ರಸಿದ್ಧ ಖವ್ವಾಲರಿಂದ ಖವ್ವಾಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಉರುಸ್ ಅಂಗವಾಗಿ ದರ್ಗಾ ಹಾಗೂ ದರ್ಗಾ ರಸ್ತೆ ವಿದ್ಯುತ್ ದೀಪಾಲಂಕಾರದಿಂದ ಝಗಮಗಿ ಸುತ್ತಿದ್ದು, ಭಕ್ತರನ್ನು ಆಕರ್ಷಿಸುತ್ತಿದೆ.

## ಶ್ರೀಶೈಲ ಕ್ರೆಡಿಟ್ ಸೊಸೈಟಿ ಅಧ್ಯಕ್ಷರಾಗಿ ವೆಂಕಟರೆಡ್ಡಿ

**(1ನೇ ಪುಟದಿಂದ)** 24ರಂದು ನಡೆದ ಚುನಾವಣೆಯಲ್ಲಿ ನೂತನ ಆಡಳಿತ ಮಂಡಳಿ ಆಯ್ಕೆಯಾದ ನಂತರ ಸಂಘದ ಕಛೇರಿ ಸಭಾಂಗಣದಲ್ಲಿ ಇಂದು ನಡೆದ ಸಂಘದ ನೂತನ ನಿರ್ದೇಶಕ ಮಂಡಳಿ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ಅಧ್ಯಕ್ಷ ಸ್ಥಾನಕ್ಕೆ ಆರ್. ವೆಂಕಟರೆಡ್ಡಿ ಅವರ ಹೆಸರನ್ನು ನಿರ್ದೇಶಕ ಎನ್. ಆನಂದ್ ಸೂಚಿಸಿದಾಗ ನಿರ್ದೇಶಕ ಕೆ.ಬಿ. ನಾಗರಾಜ್ ಅನುಮೋದಿಸಿದರು. ಅದೇ ರೀತಿ ಉಪಾಧ್ಯಕ್ಷ ಸ್ಥಾನಕ್ಕೆ ವಿ.ಪ್ರಕಾಶ್ ಅವರ ಹೆಸರನ್ನು ನಿರ್ದೇಶಕ ಟಿ.ಹೆಚ್. ರಾಜಶೇಖರ್ ಸೂಚಿಸಿದರೆ ನಿರ್ದೇಶಕ ಜಿ.ಆರ್. ರಾಜಾನಾಯ್ಕ ಅನುಮೋದಿಸಿದರು.

ನಿರ್ದೇಶಕರುಗಳಾದ ಬಿಜ್ಜುಂ ವೆಂಕಟೇಶ್ವರ ರೆಡ್ಡಿ, ಮೇಕಾ ಮುರುಳೀಕೃಷ್ಣ, ಬಿ. ವೆಂಕಟೇಶ್ವರ ರೆಡ್ಡಿ, ಬಿ. ಯೋಗಿರೆಡ್ಡಿ, ಡಿ. ಬ್ರಹ್ಮಾನಂದ ರೆಡ್ಡಿ, ಶ್ರೀಮತಿ ಎ. ಶ್ರೀದೇವಿ ತಿಮ್ಮಾರೆಡ್ಡಿ, ಶ್ರೀಮತಿ ವೈ. ಸರೋಜಾ ಅವರುಗಳು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

ದಾವಣಗೆರೆ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿಯ ಶ್ರೀಮತಿ ಎಸ್. ಮಂಜುಳಾ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಸಂಘದ ಮುಖ್ಯ ಕಾರ್ಯನಿರ್ವಾಹಕ ರಾಮನಾರಾಯಣ ರೆಡ್ಡಿ, ವ್ಯವಸ್ಥಾಪಕ ಕೆ. ರಾಘವೇಂದ್ರರಾವ್ ಚುನಾವಣಾಧಿಕಾರಿಗಳಿಗೆ ಸಹಕಾರ ನೀಡಿದರು.

## ಸರ್ಕಾರಿ ಕಚೇರಿಗಳಲ್ಲಿ ಪ್ಲಾಸ್ಟಿಕ್ ಬಾಟಲ್ ಬಳಕೆ ನಿಷೇಧ

**(1ನೇ ಪುಟದಿಂದ)** ಮಾಡಬೇಕು. ಈ ಹಿಂದೆ ಸರ್ಕಾರಿ ಆದೇಶ ಹೊರಡಿಸಿದ್ದರೂ ಅದನ್ನು ಸಂಬಂಧಪಟ್ಟವರು ಪಾಲನೆ ಮಾಡುತ್ತಿಲ್ಲ, ಇನ್ನು ಮುಂದೆ ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು ಹಾಗೂ ಪ್ಲಾಸ್ಟಿಕ್ ಬಳಕೆ ಬದಲಿಗೆ ಪರಿಸರ ಸ್ನೇಹಿ ವಸ್ತುಗಳಿಂದ ತಯಾರಿಸಿದ ವಸ್ತುಗಳನ್ನು ಬಳಕೆ ಮಾಡುವಂತೆ ಸೂಚನೆ ನೀಡಲಾಗಿದೆ.

## 'ದಾವಣಗೆರೆ ಗೃಹಿಣಿ' ಸ್ಪರ್ಧೆಗೆ ಆಹ್ವಾನ

ದಾವಣಗೆರೆ, ಫೆ.5- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಕಲಾಕುಂಚ ಮಹಿಳಾ ವಿಭಾಗದಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಾರ್ಚ್ 8 ಶನಿವಾರ, 9 ಭಾನುವಾರ ದಾವಣಗೆರೆ ಗೃಹಿಣಿ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಆಸಕ್ತ ಮಹಿಳೆಯರು ಇದೇ ದಿನಾಂಕ 25 ರೊಳಗೆ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸಿ : 97438 97578.

## ಹೊನ್ನಾಳಿಯಲ್ಲಿ ಇಡಗುಂಜಿ ಗಣಪತಿ ದೇವಸ್ಥಾನ ಉದ್ಘಾಟನೆ



ಹೊನ್ನಾಳಿ, ಫೆ.5- ಪಟ್ಟಣದ ಬಾಲರಾಜ ಘಾಟನಲ್ಲಿ ಅಯ್ಯಪ್ಪ ಸ್ವಾಮಿ ಸೇವಾ ಸಂಘದಿಂದ ಇಡಗುಂಜಿ ಮಹಾ ಗಣಪತಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆಯನ್ನು ಮಂಜುನಾಥ ದೇವರು ಹಿರೇಕಲ್ಮಠ ಇವರ ಸಾನಿಧ್ಯದಲ್ಲಿ ನೆರವೇರಿಸಲಾಯಿತು.

ಅಯ್ಯಪ್ಪ ಸ್ವಾಮಿ ಸೇವಾ ಸಂಘದ ಅಧ್ಯಕ್ಷ ಡಿ.ಎಂ ಮಂಜಪ್ಪ, ಕಾರ್ಯದರ್ಶಿ ಕುಂಬಾರ ಗುಂಡಿ ಚಂದ್ರು, ಪದಾಧಿಕಾರಿಗಳಾದ ಕೆ.ವಿ ಚನ್ನಪ್ಪ, ಕೊನಕನಹಳ್ಳಿ ಮಂಜು, ಶರತ್, ಕೋರಿ ಚನ್ನೇಶ್, ನವೀನ, ಪಂಕಜಾ ಅರುಣಕುಮಾರ ಇನ್ನಿತರರಿದ್ದರು. ಸಂಘದ ಅಧ್ಯಕ್ಷ ಡಿ.ಎಂ ಮಂಜಪ್ಪ ಮಾತನಾಡಿ, ಇದೇ ದಿನಾಂಕ 12ರ ಹುಣ್ಣಿಮೆ ದಿನದಂದು ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮವನ್ನು ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿರುವುದಾಗಿ ತಿಳಿಸಿದರು.

## ಶೇ. 4ಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳಿಂದ 'ಸ್ವಯಂ' ಸಂಪೂರ್ಣ


**(1ನೇ ಪುಟದಿಂದ)** ಸ್ನಾತಕೋತ್ತರವರೆಗೆ ಸ್ವಯಂ ವೇದಿಕೆಯ ಮೂಲಕ ಕಲಿಕೆಗೆ ಅವಕಾಶ ಇದೆ. ಯಾರು ಬೇಕಾದರೂ, ಎಲ್ಲಿಂದ ಬೇಕಾದರೂ ಈ ಕೋರ್ಸ್‌ಗಳಿಗೆ ಸೇರಬಹುದಾಗಿದೆ ಈ ಕೋರ್ಸುಗಳು ಉಚಿತವಾಗಿ ಲಭ್ಯವಿವೆ.

ಈ ಬಗ್ಗೆ ಶಿಕ್ಷಣ, ಮಹಿಳೆ, ಮಕ್ಕಳು, ಯುವ ಹಾಗೂ ಕ್ರೀಡೆಗಳಿಗೆ ಸಂಬಂಧಿಸಿದ ಸಮಿತಿ ಪರಿಶೀಲನೆ ನಡೆಸಿತ್ತು.

ರಾಷ್ಟ್ರೀಯ ಡಿಜಿಟಲ್ ವಿಶ್ವವಿದ್ಯಾಲಯ (ಎನ್.ಡಿ.ಯು.) ಸರ್ವರನ್ನು ಒಳಗೊಂಡ ಹೊಂದಾಣಿಕೆಯ ಹಾಗೂ ಕಡಿಮೆ ವೆಚ್ಚದ ಶಿಕ್ಷಣವನ್ನು ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿ ನೀಡುತ್ತಿದೆ. ಆದರೆ ಸ್ವಯಂ ವೇದಿಕೆಯು ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ. 2017ರ ನಂತರ ಸ್ವಯಂ ಕೋರ್ಸ್‌ಗಳಿಗೆ ಸೇರಿದವರಲ್ಲಿ ಶೇ. 4ರಷ್ಟು ವಿದ್ಯಾರ್ಥಿಗಳು ಮಾತ್ರ ಕಲಿಕೆ ಪೂರ್ಣಗೊಳಿಸಿದ್ದಾರೆ ಎಂದು ಸಮಿತಿ ತಿಳಿಸಿದೆ.

ಇದರಲ್ಲಿ ಪಠ್ಯ ಹಳೆಯದಾಗಿದೆ, ಬೋಧನೆ ಹೊಂದಾಣಿಕೆ ರಹಿತವಾಗಿದೆ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆ ಇದೆ ಎಂದು ದೂರುಗಳಿವೆ. ಇಲ್ಲಿನ ಶಿಕ್ಷಕರಿಗೆ ಸಮರ್ಪಕ ತರಬೇತಿ ನೀಡಿಲ್ಲ, ಸ್ವಯಂ ಕಲಿಕೆಯಲ್ಲಿ ತಾಂತ್ರಿಕ ತೊಡಕುಗಳು ಇವೆ. ಆನ್‌ಲೈನ್ ಶಿಕ್ಷಣದಲ್ಲಿ ಪ್ರತಿ 15 ವಿದ್ಯಾರ್ಥಿಗೆ ಒಬ್ಬ ಶಿಕ್ಷಕ ಇರಬೇಕು. ಇಲ್ಲದೆ ಹೋದರೆ ಡಿಜಿಟಲ್ ತರಗತಿಗಳು ಕಿಕ್ಕಿರಿದು ತುಂಬಿರುತ್ತವೆ ಎಂದು ವರದಿಯಲ್ಲಿ ಹೇಳಲಾಗಿದೆ.

### ಬಸವನಕೋಟೆ ಬಿ.ಸಿ. ಮಲ್ಲಿಕಾರ್ಜುನಪ್ಪ ನಿಧನ



ಜಗಳೂರು ತಾಲ್ಲೂಕು ಬಸವನ ಕೋಟೆ ಗ್ರಾಮದ ವಾಸಿ ವೀರಶೈವ ಸಮಾಜದ ಮುಖಂಡರು, ಜಗಳೂರು ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ

**ಬಿ.ಸಿ. ಮಲ್ಲಿಕಾರ್ಜುನಪ್ಪ**

ಅವರು ದಿನಾಂಕ : 05.02.2025 ರ ಬುಧವಾರ ಸಂಜೆ 6 ಗಂಟೆಗೆ ನಿಧನರಾದರು. ಮೃತರಿಗೆ 86 ವರ್ಷ ವಯಸ್ಸಾಗಿತ್ತು.

ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 06.02.2025ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಬಸವನಕೋಟೆ ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : **98864 81947, 72596 64962**

### ಶಿರಮಗೊಂಡನಹಳ್ಳಿ ಕೋಟ್ಯಾಳ (ಕರಿಯಪ್ಪರ) ಕೆ.ಜೆ. ರೇವಣಸಿದ್ದಪ್ಪ ನಿಧನ



ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿ ಗ್ರಾಮದ ವಾಸಿ ದಿ. ಜಯ್ಯಪ್ಪ ಇವರ ಪುತ್ರ, (ಶ್ರೀಮತಿ ಸೌಭಾಗ್ಯ ಅವರ ಪತಿ)

**ಶಿರಮಗೊಂಡನಹಳ್ಳಿ ಕೋಟ್ಯಾಳ (ಕರಿಯಪ್ಪರ) ಕೆ.ಜೆ. ರೇವಣಸಿದ್ದಪ್ಪ**

ಇವರು ದಿನಾಂಕ 05.02.2025ರ ಬುಧವಾರ ರಾತ್ರಿ 11 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 73 ವರ್ಷ ವಯಸ್ಸಾಗಿತ್ತು.

ಪತ್ನಿ, ಓರ್ವ ಪುತ್ರಿ, ಸೊಸೆ, ಮೊಮ್ಮಕ್ಕಳು, ನಾಲ್ವರು ಸಹೋದರಿಯರು, ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 06.02.2025ರ ಗುರವಾರ ಸ್ವಗ್ರಾಮವಾದ ಶಿರಮಗೊಮಡನಹಳ್ಳಿ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬವರ್ಗ, ಮೊ. : 99458 57710**

### ಅಂದನೂರು ಜಯರಾಜ್ ನಿಧನ



ದಾವಣಗೆರೆ ಸಿಟಿ ವಿನೋಬನಗರ, 1 ಮೇನ್, 15ನೇ ಕ್ರಾಸ್ ಎದುರು ವಾಸು ದಿ. ಅಂದನೂರು ಶಿವಯೋಗಪ್ಪ ರವರ ( ಬಟ್ಟೆ ಅಂಗಡಿ) ದ್ವಿತೀಯ ಪುತ್ರ,

**ಅಂದನೂರು ಜಯರಾಜ್**

ಇವರು ದಿನಾಂಕ : 5.2.2025ರ ಬುಧವಾರ ಸಂಜೆ 7.15ಕ್ಕೆ ನಿಧನರಾದರು. ಮೃತರಿಗೆ 63 ವರ್ಷ ವಯಸ್ಸಾಗಿತ್ತು.

ಪತ್ನಿ, ಓರ್ವ ಪುತ್ರಿ, ಅಳಿಯ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 6.2.2025ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತರು : ಮೃತರ ಪತ್ನಿ ಶ್ರೀಮತಿ ಮಂಜುಳ ಜಯರಾಜ್, ಮಗಳು : ಶ್ರೀಮತಿ ಮೇಘನಾ, ಅಳಿಯ : ಶ್ರೀ ಸಂತೋಷ್ ಆರ್. & ಸಹೋದರರು, ಹಾಗೂ ಅಂದನೂರು ಬಂಧು-ಮಿತ್ರರು.**

**ಮೊ : 97318 07014, 91488 15480**

### ಕಾಮಾಕ್ಷಿಬಾಯಿ ನಿಧನ



ದಾವಣಗೆರೆ ಸಿಟಿ ಪಿಸಾಳೆ ಕಾಂಪೌಂಡ್ ಮೂರನೇ ಕ್ರಾಸ್ ಪಿ.ಜಿ. ಬಡಾವಣೆ ನಿವಾಸಿ ದುರುಗೋಜಿರಾವ್ ಇವರ ಧರ್ಮಪತ್ನಿ ಕಾಮಾಕ್ಷಿಬಾಯಿ (68) ಇವರು ದಿನಾಂಕ 05.02.2025ರ ಬುಧವಾರ ಸಂಜೆ 5.30 ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಮೊಮಕ್ಕಳು ಹಾಗೂ ಅಪಾರ ಬಂಧುಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.02.2025ರ ಗುರುವಾರ ಮಧ್ಯಾಹ್ನ 1ಕ್ಕೆ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

## ಅಪರಿಚಿತ ವೃದ್ಧನ ಶವ ಪತ್ತೆ

ದಾವಣಗೆರೆ, ಫೆ. 5 - ನಗರದ ಅರುಣ ಟಾಕೀಸ್ ಹತ್ತಿರ ಹಳೇ ಪಿ.ಬಿ ರಸ್ತೆಯಲ್ಲಿರುವ ಉಮಾ ಮಹೇಶ್ವರಿ ದೇವಸ್ಥಾನ ಹತ್ತಿರ ಖಾಲಿ ಜಾಗದಲ್ಲಿ ಸುಮಾರು 60 - 65 ವಯಸ್ಸಿನ ಅಪರಿಚಿತ ವ್ಯಕ್ತಿಯೊಬ್ಬನ ಮೃತ ದೇಹ ದೊರೆತಿದೆ. ಮೃತನು ಕೋಲು ಮುಖ, ಸಾಧಾರಣ ಮೈಕಟ್ಟು, ಗೋಧಿಮೈ ಬಣ್ಣದವನಾಗಿದ್ದು, ಕಪ್ಪು ಮತ್ತು ಬಿಳಿ ಮಿಶ್ರಿತ ಕೂದಲಿವೆ. ಸಂಬಂಧಪಟ್ಟ ವರು ನಗರದ ಬಡಾವಣೆ ಪೊಲೀಸ್ (9480803249, 08192-272012) ಠಾಣೆಯನ್ನು ಸಂಪರ್ಕಿಸಬಹುದು.

## ಶಿಕ್ಷಣ ನೀತಿಯಲ್ಲಿ ಸಾಕಷ್ಟು ಲೋಪಗಳು

**(1ನೇ ಪುಟದಿಂದ)** ನಮ್ಮೆಲ್ಲರ ಗುರಿಯಾಗಬೇಕು. ವಿಶ್ವವಿದ್ಯಾಲಯಗಳ ಆಡಳಿತ ವಿಚಾರದಲ್ಲೂ ಸಾಕಷ್ಟು ಸುಧಾರಣೆ ಮಾಡಬೇಕಾಗಿದೆ, ಕುಲಪತಿಗಳ ನೇಮಕ ಸೇರಿದಂತೆ ಹಲವು ವಿಷಯಗಳು ನಮ್ಮ ಮುಂದಿವೆ. ಕುಲಪತಿಗಳು ಹಾಗೂ ಶೈಕ್ಷಣಿಕ ಸಿಬ್ಬಂದಿಗಳ ನೇಮಕಾತಿಗೆ ಕನಿಷ್ಠ ಮಾನದಂಡ, ಅರ್ಹತೆಗಳನ್ನು ನಿಗದಿ ಮಾಡಬೇಕಿದೆ, ಎಲ್ಲಕ್ಕಿಂತ ಮುಖ್ಯವಾಗಿ ಉನ್ನತ ಶಿಕ್ಷಣ ವ್ಯವಸ್ಥೆ ಗಟ್ಟಿಯಾಗಬೇಕಿದೆ, ಅನೇಕ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಭಾರತೀಯರು ಉತ್ತಮ ಸ್ಥಾನಗಳನ್ನು ಅಲಂಕರಿಸಿದ್ದಾರೆ, ಜಾಗತಿಕ ಮಟ್ಟಕ್ಕೆ ನಮ್ಮ ಶಿಕ್ಷಣ ವ್ಯವಸ್ಥೆ ಬೆಳೆಯಲು ಅನೇಕ ತಜ್ಞರ ಸಲಹೆ ಉಪಯುಕ್ತವಾಗುತ್ತವೆ ಎಂದರು.

ಬೆಂಗಳೂರು, ಚೆನ್ನೈ, ಹೈದರಾಬಾದ್ ತಾಂತ್ರಿಕ ಪರಿಣಿತರ ಸೃಷ್ಟಿಯಲ್ಲಿ ಮುಂಚೂಣಿಯಲ್ಲಿವೆ, ದಕ್ಷಿಣ ಭಾರತದ ರಾಜ್ಯಗಳಿಗೆ ಸರಿಸಮಾನವಾಗಿ ಯಾರೂ ನಿಲ್ಲಲು ಸಾಧ್ಯವಿಲ್ಲ, ರಾಜ್ಯಗಳು ತಮ್ಮದೇ ಆದ ಶಕ್ತಿಗಳನ್ನು ಹೊಂದಿವೆ. ಶಿಕ್ಷಣ ಕ್ಷೇತ್ರದಲ್ಲಿನ ಅನಾನುಕೂಲತೆಗಳ ಬಗ್ಗೆ ತಿಳಿದಿದೆ, ಕರ್ನಾಟಕ ಹಾಗೂ ತೆಲಂಗಾಣಕ್ಕೆ ಹೋಲಿಸಿದಲ್ಲಿ ಮಹಾರಾಷ್ಟ್ರ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಪ್ರತ್ಯೇಕ ಮಾದರಿ ಹೊಂದಿದೆ, ಕೇಂದ್ರ ಹಾಗೂ ರಾಜ್ಯಗಳಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳು ಅಧಿಕಾರದಲ್ಲಿದ್ದಾಗ ಕುಲಪತಿ ಹಾಗೂ ಉಪಕುಲಪತಿಗಳ ವಿಚಾರದಲ್ಲಿ ತೀರ್ಮಾನ ಮಾಡುವುದು ಕಷ್ಟವಾಗುತ್ತದೆ, ಆದರೂ ನಿಭಾಯಿಸುತ್ತಿದ್ದೇವೆ ಎಂದರು.

## ಬಾಲ ಪ್ರತಿಭೆ ಆರ್ಯವರ್ಧನ್‌ಗೆ ಪ್ರಶಸ್ತಿ



ದಾವಣಗೆರೆ, ಫೆ. 5- ನಗರದ ಬಿ.ಜೆ.ಎಂ. ಸ್ಕೂಲ್ ಮತ್ತು ಜಿ.ಎನ್.ಬಿ. ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಆವರಣದಲ್ಲಿ ನಾಡಿದ್ದು ದಿನಾಂಕ 7ರ ಶುಕ್ರವಾರ ಸಂಜೆ 5 ಗಂಟೆಗೆ ಶಾಲಾ ವಾರ್ಷಿಕೋತ್ಸವ 'ಅರಿವಿನ ಉತ್ಸವ' ಕಾರ್ಯಕ್ರಮ ನಡೆಯಲಿದೆ. ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಮಹಾಸ್ವಾಮೀಜಿ ಅಧ್ಯಕ್ಷತೆಯಲ್ಲಿ 4 ವರ್ಷದ ಬಾಲ ಪ್ರತಿಭೆ ಗ್ರ್ಯಾಂಡ್ ಮಾಸ್ಟರ್ ಆರ್ಯವರ್ಧನ್ ಕೋಟಿ ಗೆ 2024-25ನೇ ಸಾಲಿನ 'ಸಂಗಮಶ್ರೀ' ಎಂಬ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

## ವಿಶ್ವಸಂಸ್ಥೆ ಮಾನವ ಹಕ್ಕುಗಳ ಸಂಘಟನೆಯಿಂದ ಅಮೆರಿಕ ಹೊರಕ್ಕೆ

ವಾಷಿಂಗ್ಟನ್, ಫೆ. 5 - ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಸಂಘಟನೆಯ ಜೊತೆ ಕಾರ್ಯನಿರ್ವಹಿಸುವುದನ್ನು ಅಮೆರಿಕ ನಿಲ್ಲಿಸಲಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಪ್ಯಾಲೆಸ್ಟೀನ್ ನಿರಾಶ್ರಿತರಿಗೆ ನೆರವು ನೀಡುವ ವಿಶ್ವಸಂಸ್ಥೆಯ ಸಂಘಟನೆಗೆ ಅನುದಾನ ತಡೆ ಮುಂದುವರೆಸುವುದಾಗಿಯೂ ಅವರು ಹೇಳಿದ್ದಾರೆ.

ವಿಶ್ವಸಂಸ್ಥೆಯ ಪ್ಯಾಲೆಸ್ಟೀನ್ ವಲಸಿಗರಿಗೆ ನೆರವು ನೀಡುವ ಸಂಸ್ಥೆಯಾದ ಯುಎನ್‌ಆರ್ ಡಬ್ಲ್ಯೂಎ ಹಮಾಸ್ ಉಗ್ರರಿಗೆ ನೆರವು ನೀಡುತ್ತಿದೆ ಹಾಗೂ 2023ರ ಅಕ್ಟೋಬರ್ 7ರಂದು ನಡೆದ ದಾಳಿಯಲ್ಲಿ ಭಾಗಿಯಾಗಿದೆ ಎಂದು ಇಸ್ರೇಲ್ ಆರೋಪಿಸಿತ್ತು. ಆನಂತರದಿಂದ ಅಮೆರಿಕ ಯುಎನ್‌ಆರ್ ಡಬ್ಲ್ಯೂಎಗೆ ನೀಡಲಾಗುತ್ತಿದ್ದ ನೆರವು ನಿಲ್ಲಿಸಿತ್ತು. ಪ್ರಧಾನಮಂತ್ರಿ ಬೆಂಜಮಿನ್ ನೇತನ್ಯಾಹು ಅವರನ್ನು ಭೇಟಿ ಮಾಡಿದ ದಿನದಂದು ಟ್ರಂಪ್ ಈ ಘೋಷಣೆಗಳನ್ನು ಮಾಡಿದ್ದಾರೆ.

ವಿಶ್ವಸಂಸ್ಥೆಯ ಸಾಂಸ್ಕೃತಿಕ ಸಂಘಟನೆಯಾದ ಯುನೆಸ್ಕೋದಿಂದ ಹೊರಬರುವ ಬಗ್ಗೆಯೂ ಪರಿಶೀಲಿಸುವುದಾಗಿ ಟ್ರಂಪ್ ಹೇಳಿದ್ದಾರೆ.

# ಗಾಜಾ ಪಟ್ಟಿ ವಶಕ್ಕೆ ತೆಗೆದುಕೊಳ್ಳುವುದಾಗಿ ಟ್ರಂಪ್ ಘೋಷಣೆ

ವಾಷಿಂಗ್ಟನ್, ಫೆ. 5 - ಗಾಜಾ ಪಟ್ಟಿಯ ಮಾಲಿಕತ್ವವನ್ನು ಅಮೆರಿಕ ಪಡೆಯಲಿದೆ ಹಾಗೂ ಅದನ್ನು ಆರ್ಥಿಕವಾಗಿ ಮರು ನಿರ್ಮಾಣ ಮಾಡಲಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದಿಢೀರ್ ಘೋಷಣೆ ಮಾಡಿದ್ದಾರೆ.

ಶ್ವೇತ ಭವನದಲ್ಲಿ ಇಸ್ರೇಲ್ ಪ್ರಧಾನಮಂತ್ರಿ ಬೆಂಜಮಿನ್ ನೇತನ್ಯಾಹು ಅವರ ಜೊತೆ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಟ್ರಂಪ್, ಗಾಜಾ ಪಟ್ಟಿಯ ಮರು ನಿರ್ಮಾಣ ಮಾಡಲಾಗುವುದು ಎಂದು ಹೇಳಿದ್ದಾರೆ. ಆದರೆ ಅಲ್ಲಿ ನೆಲೆಸಲು ಯಾರಿಗೆ ಅವಕಾಶ ನೀಡಲಾಗುವುದು ಎಂಬ ವಿವರಗಳನ್ನು ಬಹಿರಂಗಪಡಿಸಿಲ್ಲ.

ಅಮೆರಿಕವು ಗಾಜಾ ಪಟ್ಟಿಯನ್ನು ವಶಕ್ಕೆ ತೆಗೆದುಕೊಳ್ಳಲಿದೆ ಹಾಗೂ ಅಲ್ಲಿ ಕಾರ್ಯ ನಿರ್ವಹಿಸಲಿದೆ. ನಾವು ಅದರ ಮಾಲೀಕತ್ವ ಹೊಂದಲಿದ್ದೇವೆ. ಅಲ್ಲಿ ಸ್ಫೋಟಗೊಳ್ಳದೆ ಉಳಿದಿರುವ ಅಪಾಯಕಾರಿ ಬಾಂಬ್‌ಗಳನ್ನು ತೆರವುಗೊಳಿಸುತ್ತೇವೆ. ಆ ಜಾಗವನ್ನು ಸ್ವಚ್ಛ ಮಾಡುತ್ತೇವೆ ಹಾಗೂ ಅವಶೇಷಗಳಿಂದ ತೆರವುಗೊಳಿಸುತ್ತೇವೆ ಎಂದು ಟ್ರಂಪ್ ಹೇಳಿದ್ದಾರೆ.

ಈ ಪ್ರದೇಶದ ಆರ್ಥಿಕ ಅಭಿವೃದ್ಧಿಯಿಂದ ಅಪಾರ ಅವಕಾಶಗಳು ಸೃಷ್ಟಿಯಾಗಲಿವೆ. ಅಲ್ಲಿ ಉದ್ಯೋಗ ದೊರೆಯಲಿದೆ ಹಾಗೂ ಜನರಿಗೆ ಮನೆಗಳು ಸಿಗಲಿವೆ. ಅಲ್ಲಿ ನೈಜ ಉದ್ಯೋಗ ಸೃಷ್ಟಿಯಾಗುವುದು ಇಡೀ ಪ್ರದೇಶದಲ್ಲಿ ಬದಲಾವಣೆ ತರಲಿದೆ ಎಂದು ಟ್ರಂಪ್ ಹೇಳಿದ್ದಾರೆ.

ಪ್ಯಾಲೆಸ್ಟೀನ್ ಜನರಿಗೆ ಬೇರೆ ಆಯ್ಕೆ ಇಲ್ಲದ ಕಾರಣ ಜನರು ಅಲ್ಲಿಗೆ ಮರಳಲು ಬಯಸುತ್ತಿದ್ದಾರೆ. ಪ್ರಸಕ್ತ ಗಾಜಾ ಅವಶೇಷವಲ್ಲದೆ ಬೇರೇನೂ ಅಲ್ಲ. ಬಹುತೇಕ ಅಲ್ಲಿನ



ಪ್ರತಿಯೊಂದು ಕಟ್ಟಡ ಕುಸಿದಿದೆ. ಕಾಂಕ್ರೀಟ್ ಅವಶೇಷಗಳ ನಡುವೆ ಅಪಾಯಕಾರಿ ಪರಿಸ್ಥಿತಿಯಲ್ಲಿ ಅವರು ಬದುಕುತ್ತಿದ್ದಾರೆ. ಇದರ ಬದಲು ಅವರು ಸುಂದರವಾದ ಮನೆಗಳಲ್ಲಿ ಇರಬಹುದು ಹಾಗೂ ಸುರಕ್ಷಿತವಾಗಿ ಇರಬಹುದು. ಶಾಂತಿ ಹಾಗೂ ನೆಮ್ಮದಿಯೊಂದಿಗೆ ಇರಬಹುದು ಎಂದು ಟ್ರಂಪ್ ಹೇಳಿದ್ದಾರೆ.

ಗಾಜಾಗೆ ಅಮೆರಿಕದ ಸೈನ್ಯ ಕಳಿಸುವ ಸಾಧ್ಯತೆಯ ಬಗ್ಗೆ ಉತ್ತರಿಸಿರುವ ಅವರು, ನಾವು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲಿದ್ದೇವೆ. ಈ ಪ್ರದೇಶವನ್ನು ವಶಕ್ಕೆ ತೆಗೆದು ಕೊಳ್ಳಲು ಅಮೆರಿಕ ಯೋಜನೆ ಹೊಂದಿದೆ ಎಂದರು.

ಗಾಜಾ ಪಟ್ಟಿಯು ಸಾವು ಹಾಗೂ ವಿನಾಶದ ಸಂಕೇತವಾಗಿದೆ. ಈಗ ಅದು ನರಕದ ಬಾಗಿಲಿನಂತಿದೆ. ಈಗ ಅಲ್ಲಿ ಬದುಕುತ್ತಿರುವವರು ನತದೃಷ್ಟರಾಗಿದ್ದಾರೆ. ಸಾಕಷ್ಟು ದಿನಗಳಿಂದ ಈ ಪ್ರದೇಶ ಅದೃಷ್ಟ ಹೀನವಾಗಿದೆ ಎಂದು ಅಮೆರಿಕದ ಅಧ್ಯಕ್ಷ ಹೇಳಿದ್ದಾರೆ

ನಾವು ದೀರ್ಘಕಾಲದ ಗಾಜಾ ಪಟ್ಟಿಯ ಮಾಲೀಕತ್ವದ ಬಗ್ಗೆ ಯೋಚಿಸುತ್ತಿದ್ದೇವೆ. ಇದರಿಂದ ಮಧ್ಯಪ್ರಾಚ್ಯದ ಈ ಭಾಗ ಹಾಗೂ ಇಡೀ ಮಧ್ಯಪ್ರಾಚ್ಯದಲ್ಲಿ ಹೆಚ್ಚಿನ ಸ್ಥಿರತೆ ದೊರೆಯಲಿದೆ ಎಂದವರು ತಿಳಿಸಿದ್ದಾರೆ.

ಈ ಬಗ್ಗೆ ಗಂಭೀರವಾಗಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳಲಾಗಿದೆ. ನಾನು ಮಾತನಾಡಿದ ಪ್ರತಿಯೊಬ್ಬರು ಈ ಪ್ರದೇಶದಲ್ಲಿ ಅಮೆರಿಕ ಮಾಲೀಕತ್ವದ ಜಾಗ ಹೊಂದುವುದನ್ನು ಬಯಸಿದ್ದಾರೆ. ಈ ಪ್ರದೇಶದ ಅಭಿವೃದ್ಧಿ ಹಾಗೂ ಸಾವಿರಾರು ಉದ್ಯೋಗ ಸೃಷ್ಟಿಸುವುದನ್ನು ಬಯಸಿದ್ದಾರೆ ಎಂದು ಟ್ರಂಪ್ ತಿಳಿಸಿದ್ದಾರೆ.

ಗಾಜಾದಿಂದ ಇಸ್ರೇಲ್‌ಗೆ ಮತ್ತೆ ಬೆದರಿಕೆ ಆಗ ಬಾರದು ಎಂಬುದನ್ನು ಖಚಿತಪಡಿಸುವುದು ನಮ್ಮ ಗುರಿಯಾಗಿದೆ ಎಂದು ನೇತನ್ಯಾಹು ಹೇಳಿದರು.

### ಅಮೆರಿಕದ ಗಾಜಾ ವಶಕ್ಕೆ ಮಿತ್ರರಿಂದಲೇ ವಿರೋಧ

ದುಬೈ, ಫೆ. 5 - ಗಾಜಾ ಪಟ್ಟಿಯನ್ನು ಅಮೆರಿಕ ತನ್ನ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಸ್ತಾಪಿಸಿರುವುದಕ್ಕೆ ಮಿತ್ರ ದೇಶಗಳಿಂದಲೇ ವಿರೋಧ ವ್ಯಕ್ತವಾಗಿದೆ.

ಶ್ವೇತ ಭವನದಲ್ಲಿ ಇಸ್ರೇಲ್ ಪ್ರಧಾನಮಂತ್ರಿ ಬೆಂಜಮಿನ್ ನೇತನ್ಯಾಹು ಅವರ ಜೊತೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದ ಟ್ರಂಪ್, ಗಾಜಾಪಟ್ಟಿಯನ್ನು ಅಮೆರಿಕ ವಶಕ್ಕೆ ತೆಗೆದುಕೊಳ್ಳಬೇಕು ಹಾಗೂ ಅದರ ಮರು ನಿರ್ಮಾಣ ಮಾಡಬೇಕು ಎಂದು ಹೇಳಿದ್ದರು.

ಇಸ್ರೇಲ್ ಹಾಗೂ ಹಮಾಸ್ ಉಗ್ರರ ನಡುವೆ ಡೋಲಾಯಮಾನವಾದ ಕದನ ವಿರಾಮ ಏರ್ಪಟ್ಟಿರುವ ಮಧ್ಯೆ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

ಮಧ್ಯ ಪ್ರಾಚ್ಯದಲ್ಲಿ ಅಮೆರಿಕದ ಮಿತ್ರ ದೇಶಗಳಾಗಿರುವ ಈಜಿಪ್ಟ್, ಜೋರ್ಡಾನ್ ಹಾಗೂ ಇತರೆ ದೇಶಗಳು ಈ ಪ್ರಸ್ತಾಪವನ್ನು ಈಗಾಗಲೇ ವಿರೋಧಿಸಿವೆ.

ಇನ್ನೊಂದು ಮಿತ್ರ ದೇಶವಾದ ಸೌದಿ ಅರೇಬಿಯಾ ಸಹ ಈ ಪ್ರಸ್ತಾಪವನ್ನು ವಿರೋಧಿಸಿದ್ದು, ಸ್ವತಂತ್ರ ಪ್ಯಾಲೆಸ್ಟೀನ್ ದೇಶ ರಚಿಸಬೇಕು ಎಂಬ ಬೇಡಿಕೆಗೆ ಬದ್ಧವಾಗಿರುವುದಾಗಿ ಹೇಳಿದೆ.

ಆಸ್ಟ್ರೇಲಿಯಾದ ಪ್ರಧಾನಮಂತ್ರಿ ಆಂಥೋನಿ ಆಲ್ಬಾನೀಸ್ ಮಾತನಾಡಿ, ಎರಡು ದೇಶಗಳ ಸೂತ್ರವನ್ನು ಬೆಂಬಲಿಸುತ್ತಾ ಬಂದಿದ್ದೇವೆ. ಈ ನಿಲುವು ಬದಲಾಗಿಲ್ಲ ಎಂದಿದ್ದಾರೆ.

ಅಮೆರಿಕದಲ್ಲಿ ವಿರೋಧ ಪಕ್ಷವಾಗಿರುವ ಡೆಮೋಕ್ರಾಟ್‌ಗಳು ಟ್ರಂಪ್ ಪ್ರಸ್ತಾಪವನ್ನು ವಿರೋಧಿಸಿದ್ದಾರೆ.

ಪ್ಯಾಲೆಸ್ಟೀನ್ ಜನರೂ ಸಹ ಟ್ರಂಪ್ ಪ್ರಸ್ತಾಪದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

1948ರಲ್ಲಿ ನಡೆದ ಸಮರದ ನಂತರ ಸುಮಾರು 7 ಲಕ್ಷ ಜನರು ಸ್ಥಳಾಂತರಗೊಂಡಿದ್ದರು. ಅವರು ತಮ್ಮ ತವರು ನೆಲೆಗಳಿಗೆ ಮರಳಲು ಸಾಧ್ಯವಾಗಿಲ್ಲ.

ಈಗ ಮತ್ತೆ ಸ್ಥಳಾಂತರಗೊಳಿಸಿದರೆ ಶಾಶ್ವತವಾಗಿ ತಮ್ಮ ನೆಲೆಗಳಿಗೆ ಮರಳಲು ಸಾಧ್ಯವಾಗದೇ ಇರಬಹುದು ಎಂದು ಗಜಾ ಪಟ್ಟಿಯಲ್ಲಿರುವ ಜನರು ಕಳವಳಗೊಂಡಿದ್ದಾರೆ.

# ಡೀಪ್‌ಸೀಕ್ ಎಐ ಅಲೆಯಲ್ಲಿ ಭಾರತಕ್ಕೂ ಮುನ್ನಡೆಯುವ ದಾರಿ

ನವದೆಹಲಿ, ಫೆ. 5 - ಡೀಪ್‌ಸೀಕ್ ಎ.ಐ. ಮಾದರಿಯ ಯಶಸ್ಸಿನ ಅಲೆಯಲ್ಲಿ ಭಾರತ ಸಹ ತನ್ನದೇ ಆದ ಎ.ಐ. (ಕೃತಕ ಬುದ್ಧಿವಂತಿಕೆ) ದಾರಿ ಕಂಡುಕೊಳ್ಳಬಹುದು ಹಾಗೂ ಹೊಸ ಸಂಶೋಧನೆಗಳನ್ನು ಮಾಡಬಹುದು ಎಂದು ಎಕ್ಸೆಲ್ ವೆಂಚರ್ ಕ್ಯಾಪಿಟಲ್ ಉದ್ಯಮದ ಸಹಭಾಗಿ ಪ್ರಿಯಾಂಕ್ ಸ್ವರೂಪ್ ಹೇಳಿದ್ದಾರೆ.

ಡೀಪ್‌ಸೀಕ್ ಈಗ ವಿಶ್ವದಾದ್ಯಂತ ಆಸಕ್ತಿ ಪಡೆದುಕೊಂಡಿದೆ. ಬೃಹತ್ ಭಾಷಾ ಮಾದರಿ (ಎಲ್‌ಎಲ್‌ಎಂ) ಅನ್ನು ಕಡಿಮೆ ವೆಚ್ಚದಲ್ಲಿ ರೂಪಿಸಿರುವುದು ಚರ್ಚೆಗೆ ಕಾರಣವಾಗಿದೆ.

ಆದರೆ, ಈ ಮಾದರಿಯ ಆಳವಾದ ಪರಿಶೀಲನೆ ನಡೆಸಿದಾಗ ಹಲವಾರು ಕೊರತೆಗಳು ಕಂಡುಬಂದಿವೆ. ಸರಳ ತರ್ಕ, ಮಾಹಿತಿ ಆಧರಿಸಿ ವಿಷಯ ರೂಪಿಸುವುದು, ರಾಜಕೀಯ ಅಂಶಗಳು ಸೇರಿದಂತೆ ಹಲವಾರು ಕೊರತೆಗಳು ಕಂಡುಬಂದಿವೆ ಎಂದು ಸ್ವರೂಪ್ ಹೇಳಿದ್ದಾರೆ.

ಆದರೂ, ಈ ಬೆಳವಣಿಗೆಯು ಆವಿಷ್ಕಾರ ಎಂಬುದು ಕೆಲವರಿಗೆ ಮಾತ್ರ ಸೀಮಿತವಾಗಿಲ್ಲ, ಪ್ರತಿಯೊಂದು ದೇಶ ತನ್ನದೇ ಆದ ಎಐ ಮಾದರಿ ಹೊಂದಬಹುದು ಎಂಬುದನ್ನು ತೋರಿಸುತ್ತದೆ ಎಂದು ಸ್ವರೂಪ್ ತಿಳಿಸಿದ್ದಾರೆ.

ಸಾಂಪ್ರದಾಯಿಕ ಮಾದರಿಗಿಂತ ನೂರಾರು ಪಟ್ಟು ಕಡಿಮೆ ವೆಚ್ಚದಲ್ಲಿ ಮಾದರಿಗಳನ್ನು ರೂಪಿಸಬಹುದು ಎಂದು ಕಂಪನಿಯೊಂದು ಹೇಳಿದಾಗ ಅದು ಹೊಸ ಸಾಧ್ಯತೆಗಳಿಗೆ ಅವಕಾಶ ಮಾಡಿಕೊಡುತ್ತದೆ. ಈ ವಿಷಯಗಳನ್ನು ಕಡೆಗಣಿಸಲು ಸಾಧ್ಯವಾಗದು ಎಂದವರು ಹೇಳಿದ್ದಾರೆ.

ಕೃತಕ ಬುದ್ಧಿವಂತಿಕೆಗೆ ಸಂಬಂಧಿಸಿದಂತೆ ಮೂಲಭೂತ ಸಂಶೋಧನೆಗೆ ಅವಕಾಶ ಇದೆ ಎಂಬುದನ್ನು ಡೀಪ್‌ಸೀಕ್ ಹಾಗೂ ಅಲಿಬಾಬಾದ ಎಐ ಮಾದರಿಯಾದ ಕ್ವೆನ್ ತೋರಿಸುತ್ತಿವೆ ಎಂದು ಸ್ವರೂಪ್ ತಿಳಿಸಿದ್ದಾರೆ.

ಅಂತಿಮವಾಗಿ ಡೀಪ್‌ಸೀಕ್‌ಗೆ ಇನ್ನಷ್ಟು ಬೆಳವಣಿಗೆ ಅಗತ್ಯತೆ ಇರಬಹುದು. ಆದರೆ ಅದರ ದೊಡ್ಡ ಸಾಧನೆ ಎಂದರೆ, ಕಡಿಮೆ ವೆಚ್ಚದಲ್ಲಿ ಮಾದರಿಗಳನ್ನು ರೂಪಿಸಬಹುದು ಎಂಬುದನ್ನು ತೋರಿಸಿಕೊಟ್ಟಿರುವುದಾಗಿದೆ ಎಂದು ಸ್ವರೂಪ್ ಹೇಳಿದ್ದಾರೆ.

ಭಾರತ ಎಐ ಮೂಲಭೂತ ಮಾದರಿಗಳನ್ನು ರೂಪಿಸುವ ಪ್ರಯತ್ನ ಸಹ ಮಾಡಬಾರದು ಎಂದು ಓಪನ್ ಎ.ಐ. ಮುಖ್ಯಸ್ಥ ಸ್ಯಾಮ್ ಆಲ್ಟ್‌ಮ್ಯಾನ್ ಹೇಳಿದ್ದರು. ಆದರೆ ಡೀಪ್‌ಸೀಕ್ ಮಾದರಿಯ ವೆಚ್ಚವನ್ನು ನೂರಾರು ಪಟ್ಟು ಕಡಿಮೆ ಮಾಡಿರುವುದಾಗಿ ಹೇಳಿದಾಗ ಅದು ಜಗತ್ತಿಗೆ ಹೊಸ ಸಾಧ್ಯತೆಯ ಬಾಗಿಲು ತೆರೆಯುತ್ತದೆ ಎಂದು ಸ್ವರೂಪ್ ಹೇಳಿದ್ದಾರೆ.



ಎಕ್ಸೆಲ್ ವೆಂಚರ್ ಕ್ಯಾಪಿಟಲ್‌ನ ಪ್ರಿಯಾಂಕ್ ಸ್ವರೂಪ್

ಇದಕ್ಕೆ ಬಾಹ್ಯಾಕಾಶ ವಲಯ ಸಹ ಉದಾಹರಣೆಯಾಗಿದೆ. ಮುಂಚೂಣಿ ದೇಶಗಳು ಖರ್ಚು ಮಾಡುವ ಹಣಕ್ಕಿಂತ ಅತಿ ಕಡಿಮೆ ದರದಲ್ಲಿ ವೆಚ್ಚದಲ್ಲಿ ಭಾರತ ಬಾಹ್ಯಾಕಾಶ ವಲಯದ ಸಾಧನೆ ಮಾಡಿದೆ. ಅಮೆರಿಕದ ಬಾಹ್ಯಾಕಾಶ ಸಂಸ್ಥೆಯಾದ ನಾಸಾ ಮಂಗಳಯಾನಕ್ಕೆ ಮಾಡಿದ ವೆಚ್ಚದ ಕೇವಲ ಶೇ. 3ರಷ್ಟರಲ್ಲಿ ಭಾರತದ ಇಸ್ರೋ ಮಂಗಳಯಾನ ಕೈಗೊಂಡಿತ್ತು ಎಂದವರು ಹೇಳಿದ್ದಾರೆ.

ಓಪನ್ ಸೋರ್ಸ್ ಸ್ವರೂಪದ ಎಲ್‌ಎಲ್‌ಎಂ ಮೂಲಕ ಎಐ ಮಾದರಿಗಳ ವೆಚ್ಚ ಇನ್ನಷ್ಟು ಕಡಿಮೆಯಾಗಲಿದೆ. ಇದರಿಂದ ಆವಿಷ್ಕಾರ ಇನ್ನಷ್ಟು ಉತ್ತೇಜನ ಪಡೆಯಲಿದೆ ಎಂದವರು ಅಭಿಪ್ರಾಯಪಟ್ಟಿದ್ದಾರೆ.

ನಾವು ಕೇವಲ ಡೀಪ್‌ಸೀಕ್ ಯಶಸ್ಸನ್ನು ಮರು ಸೃಷ್ಟಿಸಬೇಕಿಲ್ಲ. ಸೂಕ್ತ ಹೂಡಿಕೆ ಹಾಗೂ ಸರಿಯಾದ ಮಾರ್ಗದ ಮೂಲಕ ಭಾರತ ಈ ಹಂತವನ್ನು ದಾಟಿ ಸಾಗಬಲ್ಲದು ಹಾಗೂ ಹೊಸ ಸಂಶೋಧನೆಗಳನ್ನು ಮಾಡಬಲ್ಲದು ಎಂದು ಸ್ವರೂಪ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

1960ರ ಸಮಯದಲ್ಲಿ ಭಾರತ ಸೆಮಿಕಂಡಕ್ಟರ್ ವಲಯದ ಮೊದಲ ಅವಕಾಶ ಕಳೆದುಕೊಂಡಿತ್ತು. ನಂತರ ಎಲೆಕ್ಟ್ರಾನಿಕ್ಸ್ ವಸ್ತುಗಳ ಉತ್ಪಾದನೆಯ ಅವಕಾಶ ಕಳೆದುಕೊಂಡಿತ್ತು. ಈಗ ಚಿಪ್ ಫ್ಯಾಬ್ರಿಕೇಷನ್ ವಲಯದಲ್ಲಿ ಭಾರತದ ಕುಶಲ ಇಂಜಿನಿಯರ್‌ಗಳು ಶ್ರಮಿಸುತ್ತಿದ್ದಾರೆ. ಈ ಹಂತದಲ್ಲಿ ನಾವು ಕೃತಕ ಬುದ್ಧಿವಂತಿಕೆಯ ಅವಕಾಶ ಕಳೆದುಕೊಳ್ಳಬಾರದು ಎಂದವರು ಅಭಿಪ್ರಾಯಪಟ್ಟಿದ್ದಾರೆ.

ಭಾರತವನ್ನು ಜಾಗತಿಕ ಹಂತದ ವೇಗಕ್ಕೆ ತಲುಪಿಸಲು ಸರ್ಕಾರ ಸಾಕಷ್ಟು ನೆರವು ನೀಡಬೇಕಿದೆ. ನಮ್ಮಲ್ಲಿ ಜ್ಞಾನವಿದೆ, ಆದರೆ ಬಂಡವಾಳದ ಅಗತ್ಯವಿದೆ. ಎಐ ಯೋಜನೆಗಾಗಿ ಸರ್ಕಾರ 1.2 ಶತಕೋಟಿ ಡಾಲರ್ ಗಳಷ್ಟು ಹೂಡಿಕೆ ಮಾಡುವ ಅಗತ್ಯವಿದೆ ಎಂದವರು ಅಭಿಪ್ರಾಯಪಟ್ಟಿದ್ದಾರೆ.

ಪ್ರಸಕ್ತ ಐದಾರು ಬಿಗ್ ಟೆಕ್ ಕಂಪನಿಗಳು ಇಡೀ ತಂತ್ರಜ್ಞಾನದ ಅಡಿಪಾಯವಾಗಿದೆ. ಇದರ ಆಧಾರದ ಮೇಲೆ ಲಕ್ಷಾಂತರ ಇತರರು ಕಾರ್ಯನಿರ್ವಹಿಸುತ್ತಿದ್ದಾರೆ. ಅದೇ ರೀತಿ ಎಐ ಸಹ ಅಡಿಪಾಯ ನೀಡಲಿದೆ. ಇಂತಹ ಅಡಿಪಾಯ ಸೃಷ್ಟಿ ಎಲ್ಲರಿಂದಲೂ ಸಾಧ್ಯವಿಲ್ಲ. ದೊಡ್ಡ ಉದ್ಯಮಿಗಳು ಹಾಗೂ ಹೂಡಿಕೆಗಳಿಂದ ಮಾತ್ರ ಇದು ಸಾಧ್ಯ ಎಂದವರು ಹೇಳಿದ್ದಾರೆ.

## ಶಿವ ಸೊಸೈಟಿ ಚುನಾವಣೆ : 9 ಕ್ಷೇತ್ರದಲ್ಲಿ ಅವಿರೋಧ ಆಯ್ಕೆ, 6 ಕ್ಷೇತ್ರಕ್ಕೆ ಚುನಾವಣೆ



**ಹೊನ್ನಾಳಿ**

ಹೊನ್ನಾಳಿ, ಫೆ.5- ಶಿವ-ಕೋ ಸೊಸೈಟಿಯ 15 ಕ್ಷೇತ್ರಗಳಲ್ಲಿ 9 ನಿರ್ದೇಶಕರ ಅವಿರೋಧ ಆಯ್ಕೆ ಮಾಡುವಲ್ಲಿ ಸಾದು ಸಮಾಜದ ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕು ಅಧ್ಯಕ್ಷರು ಹಾಗೂ ಮುಖಂಡರ ನೇತೃತ್ವದ ಸಭೆಯು ಯಶಸ್ವಿಯಾಗಿದೆ.

ಉಳಿದ 6 ಕ್ಷೇತ್ರಗಳ 19 ಅಭ್ಯರ್ಥಿಗಳು ಚುನಾವಣೆ ಕಣದಲ್ಲಿದ್ದು, ಇದೇ ದಿನಾಂಕ 9ರ ಭಾನುವಾರ ಮೃತ್ಯುಂಜಯ ಪದವಿ ಕಾಲೇಜಿನಲ್ಲಿ ಮತದಾನ ನಡೆಯಲಿದೆ.

9 ಅಭ್ಯರ್ಥಿಗಳು ಕ್ಷೇತ್ರವಾರು ಆಯ್ಕೆಗೊಂಡಿದ್ದು, (ಅರಕೆರೆ) ಬಿ.ಜಿ ಶಿವಮೂರ್ತಿ, (ಕೂಲಂಬಿ) ಎಂ.ಜಿ ಲೋಕೇಶ್, (ಗೋವಿನಕೋವಿ) ಮಂಜುಳ, (ನ್ಯಾಮತಿ) ಗದ್ದಿಗೇ ಶಾಚಾರ ಪ.ಜಾ, (ಸಾಲಬಾಳು) ಗೋಪಾಲನಾಯ್ಕ, ಪ.ಪಂ (ಬೆಲೆಮಲ್ಲೂರು) ಶಿವಾನಂದಪ್ಪ, (ಸವಳಂಗ) ಟಿ. ಚಂದ್ರಪ್ಪ, (ಅರಬಗಟ್ಟೆ) ಎ.ಜಿ ಪ್ರಕಾಶ, (ಹೊನ್ನಾಳಿ) ಬಿ.ಪಿ ರಂಗನಾಥ ಇವರೆಲ್ಲರೂ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಕುಂದೂರು ಬೆನಕನಹಳ್ಳಿ, ಸಾಸ್ವೇಹಳ್ಳಿ, ಚೀಲೂರು, ಸುರಹೊನ್ನೆ, ಬೆಳಗುತ್ತಿ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ ಎಂದು ಕಾರ್ಯದರ್ಶಿ ರುದ್ರೇಶ ತಿಳಿಸಿದ್ದಾರೆ.

# ನೋಂದಣಿ, ಮುದ್ರಾಂಕ ಕಚೇರಿಗೆ ಬಿಜೆಪಿ ನಿಯೋಗ ಭೇಟಿ



ದಾವಣಗೆರೆ, ಫೆ.5- ನಗರದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಚೇರಿಯಲ್ಲಿ ಕಾವೇರಿ-2 ತಂತ್ರಾಂಶದಲ್ಲಿ ತಾಂತ್ರಿಕ ದೋಷ ಉಂಟಾಗುತ್ತಿರುವ ಹಿನ್ನೆಲೆ ಆಸ್ತಿ ನೋಂದಣಿಗಾಗಿ ಬರುವ ಜನರ ಪರದಾಟ ಮನಗಂಡ ಜಿಲ್ಲಾ ಬಿಜೆಪಿಯ ಪದಾಧಿಕಾರಿಗಳು ನಗರದ ಸಬ್ ರಿಜಿಸ್ಟ್ರಾರ್ ಕಚೇರಿಗೆ ಇಂದು ಭೇಟಿ ನೀಡಿದ್ದರು.

**ಕಾವೇರಿ ತಂತ್ರಾಂಶ -2ರ ದೋಷ ಸರಿಪಡಿಸದಿದ್ದರೆ ಸರ್ಕಾರ ವಿರುದ್ಧ ಹೋರಾಟ ಅನಿವಾರ್ಯ**

ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್. ರಾಜಶೇಖರ್ ನಾಗಪ್ಪ ಅವರ ನೇತೃತ್ವದ ನಿಯೋಗವು ಅಲ್ಲಿನ ವಸ್ತು ಸ್ಥಿತಿ ಅಧ್ಯಯನ ನಡೆಸಿ ಸಾರ್ವಜನಿಕರು ಹಾಗೂ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಎನ್.ರಾಜಶೇಖರ ನಾಗಪ್ಪ ಅವರು, ಕಾವೇರಿ ತಂತ್ರಾಂಶ ನಿರ್ವಹಣೆ ಮಾಡುತ್ತಿರುವ ಸಂಸ್ಥೆಗೆ, ಪಾವತಿಸಬೇಕಾದ 660 ಕೋಟಿ ಹಣವನ್ನು ರಾಜ್ಯ ಸರ್ಕಾರ ತಡೆಹಿಡಿದಿದ್ದರಿಂದ ಇಂತಹ ಸಮಸ್ಯೆ ಎದುರಾಗುತ್ತಿದೆ ಎಂಬ ಮಾಹಿತಿ ತಿಳಿದು ಬಂದಿದೆ ಎಂದು ಆರೋಪಿಸಿದರು.

ನಾವು ತಿಳಿದ ಮಾಹಿತಿ ಪ್ರಕಾರ ಇ-ಖಾತಾ ವೆಬ್‌ಸೈಟ್ ನಿರ್ವಹಿಸುವ ಸಂಸ್ಥೆ ಮತ್ತು ರಿಜಿಸ್ಟ್ರೇಷನ್ ನಿರ್ವಹಣೆ ಮಾಡುವ ತಂತ್ರಾಂಶದ ಸಂಸ್ಥೆಯೇ ಬೇರೆ-ಬೇರೆ. ಆದರೆ ಅಧಿಕಾರಿಗಳು ಇ-ಖಾತಾ ಮತ್ತು ರಿಜಿಸ್ಟ್ರೇಷನ್ ಇವೆರಡನ್ನು ಜೋಡನೆ ಮಾಡಿದ್ದರಿಂದ ತಾಂತ್ರಿಕ ದೋಷ ಎದುರಾಗುತ್ತಿದೆ ಎಂದು ಸಬೂಬು ಹೇಳುತ್ತಿದ್ದಾರೆ ಎಂದು ದೂರಿದರು.

ರಾಜ್ಯದಲ್ಲಿ ಪ್ರತಿದಿನ 7ರಿಂದ 8ಸಾವಿರದಷ್ಟು ರಿಜಿಸ್ಟ್ರೇಷನ್ ಆಗಬೇಕಿತ್ತು. ಆದರೆ ಕಳೆದ

> ನಿಜವಾಗಲೂ ಸರ್ವರ್ ಸಮಸ್ಯೆ ಆಗಿದ್ದರೆ ಕೆಲವು ಗಂಟೆಗಳಲ್ಲಿ ಸರಿ ಆಗುತ್ತಿತ್ತು. ಈ ಹಿಂದೆ ಸರ್ವರ್ ಸಮಸ್ಯೆ ಎದುರಾದಾಗ 2ರಿಂದ 3ಗಂಟೆಗಳಲ್ಲಿ ಸರಿಯಾಗಿದ್ದನ್ನು ನೋಡಿದ್ದೇವೆ. ಆದರೆ ಇಲ್ಲಿ ಸರ್ವರ್ ಸಮಸ್ಯೆ ಅಲ್ಲದೆ ಬೇರೆ ತರಹದ ಸಮಸ್ಯೆ ಕಾಣುತ್ತಿದೆ.
>
> - ಎನ್.ರಾಜಶೇಖರ ನಾಗಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ

ಶನಿವಾರದಿಂದ ಈತನಕ ಕೇವಲ ಆರು ನೂರರಷ್ಟು ರಿಜಿಸ್ಟ್ರೇಷನ್ ಆಗಿವೆ. ಈ ಅವ್ಯವಸ್ಥೆಗೆ ರಾಜ್ಯ ಸರ್ಕಾರವೇ ಕಾರಣ ಎಂದು ಕಿಡಿಕಾರಿದರು.

ರಿಜಿಸ್ಟ್ರೇಷನ್ ಮಾಡಲು ಬರುವಂತಹ ಜನ ತಮ್ಮ ದಿನ ನಿತ್ಯದ ಕೆಲಸ ಬದಿಗಿಟ್ಟು ಬರುತ್ತಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಬರುವ ಆದಾಯವೂ ಕಡಿಮೆ ಆಗಿದೆ ಎಂದು ತಿಳಿಸಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಬಗ್ಗೆ ಮಾತನಾಡುವ ಯೋಗ್ಯತೆ ಕಂದಾಯ ಸಚಿವ ಕೃಷ್ಣ ಬೈರೇಗೌಡರಿಗೆ ಇಲ್ಲ. ಅವರು ತಮ್ಮ ಯೋಗ್ಯತೆಯನ್ನು ತಾವೇ ರಾಜ್ಯದ ಜನರ ಮುಂದೆ ತೋರಿಸುತ್ತಿದ್ದಾರೆ ಎಂದು ಟೀಕಿಸಿದ ಅವರು, ಕೂಡಲೇ ತಾಂತ್ರಿಕ ದೋಷ ಸರಿಪಡಿಸಿ, ರಾಜ್ಯದ ಜನರಿಗೆ ಅನುಕೂಲ ಮಾಡದೇ ಇದ್ದರೆ ಹೋರಾಟಕ್ಕೆ ದುಮುಕುತ್ತೇವೆ ಎಂದು ಸರ್ಕಾರಕ್ಕೆ ಎಚ್ಚರಿಸಿದರು.

ಈ ವೇಳೆ ಜಿಲ್ಲಾ ಬಿಜೆಪಿ ವಕ್ತಾರ ಕೊಳೇನಹಳ್ಳಿ ಬಿ.ಎಂ. ಸತೀಶ್, ಪ್ರಧಾನ ಕಾರ್ಯದರ್ಶಿ ಧನಂಜಯ ಕಡ್ಲೆಬಾಳ್, ಬಿ.ಜಿ. ಅಜಯಕುಮಾರ್, ಪಿ.ಸಿ.ಶ್ರೀನಿವಾಸ ಭಟ್, ಕಡ್ಲೆಬಾಳ್ ಬಸಣ್ಣ, ಪ್ರವೀಣ್ ಜಾಧವ್, ಹೆಚ್.ಪಿ. ವಿಶ್ವಾಸ್, ಜಯರುದ್ರಪ್ಪ ಮತ್ತಿತರರಿದ್ದರು.

# ಹರಪನಹಳ್ಳಿ: ಚುನಾವಣೆ ವಿಳಂಬ ಖಂಡಿಸಿ ನೌಕರರ ಪ್ರತಿಭಟನೆ

ಹರಪನಹಳ್ಳಿ, ಫೆ.5- ತಾಲ್ಲೂಕು ಸರ್ಕಾರಿ ನೌಕರರ ಸಂಘದ ಚುನಾವಣೆ ನಡೆಸದಿರುವುದನ್ನು ಖಂಡಿಸಿ ವಿವಿಧ ಇಲಾಖೆಯ ಸರ್ಕಾರಿ ನೌಕರರು ಪಟ್ಟಣದ ಹಳೇ ಬಸ್ ನಿಲ್ದಾಣದ ಬಳಿಯಿರುವ ಸಂಘದ ಕಚೇರಿ ಮುಂದೆ ಮೌನ ಪ್ರತಿಭಟನೆ ನಡೆಸಿದರು.

2024-29ರ ಅವಧಿಗೆ ರಾಜ್ಯ ಸರ್ಕಾರಿ ನೌಕರರ ಸಂಘದ ಚುನಾವಣೆ ಈಗಾಗಲೇ ರಾಜ್ಯದಾದ್ಯಂತ ನಡೆದು ಕಾರ್ಯಕಾರಿ ಸಮಿತಿ ರಚನೆಯಾಗಿ ಹಲವು ತಿಂಗಳುಗಳೇ ಕಳೆದಿವೆ, ಆದರೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಮಾತ್ರ ಚುನಾವಣೆ ನಡೆಸದಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರಲಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚುನಾವಣೆ ಸಂಬಂಧ ಈಗಾಗಲೇ ಹರಪನ ಹಳ್ಳಿ ತಾಲ್ಲೂಕಿನ ಎಲ್ಲಾ ಇಲಾಖೆಯ ನೌಕರರು ಸೇರಿ ಹಲವಾರು ಬಾರಿ ಹೋರಾಟಗಳನ್ನು ಮಾಡಿ, ರಾಜ್ಯ ಚುನಾವಣಾಧಿಕಾರಿಗಳು, ತಹಶೀಲ್ದಾರ ಹಾಗೂ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದ್ದಾರೆ.



ಪ್ರತಿಭಟನೆಯಲ್ಲಿ ಸರ್ಕಾರಿ ನೌಕರ ಸಂಘದ ಮಾಜಿ ಅಧ್ಯಕ್ಷ ಎಸ್.ರಾಮಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಂದೋಳ್ ಸಿದ್ದೇಶ, ಪತ್ತಿನ ಬ್ಯಾಂಕಿನ ಅಧ್ಯಕ್ಷ ಜುಂಜಪ್ಪ, ಪದ್ಮರಾಜ್ ಜೈನ್, ವೃಷಭೇಂದ್ರ, ಬಿ.ಚಂದ್ರಮೌಳಿ, ಕಾಟಿ ಹನುಮಂತಪ್ಪ, ಬಿ.ರಾಜಶೇಖರ್, ಎಂ.ಪ್ರಭು, ಪದ್ಮಲತಾ, ಪೂಜಾರ ಹನುಮಂತಪ್ಪ, ಸಾರಥಿ ಹನುಮಂತಪ್ಪ ಸೇರಿದಂತೆ ಮತ್ತಿತರರಿದ್ದರು.


## ಸಾರ್ವಜನಿಕ ಪತ್ರಿಕಾ ಪ್ರಕಟಣೆ

ನನ್ನ ಕಕ್ಷಿದಾರರಾದ ಬಿಶ್ವಜಿತ್ ವಿ.ಟಿ. ಬಿನ್ ವಿ.ಕೆ.ತಿಪ್ಪೇಸ್ವಾಮಿ ವಾಸ : ಡೋರ್ ನಂಬರ್ 1382/4, ಸರಸ್ವತಿ ನಗರ 'ಬಿ' ಬ್ಲಾಕ್, ಕೆ.ಎಸ್.ಎಸ್ ಕಾಲೇಜ್ ಹಿಂಭಾಗ, ದಾವಣಗೆರೆ ಇವರು ನೀಡಿದ ದಾಖಲೆ ಮತ್ತು ಮಾಹಿತಿಯ ಮೇರೆಗೆ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ, ದಾವಣಗೆರೆ ತಾಲೂಕು, ನಾಗನೂರು ಗ್ರಾಮದ ವಾಸಿಗಳಾದ ಕರಿಯಮ್ಮ ಕೋಂ ನಿಂಗಪ್ಪ, ನೀಲಪ್ಪ ಬಿನ್ ಸಣ್ಣ ಮೈಲಪ್ಪ, ಹಾಲಮ್ಮ ಕೋಂ ನೀಲಪ್ಪ, ಮಂಜಮ್ಮ ಬಿನ್ ನೀಲಪ್ಪ, ಸುನಿತಾ ಬಿನ್ ನೀಲಪ್ಪ, ಶ್ರುತಿ ಬಿನ್ ನೀಲಪ್ಪ, ದೀಪಾ ಬಿನ್ ನೀಲಪ್ಪ, ಗಂಗಪ್ಪ ಬಿನ್ ಸಣ್ಣ ಮೈಲಪ್ಪ, ಶ್ರೀಮತಿ ಕೊಟ್ರಮ್ಮ ಕೋಂ ಗಂಗಪ್ಪ, ಮಹಾಂತೇಶ ಬಿನ್ ಗಂಗಪ್ಪ,ರೇಖಾ ಬಿನ್ ಗಂಗಪ್ಪ, ಹನುಮಂತಪ್ಪ ಬಿನ್ ಸಣ್ಣ ಮೈಲಪ್ಪ, ಗಂಗಮ್ಮ ಕೋಂ ಹನುಮಂತಪ್ಪ, ನಿಂಗರಾಜು ಬಿನ್ ಸಣ್ಣ ಮೈಲಪ್ಪ, ಚಂದ್ರಮ್ಮ ಕೋಂ ನಿಂಗರಾಜು, ಅಂಜಿನಪ್ಪ ಬಿನ್ ಸಣ್ಣ, ಮೈಲಪ್ಪ ಲಲಿತ ಕೋಂ ಅಂಜಿನಪ್ಪ, ಇವರುಗಳು ಮೇಲ್ಕಾಣಿಸಿದ ನನ್ನ ಕಕ್ಷಿದಾರರಿಗೆ ಈ ಕೆಳ ಕಾಣಿಸಿದ ಷೆಡ್ಯೂಲ್ ಸ್ವತ್ತನ್ನು ಈ ಹಿಂದೆ ಮಾರಾಟ ಮಾಡಿ ಮುಂಗಡವಾಗಿ ಹಣವನ್ನು ಪಡೆದು ದಿ:20-07-2021 ರಂದು ಕ್ರಯದ ಕರಾರನ್ನು ಮಾಡಿಕೊಟ್ಟಿರುತ್ತಾರೆ. ಆದರೆ ಈಗ ಮೇಲ್ಕಾಣಿಸಿದ ವ್ಯಕ್ತಿಗಳು ಹಾಗೂ ಇವರ ಕುಟುಂಬದವರು ಹಾಗೂ ಇವರಿಂದ ಅಧಿಕಾರ ಪಡೆದಂತಹ ವ್ಯಕ್ತಿಗಳು ಈ ಕೆಳ ಕಾಣಿಸಿರುವ ಷೆಡ್ಯೂಲ್ ಸ್ವತ್ತನ್ನು ಬೇರೆಯವರಿಗೆ ಪರಭಾರೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬ ವಿಷಯವು, ನನ್ನ ಕಕ್ಷಿದಾರರಾದ ಗಮನಕ್ಕೆ ಬಂದಿರುತ್ತದೆ. ಆದರೆ ಈಗಾಗಲೇ ಮೇಲ್ಕಾಣಿಸಿದ ವ್ಯಕ್ತಿಗಳು ಹಾಗೂ ಅವರ ಕುಟುಂಬದವರು ನನ್ನ ಕಕ್ಷಿದಾರರಿಗೆ ಈ ಕೆಳ ಕಾಣಿಸಿದ ಪೆಡೋಲ್ ಸ್ವತ್ತಿನ ಕುರಿತು ಕ್ರಯದ ಕರಾರು ಪತ್ರವನ್ನು ಬರೆದು ಕೊಟ್ಟಿರುವುದರಿಂದ ಈ ಕೆಳಕಾಣಿಸಿದ ಪೆಡಲ್ ಸತ್ತಿನ ಕುರಿತು ವ್ಯವಹಾರ ಮಾಡಿಕೊಂಡು ವಿನಾಕಾರಣ ಯಾವುದೇ ವ್ಯಕ್ತಿಗಳು ಮೋಸಕ್ಕೆ ಒಳಗಾಗಬಾರದೆಂದು ಹಾಗೂ ನನ್ನ ಕಕ್ಷಿದಾರರು ತೆಗೆದುಕೊಳ್ಳುವ ಮುಂದಿನ ಕಾನೂನು ಕ್ರಮಗಳಿಗೆ ಬಾಧಿತರಾಗಬಾರದೆಂಬ ಉದ್ದೇಶದಿಂದ ತುರ್ತಾಗಿ ಈ ಸಾರ್ವಜನಿಕ ಪ್ರಕಟಣೆ ನೀಡುತ್ತಿದ್ದು ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ನನ್ನ ಕಕ್ಷಿದಾರರು ತಿಳಿಯಪಡಿಸುವುದೇನೆಂದರೆ, ಈ ಕೆಳಕಾಣಿಸಿರುವ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ಸಾರ್ವಜನಿಕರು, ಸ್ವತ್ತು, ಅಭಿವೃದ್ಧಿಗಾರರು ಹಾಗೂ ಇನ್ನಿತರೆ ಯಾವುದೇ ವ್ಯಕ್ತಿಗಳು ಯಾವುದೇ ರೀತಿಯ ಕರಾರು, ಉಪಕರಾರು, ಅಡಮಾನ, ಭೋಗ ಪರಭಾರೆ ಹಾಗೂ ಇನ್ನಿತರೆ ಯಾವುದೇ ರೀತಿಯ ವ್ಯವಹಾರಗಳನ್ನು ಮಾಡಬಾರದೆಂದು ಹಾಗೂ ಒಂದು ಪಕ್ಷ ಈ ಪ್ರಕಟಣೆಗೂ ಮೀರಿ ಯಾವುದೇ ವ್ಯಕ್ತಿಗಳು ಈ ಕೆಳ ಕಾಣಿಸಿರುವ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ರೀತಿಯ ವ್ಯವಹಾರ ಮಾಡಿಕೊಂಡರೂ ಸಹ ನಮ್ಮ ಕಕ್ಷಿದಾರರಿಗೆ ಅಂತಹ ವ್ಯವಹಾರ ಹಾಗೂ ದಸ್ತಾವೇಜುಗಳು ಕಾನೂನಿನ ಅಡಿಯಲಿ ಬಾಧಕವಾಗುವುದಿಲ್ಲ. ಮತ್ತು ನನ್ನ ಕಕ್ಷಿದಾರರಿಗೆ ಗೊತ್ತಿಲದ ವಿಚಾರಗಳಾಗಿತ್ತವೆ ಮತ್ತು ಅವರು ಮುಂದಿನ ಕಾನೂನಿನ ಪರಿಣಾಮ ಎದುರಿಸಬೇಕಾಗುತ್ತದೆ ತಿಳಿಯಿರಿ.

**ಷೆಡ್ಯೂಲ್:** ದಾವಣಗೆರೆ ತಾಲೂಕು, ನಾಗನೂರು ಗ್ರಾಮದ, ರಿ.ಸರ್ವೇ ನಂ. 189ರಲ್ಲಿ ನೀಲಪ್ಪ ಬಿನ್ ಸಣ್ಣ, ಮೈಲಪ್ಪ, ಗಂಗಪ್ಪ ಬಿನ್ ಸಣ್ಣ, ಮೈಲಪ್ಪ ,ಹನುಮಂತಪ್ಪ ಬಿನ್ ಸಣ್ಣ, ಮೈಲಪ್ಪ, ನಿಂಗರಾಜು ಬಿನ್ ಸಣ್ಣ, ಮೈಲಪ್ಪ ಮತ್ತು ಅಂಜಿನಪ್ಪ ಬಿನ್ ಸನ್ಯ, ಮೈಲಪ್ಪ ಇವರುಗಳ ಹೆಸರಿಗೆ ಹಾಲಿ ಖಾತೆ ಇರುವ 30 ಗುಂಟೆ ಜಮೀನು. ಇದಕ್ಕೆ **ಚೆಕ್ಕುಬಂದಿ: ಪೂರ್ವಕ್ಕೆ:** ಕಾಡಜಿ ಗಂಗಪ್ಪ ಇವರ ಜಮೀನು, **ಪಶ್ಚಿಮಕ್ಕೆ:** ಜವಾನ್ ಹನುಮಂತಪ್ಪ ಇವರ ಜಮೀನು, **ಉತ್ತರ:** ಚಾನಲ್, **ದಕ್ಷಿಣ:** ದುಂಡೇರ ಚಂದ್ರಪ್ಪ ಇವರ ಜಮೀನು.

**ಸ್ಥಳ: ದಾವಣಗೆರೆ**
**ದಿನಾಂಕ: 04-02-2025**

**ರಾಮದಾಸ್ ಎನ್. ವಕೀಲರು, ದಾವಣಗೆರೆ.**



## ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ

**ನಂ. 657/1A, ಮಂಡಿಪೇಟೆ, ದಾವಣಗೆರೆ 577 001**
Ph. : 08192 271537 email : kpsbniyamitha@yahoo.com

### ಸಾರ್ವಜನಿಕ ಮಾರಾಟದ ಸೂಚನೆ

**(ಸ್ಥಿರ ಆಸ್ತಿಗಳಿಗೆ ಮಾತ್ರ)**

ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ ದಾವಣಗೆರೆ ಶಾಖೆಗೆ ಅಡಮಾನವಿಟ್ಟಿರುವ ಈ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು 17.07.2023ರಂದು ಕಲಂ 13(4) ರ ಅನುಸಾರವಾಗಿ ಅಧಿಕೃತ ಅಧಿಕಾರಿಯು ಸ್ವಾಧೀನಪಡಿಸಿಕೊಂಡಿರುವುದರ ಕುರಿತು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಆಸಕ್ತಿಯ ಜಾರಿ ಕಾಯಿದೆ, 2002. ಈ ಸೂಚನೆಯಲ್ಲಿ ಸೂಚಿಸಲಾದ ದಿನಾಂಕ, ಸ್ಥಳ ಮತ್ತು ಸಮಯದಂದು ಸಾರ್ವಜನಿಕರಿಂದ ಟೆಂಡರ್ಗಳನ್ನು ಆಹ್ವಾನಿಸುವ ಮೂಲಕ ಅದನ್ನು ಮಾರಾಟ ಮಾಡಲಾಗುತ್ತದೆ ಮತ್ತು 'ಎಲ್ಲಿದೆಯೋ ಹಾಗೆ ಹೇಗಿದೆಯೋ ಹಾಗೆ ಇದ್ದಂತೆ' ಮತ್ತು ಕೆಳಗೆ ನಮೂದಿಸಲಾದ ನಿಯಮಗಳು ಮತ್ತು ಷರತ್ತುಗಳ ಮೇಲೆ ಕೆಳಗೆ ವಿವರಿಸಿರುವ ಸ್ಥಿರ ಆಸ್ತಿಗಳಿಗಾಗಿ ಸಾರ್ವಜನಿಕರಿಂದ ಮುಚ್ಚಿದ ಕವರ್‌ಗಳಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಈ ಸೂಚನೆಯನ್ನು ಸಾಲಗಾರರಿಗೆ ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು 2002 ರ ನಿಯಮ (8) ರ ಉಪ-ನಿಯಮ (6) ಅಡಿಯಲ್ಲಿ ನೋಟಿಸ್ ಎಂದು ಪರಿಗಣಿಸಬೇಕು.

**[ಎ] ಸಾಲಗಾರರ ಹೆಸರು ಮತ್ತು ವಿಳಾಸ :** ಶ್ರೀಮತಿ ಶಾಂತಮ್ಮ ಪಿ.ಎಸ್. ಬಿನ್ ಪೂಜಾರ್ ಸಿದ್ದಪ್ಪ, ಜಿಗಳಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

**[ಬಿ] ಸುರಕ್ಷಿತ ಸಾಲಗಾರನ ಹೆಸರು ಮತ್ತು ವಿಳಾಸ :** ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ, #657, 1 ನೇಮಹಡಿ, ಮಂಡಿಪೇಟೆ, ದಾವಣಗೆರೆ-577001.

**[ಸಿ] ಸುರಕ್ಷಿತ ಸಾಲದ ವಿವರಗಳು :** ರೂ. 2,94,475-00 ದಿನಾಂಕ: 06.03.2023 ರಂತೆ ಖಾತೆ ಸಂಖ್ಯೆ 0001002000000419/TL ಅಡಿಯಲ್ಲಿ ಜೊತೆಗೆ ಭವಿಷ್ಯದ ಬಡ್ಡಿ, ವೆಚ್ಚಗಳು, ವೆಚ್ಚಗಳು ಮತ್ತು ಶುಲ್ಕಗಳು 07.03.2023 ರಿಂದ ಸೇರಿಸಲಾಗುತ್ತದೆ.

**[ಡಿ] ಸ್ಥಿರ ಆಸ್ತಿಗಳ ವಿವರಣೆ :** ಈ ಆಸ್ತಿಯ ಎಲ್ಲಾ ಭಾಗವು ಮತ್ತು ಖಾಲಿ ಜಾಗದ ಆಸ್ತಿಯ ಖಾನೇಷುಮಾರಿ ನಂ.257/3, ಖಾತಾ ನಂ. 1004, ಅಳತೆ ಪೂರ್ವ - ಪಶ್ಚಿಮಕ್ಕೆ 23 ಅಡಿ, ಉತ್ತರ-ದಕ್ಷಿಣಕ್ಕೆ 40 ಅಡಿ ಜಿಗಳಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇದರ ಚಕ್ಕುಬಂದಿ:- ಪೂರ್ವ: ಪೂಜಾರ್ ಬೀರಪ್ಪನವರ ಆಸ್ತಿ, ಪಶ್ಚಿಮ: ಯಲವಟ್ಟಿ ರಸ್ತೆ, ಉತ್ತರ: ಪೂಜಾರ್ ಬೀರಪ್ಪನವರ ಆಸ್ತಿ, ದಕ್ಷಿಣ : ರಸ್ತೆ.

| | |
|---|---|
| ಟೆಂಡರ್ ಸಂಖ್ಯೆ | KPSBN/DVG/04-24-25 |
| ಮೀಸಲು ಬೆಲೆ | Rs. 10,92,000/- |
| ಠೇವಣಿ ಮಾಡಬೇಕಾದ ಬೆಲೆ /ಟೆಂಡರ್ ಮಾಡಿದ ಇಎಂಡಿ | Rs. 1,10,000/- |

**ಠೇವಣಿ ಇಡಲು ಕೊನೆಯ ದಿನಾಂಕ : 19.02.2025 (ಬ್ಯಾಂಕಿನ ವ್ಯವಹಾರದ ಸಮಯ)**
**ಹರಾಜು ದಿನಾಂಕ 20.02.2025 ಬೆಳಿಗ್ಗೆ 11 ಗಂಟೆಗೆ.**
**ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತದೆ.**
**ಹೆಚ್ಚಿನ ಮಾಹಿತಿಗಾಗಿ ಶಾಖೆ ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ # 657, 1ನೇ ಮಹಡಿ, ಮಂಡಿಪೇಟೆ, ದಾವಣಗೆರೆ - 577001 ಹಾಗೂ ಬ್ಯಾಂಕಿನ ಪ್ರತಿನಿಧಿ ಶ್ರೀ ಪ್ರವೀಣ್‌ಕುಮಾರ್ ಮೊ : 78924 01288 ಇವರನ್ನು ಸಂಪರ್ಕಿಸಬಹುದು.**

**ದಿನಾಂಕ : 20.01.2025** **ಸಹಿ/- ಅಧಿಕೃತ ಅಧಿಕಾರಿ**
**ಸ್ಥಳ : ದಾವಣಗೆರೆ.** **ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ**

# ತುಮ್ಮಿನಕಟ್ಟೆಯಲ್ಲಿ 34 ವರ್ಷಗಳ ನಂತರ ನಾಳೆ ರಥೋತ್ಸವದ ಸಂಭ್ರಮ

ಹಬ್ಬ ಹರಿದಿನ ಜಾತ್ರೆ ರಥೋತ್ಸವಗಳು ಸಂಸ್ಕೃತಿಯನ್ನು ಅನಾವರಣಗೊಳಿಸಿ, ಅರಿವನ್ನು ವಿಕಾಸ ಮಾಡಿಕೊಳ್ಳಲು ಕಾರಣವಾಗಿವೆ.

ಹಾಗಾಗಿ ಯಾವುದೇ ನಗರ ಗ್ರಾಮಗಳಾಗಿರಲಿ, ಅಲ್ಲಿಯ ಧರ್ಮ ಸಮುದಾಯಕ್ಕೆ ತಕ್ಕಂತೆ ಮನೆ ಮನೆಗಳಲ್ಲಿ ಹಬ್ಬಗಳು ನಡೆಯುತ್ತಿರುತ್ತವೆ. ಮತ್ತು ಸಾರ್ವಜನಿಕವಾಗಿ ದೇವಸ್ಥಾನ ಮಠ ಮಂದಿರಗಳಲ್ಲಿ ಸಾರ್ವಜ ನಿಕವಾಗಿ ಉತ್ಸವಗಳು ನಡೆಯುತ್ತವೆ. ಈ ರೀತಿಯಾಗಿ ಭಕ್ತಿ ಸಂಪ್ರದಾಯಗಳ ಸಂಭ್ರಮದಲ್ಲಿ ಜನರು ಮಿಂದೇಳುತ್ತಾರೆ.

ಎಲ್ಲಾ ಹಬ್ಬ ಉತ್ಸವಗಳಿಗಿಂತ ; ರಥೋತ್ಸವದ ಕಾರ್ಯಕ್ರಮ ಎಂದರೆ ಸಣ್ಣವರಿಂದ ದೊಡ್ಡವರಿಗೂ ಎಲ್ಲಿಲ್ಲದ ಸಡಗರ. ಮಕ್ಕಳು ಹೊಸ ಬಟ್ಟೆ ತೊಡುವ ಸಂಭ್ರಮವಿರುತ್ತದೆ. ವಿಧ ವಿಧವಾದ ಸಿಹಿ ಊಟ, ತಿಂಡಿ ತಿನಿಸುಗಳನ್ನು ತಿನ್ನುವುದರೊಂದಿಗೆ ; ಎಲ್ಲರ ಮನೆ ಮನೆಗಳಲ್ಲಿ ಆನಂದ ಆವರಿಸಿರುತ್ತದೆ.

ಊರಿಂದ ಬೇರೆ ಊರಿಗೆ ಕೆಲಸದ ನಿಮಿತ್ಯ ಹೋದಂತಹ ಸಂಬಧಿಕರು, ಸ್ನೇಹಿತರು ಸಹ ಈ ಸಮಯಕ್ಕೆ ಬಂದು, ತಮ್ಮ ಹಳೆಯ ಆಟ ಪಾಠಗಳ, ತುಂಟಾಟಗಳ ನೆನಪು ಮಾಡಿಕೊಂಡು ಸಂಭ್ರಮದಲ್ಲಿ ಭಾಗಿಯಾಗುವುದು ನಮ್ಮ ಆನಂದಕ್ಕೆ ಪಾರವೇ ಇಲ್ಲದಂತೆ ಆಗಿರುತ್ತದೆ.

ಇಂತಹ ಒಂದು ರಥೋತ್ಸವದ ಸಂಭ್ರಮ ಸಡಗರವು 34 ವರ್ಷಗಳ ನಂತರ 07.02.2025 ರ ಶುಕ್ರವಾರದಂದು ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲೂಕು ತುಮ್ಮಿನಕಟ್ಟೆ ಗ್ರಾಮದಲ್ಲಿ ನಡೆಯುತ್ತಿರುವುದು ನಮ್ಮ ಹಳೆಯ ನೆನಪುಗಳಿಗೆ ಸಾಕ್ಷಿಯಾಗುವಂತಾಗುತ್ತಿದೆ.




**ಇಂತಹ ಒಂದು ರಥೋತ್ಸವದ ಸಂಭ್ರಮ ಸಡಗರವು 34 ವರ್ಷಗಳ ನಂತರ 07.02.2025 ರ ಶುಕ್ರವಾರದಂದು ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕು ತುಮ್ಮಿನಕಟ್ಟೆ ಗ್ರಾಮದಲ್ಲಿ ನಡೆಯುತ್ತಿರುವುದು ನಮ್ಮ ಹಳೆಯ ನೆನಪುಗಳಿಗೆ ಸಾಕ್ಷಿಯಾಗುವಂತಾಗುತ್ತಿದೆ.**

ಪ್ರತಿಯೊಂದು ಊರು, ನಗರವು ಏನಾದರೂ ಒಂದು ತನ್ನದೇ ಆದ ವಿಶೇಷತೆಯನ್ನು ಒಂದಿರುತ್ತವೆ.

ತನ್ನೂರಿನ ಕಾರ್ಯ ಚಟುವಟಿಕೆಗಳಿಂದ, ಬಿರುದನ್ನು ವಿಶೇಷತೆಯನ್ನು ಗಳಿಸಿರುತ್ತವೆ.

ಹಾಗೇ ತುಮ್ಮಿನಕಟ್ಟೆ ಗ್ರಾಮವು ಸಹ ; ನೇಕಾರಿಕೆ ಮತ್ತು ಹೆಸರು ವಡೆಗೆ ಹೆಸರಾಗಿದೆ. ಹಲವು ವರ್ಷಗಳಿಂದ ಎಲ್ಲಾ ಸಮುದಾಯ ಸಮಾಜದವರು, ಧರ್ಮದವರು, ನೇಕಾರಿಕೆ ವೃತ್ತಿಯನ್ನು ಕುಲಕಸುಬು ಎನ್ನುವಂತೆ ಎಲ್ಲರೂ ಮಾಡುತ್ತಿದ್ದಾರೆ. ಹತ್ತಿ, ಜೋಳಗಳನ್ನು ಬೆಳೆಯುವುದು ಇಲ್ಲಿನ ಕೃಷಿಕರ ಪ್ರಮುಖ ಬೆಳೆಯಾಗಿದೆ.

ಈ ಗ್ರಾಮದಲ್ಲಿ ಎಲ್ಲಾ ಜಾತಿ ಧರ್ಮಗಳ ಜನರು ಇದ್ದಾರೆ. ಭಾವೈಕ್ಯತೆಯೊಂದಿಗೆ ಜೀವನ ಸಾಗಿಸುತ್ತಿದ್ದಾರೆ. ಈ ಊರಿನಲ್ಲಿ ಬಸವ ಜಯಂತಿಯಂದು ಈಶ್ವರ ದೇವರ ರಥೋತ್ಸವ, ಯುಗಾದಿಯ ಮರುದಿನ ಆಂಜನೇಯ ರಥೋತ್ಸವ, ಹೋಳಿ ಹುಣ್ಣಿಮೆ ಹಬ್ಬ, ಇತ್ತೀಚಿಗೆ ಆರು ವರ್ಷಗಳಿಂದ ಸಿದ್ದಗಂಗೆಯ ಲಿಂಗೈಕ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮವು ನಡೆಯುತ್ತಿದೆ. ಶ್ರೀಗಳ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮವು ಸಹ ಇದೆ ದಿನಾಂಕ 09.02.2025 ರ ಭಾನುವಾರದಂದು ಸಂತೆ ಪೇಟೆಯಲ್ಲಿ ಗದಗ ವಿರೇಶ್ವರ ಪುಣ್ಯಾಶ್ರಮದ ಶ್ರೀ ಕಲ್ಲಯ್ಯಜ್ಜನವರ ಮತ್ತು ಮತ್ತಿತರರ ಶ್ರೀಗಳ ಸಾನಿಧ್ಯದಲ್ಲಿ ಧರ್ಮ ಸಭೆ, ಉತ್ಸವ ನಡೆಯುತ್ತಿದೆ. ಹಾಗೂ ಗ್ರಾಮದಲ್ಲಿ ಇನ್ನು ಹಲವು ದೇವತೆಗಳ ಜಾತ್ರಾ ಮಹೋತ್ಸವಗಳು ನಡೆಯುತ್ತವೆ.

ಇಲ್ಲಿಗೆ ಮೂವತ್ತನಾಲ್ಕು ವರ್ಷಗಳ ಹಿಂದೆ ಬೆಲ್ಲದ ಪೇಟೆಯಲ್ಲಿರುವ ಬಸವಣ್ಣ ದೇವಸ್ಥಾನ (ಬಸಂದೆರ ಗುಡಿ) ದ ಬಸವಣ್ಣನ ರಥೋತ್ಸವ ನಡೆದಿತ್ತು. ಕಾರಣಾಂತರಗಳಿಂದ ಅದು ನಿಂತು ಹೋಗಿತ್ತು. ಐದಾರು ವರ್ಷಗಳ ಹಿಂದೆ ದೇವಸ್ಥಾನ ಜೀರ್ಣೋದ್ದಾರವಾಗಿದೆ, ಈ ವರ್ಷ 07.02.2025 ರ ಶುಕ್ರವಾರದಂದು ಮಹಾರಥೋತ್ಸವ ನಡೆಯುತ್ತಿದೆ.



ನಾವೆಲ್ಲರೂ ಇಂತಹ ಭಕ್ತಿ ಸಂಪ್ರದಾಯದ ಸಂಭ್ರಮದಲ್ಲಿ ಮಿಂದು ಸಂಸ್ಕೃತಿಯ ಅನಾವರಣಕ್ಕೆ ಸಾಕ್ಷಿಯಾಗಬೇಕು.

ನಾವು ಭೌತಿಕ ಆಚರಣೆಯನ್ನು ಮಾಡುವುದರಿಂದ ಜ್ಞಾನ, ತತ್ವ, ಸಿದ್ಧಾಂತದ ಯಾವ ಅರಿವು ನಮ್ಮಲ್ಲಿ ಮೂಡುವುದಿಲ್ಲ. ಬರೀ ಭೌತಿಕ ಕ್ರಿಯಾಚಾರದಿಂದ ; ಕ್ಷಣಿಕ ಆನಂದವನ್ನು ಪಡೆಯದೆ, ಆಚರಣೆಯ ಹಿಂದಿನ ಸಾರವನ್ನು ತಿಳಿದು ನಡೆಯುವ ಪ್ರಯತ್ನ ಮಾಡಬೇಕು.

ತೇರು ಎಂದರೆ ; ನಮ್ಮ ಕಾಲುಗಳೇ ತೇರಿನ ಗಾಲಿ ಇದ್ದಂತೆ, ದೇಹವೇ ತೇರು ಗಡ್ಡೆ, ಮೂರ್ತಿ ಮಂಟಪದಲ್ಲಿ ಆಸೀನವಾಗುವುದೇ ; ನಮ್ಮ ಆತ್ಮ ಚೇತನವಾದ ಭಗವಂತ, ಜ್ಞಾನ ರೂಪವಾದ ಕಳಶವೇ ನಮ್ಮ ಶಿರವಾಗಿದೆ. ಈ ಅರಿವಿನೊಂದಿಗೆ ನಾವು ರಥೋತ್ಸವವನ್ನು ಆಚರಿಸಿ ದಾಗ ; ದೇಹವೇ ದೇವಾಲಯವೆನ್ನುವ ಅನುಭೂತಿಯಾಗುತ್ತದೆ, ಸತ್ಯ ದರ್ಶನವಾಗುತ್ತದೆ. ಆಗ ನಿಜವಾದ ಸದ್ಭಕ್ತರಾಗುತ್ತೇವೆ, ಜ್ಞಾನ ವಿಕಾಸವಾಗಿ ; ನಾವು ನಿತ್ಯ ನಿರಂಜನರಾಗಿ, ನಿಜಾನಂದದಲ್ಲಿ ನಿರಾಳವಾಗಿರುತ್ತೇವೆ, ಜೀವನ ಸಾರ್ಥಕವಾಗುತ್ತದೆ.

**- ಶಿವಪ್ರಸಾದ ಕರ್ಜಗಿ** , ದಾವಣಗೆರೆ., 9036251399

# ಮಕ್ಕಳ ಬುದ್ಧಿಶಕ್ತಿ ಬೆಳವಣಿಗೆಗೆ ಚದುರಂಗ ಆಟ ಸಹಕಾರಿ

ದಾವಣಗೆರೆ, ಫೆ.5- ಮಕ್ಕಳಲ್ಲಿ ಚಾಣಾಕ್ಷತೆ ಹಾಗೂ ತಾಳ್ಮೆಯ ಮನೋ ಭಾವ ಬೆಳೆಯಲು ಚದುರಂಗ ಆಟ ಸಹಕಾರಿ ಎಂದು ಲಯನ್ಸ್ ಅಧ್ಯಕ್ಷ ಎಸ್.ಜಿ. ಉಳುವಯ್ಯ ಹೇಳಿದರು. ಅಪ್ಪು ಚೆಸ್ ಅಸೋಸಿಯೇಷನ್ ವತಿಯಿಂದ ನಗರದ ಲಯನ್ಸ್ ಕ್ಲಬ್‌ನಲ್ಲಿ ಆಯೋಜಿಸಿದ್ದ 19 ವರ್ಷದೊಳಗಿನ ಮಕ್ಕಳ ಚದುರಂಗ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು.



ಮಕ್ಕಳಲ್ಲಿ ಕ್ರೀಡಾ ಮನೋಭಾವ ಬೆಳಸಲು ಪಾಲಕರು ಸಹಕಾರ ನೀಡಬೇಕು. ದಾವಣಗೆರೆ ಜಿಲ್ಲೆ ಚೆಸ್ ಸೇರಿದಂತೆ ಎಲ್ಲಾ ಕ್ರೀಡಾಕೂಟಗಳಲ್ಲೂ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಲಿ ಎಂದು ಮಕ್ಕಳಿಗೆ ಶುಭ ಹಾರೈಸಿದರು.

**ಮಕ್ಕಳ ಚದುರಂಗ ಸ್ಪರ್ಧೆಯಲ್ಲಿ ಲಯನ್ಸ್ ಅಧ್ಯಕ್ಷ ಎಸ್.ಜಿ. ಉಳುವಯ್ಯ**

ಲಯನ್ಸ್ ಕ್ಲಬ್ ಕಾರ್ಯದರ್ಶಿ ಸಿ. ಅಜಯ್ ನಾರಾಯಣ್ ಮಾತನಾಡಿ, ದಾವಣಗೆರೆಯ ಮಕ್ಕಳು ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಹೆಸರು ಮಾಡಬೇಕೆಂದು ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರನ್ನು ನೆನೆದರು.

ಏಳು ಸುತ್ತುಗಳಲ್ಲಿ ನಡೆದ ಪಂದ್ಯಾವಳಿಯಲ್ಲಿ ಶಿವಮೊಗ್ಗಾದ ವಿಲಾಸ ಆಂಡ್ರೆ (ಪ್ರಥಮ), ಉಡುಪಿಯ ನಿಶಾಂತ್ ಡಿಸೋಜ (ದ್ವಿತೀಯ), ಗದಗಿನ ವಿ.ಎಸ್. ನಂದನ್ ಕುಮಾರ್ (ತೃತೀಯ), ದಾವಣಗೆರೆಯ ಇಶಾನ್ ಎಸ್. ಬಂಗೇರಾ 4ನೇ ಸ್ಥಾನ ಮತ್ತು ಹಾಸನದ ಎಂ.ಹೆಚ್. ಆಕಾಶ್ 5ನೇ ಸ್ಥಾನ ಗಳಿಸಿದ್ದಾರೆ.

**8 ವರ್ಷದೊಳಗಿನ ಪಂದ್ಯಾವಳಿ :** ಶಿವಮೊಗ್ಗಾದ ಟಿ. ವೀಕ್ಷಿತ (ಪ್ರಥಮ), ಸಮರ್ಥ್ ಪೂಜಾರ್ (ದ್ವಿತೀಯ), ದಾವಣಗೆರೆಯ ಎಸ್.ಜೆ. ತರುಣ್ ತೃತೀಯ ಸ್ಥಾನ ಪಡೆದಿದ್ದಾರೆ.

**10 ವರ್ಷದೊಳಗಿನ ಪಂದ್ಯಾವಳಿ :** ದಾವಣಗೆರೆಯ ಕೆ.ಸಿ. ಸಮರ್ಥ್ (ಪ್ರಥಮ) ಸಾಗರದ ಸ್ಯಾಮ್ಸನ್ (ದ್ವಿತೀಯ) ದಾವಣಗೆರೆಯ ಮೊಮ್ಮದ್ ಆರ್ಯನ್ ತೃತೀಯ ಸ್ಥಾನ ಗಳಿಸಿದ್ದಾರೆ.

**12 ವರ್ಷದೊಳಗಿನ ಪಂದ್ಯಾವಳಿ :** ಶಿವಮೊಗ್ಗದ ಎಂ.ಎಸ್. ದರ್ಶನ್ (ಪ್ರಥಮ) ಎ.ಪಿ. ನಿಶಾಂತ್ (ದ್ವಿತೀಯ), ಭದ್ರಾವತಿಯ ಪ್ರಣವ್ ಪ್ರಭಾಕರ್ ತೃತೀಯ ಸ್ಥಾನ ಹೊಂದಿದ್ದಾರೆ.

**14 ವರ್ಷದೊಳಗಿನ ಪಂದ್ಯಾವಳಿ :** ಶಿವಮೊಗ್ಗದ ಬಿ.ಎಸ್. ಸುಹಾನ್ ಕುಮಾರ್ (ಪ್ರಥಮ), ಹಾವೇರಿಯ ಪಿ.ಎಂ. ಯಶವಂತ್ (ದ್ವಿತೀಯ) ಮತ್ತು ಅದ್ವಿಕ್ ಹೆಗಡೆ ತೃತಿಯ ಸ್ಥಾನ ತೆಗೆದುಕೊಂಡಿದ್ದಾರೆ.

**16 ವರ್ಷದೊಳಗಿನ ಪಂದ್ಯಾವಳಿ :** ಕಲಬುರ್ಗಿಯ ವಿಕಾಸ್ ಪತ್ತಾರ್ (ಪ್ರಥಮ), ಶಿವಮೊಗ್ಗಾದ ಹಣಗಾ ಪಾಟೀಲ್ (ದ್ವಿತೀಯ) ಅಭಿಷೇಕ್ ರಾಯಣ ತೃತೀಯ ಸ್ಥಾನ ಪಡೆದಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ 130ಕ್ಕೂ ಅಧಿಕ ಸ್ಪರ್ಧಾಳುಗಳು ಭಾಗವಹಿಸಿದ್ದರು.

ಈ ವೇಳೆ ಲಯನ್ಸ್ ಕ್ಲಬ್ ಸಹ ಕಾರ್ಯದರ್ಶಿಗಳಾದ ಎಸ್. ನಾಗರಾಜ್, ಹೆಚ್,ಎಂ. ನಾಗರಾಜ್, ಟಿ. ಯುವರಾಜ್, ಅಂತ ರಾಷ್ಟ್ರೀಯ ತೀರ್ಪುಗಾರ ಪ್ರಾಣೇಶ್ ಯಾದವ್, ಆಯೋಜಕರಾದ ಮಾಂತೇಶ್, ಹಾಲೇಶ್ ನಾಯ್ಕ, ಮಲ್ಲಿಕಾರ್ಜುನ್, ಸತೀಶ್ ಇತರರಿದ್ದರು.

# ಆವರಗೆರೆ : ಶ್ರೀ ಬಾಲ ಶನೇಶ್ವರಸ್ವಾಮಿ ಮಹಾಕ್ಷೇತ್ರದಲ್ಲಿ 3ನೇ ವಾರ್ಷಿಕೋತ್ಸವ

ದಾವಣಗೆರೆ, ಫೆ. 5 - ಆವರಗೆರೆಯ (ಶ್ರೀ ಮಹಾಲಕ್ಷ್ಮೀ ಲೇಔಟ್ ಪಕ್ಕ) ಎತ್ತಿನ ಸಂತೆ ಹಿಂಭಾಗದಲ್ಲಿ ಶ್ರೀ ಗುರು ಬಾಲ ಶನೇಶ್ವರ ಸ್ವಾಮಿ ಮಹಾಕ್ಷೇತ್ರದಲ್ಲಿ 3ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 7 ಮತ್ತು 8ರಂದು ಏರ್ಪಡಿಸಲಾಗಿದೆ.



ದಿನಾಂಕ 7ರ ಶುಕ್ರವಾರ ಬೆಳಿಗ್ಗೆ ಬೆಳಿಗ್ಗೆ 7 ಕ್ಕೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಮತ್ತು ಮೆರವಣಿಗೆ ನಡೆಯಲಿದೆ. ನಂತರ ಬೆಳಿಗ್ಗೆ 9-00 ಗಂಟೆಗೆ ಕೆಂಡದಾರ್ಚನೆ ಇರುತ್ತದೆ.

ದಿನಾಂಕ 8ರ ಶನಿವಾರ ಬೆಳಿಗ್ಗೆ 5 ಗಂಟೆಗೆ ಸ್ವಾಮಿಯ ಅಭಿಷೇಕ, ಬೆಳಿಗ್ಗೆ 10.30 ರಿಂದ ವೇದಿಕೆ ಸಮಾರಂಭ ಮತ್ತು ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಇರುತ್ತದೆ. ನಂತರ ಸಂಜೆ 5 ಕ್ಕೆ ಶ್ರೀ ಗುರು ಬಾಲಶನೇಶ್ವರ ಸ್ವಾಮಿ ಯ ಉತ್ಸವ ಮೂರ್ತಿಯ ಮೆರವಣಿಗೆ ಜರಗುವುದು. ಉಜ್ಜಯಿನಿ ಪೀಠದ ಶ್ರೀ ಜಗದ್ಗುರು ಸಿದ್ದಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾ ದರು ಸಾನಿಧ್ಯ ವಹಿಸುವರು. ಕೋಣಂ ದೂರು ಮಠದ ಶ್ರೀ ಶ್ರೀಪತಿ ಪಂಡಿತಾ ರಾಧ್ಯ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸುವರು. ವಿಶೇಷ ಆಹ್ವಾನಿತರಾಗಿ ಕೆಎಸ್ಸಾ ರ್ಟಿಸಿ ವಿಭಾಗೀಯ ನಿಯಂತ್ರಣ ಅಧಿಕಾರಿ ಸಿದ್ದೇಶ್ವರ ಎನ್. ಹೆಬ್ಬಾಳ ಆಗಮಿಸುವರು. ವಿವರಕ್ಕೆ ಸಂಪರ್ಕಿಸಿ : 9742374821, 8867345362.

## ಪುರಂದರ ದಾಸರ ದೇವರ ನಾಮ, ತ್ಯಾಗರಾಜರ ಕೀರ್ತನೆ ಸ್ಪರ್ಧೆ

ದಾವಣಗೆರೆ, ಫೆ.5- ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದಿಂದ ಶ್ರೀ ಪುರಂದರ ದಾಸರ ಹಾಗೂ ಶ್ರೀ ತ್ಯಾಗರಾಜರ ಆರಾಧನೆ ಪ್ರಯುಕ್ತ ಶ್ರೀ ಪುರಂದರ ದಾಸರ ದೇವರ ನಾಮ ಹಾಗೂ ಶ್ರೀ ತ್ಯಾಗರಾಜರ ಕೀರ್ತನಾ ಸ್ಪರ್ಧೆಯನ್ನು ಇದೇ ದಿನಾಂಕ 16 ರ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವವರು ಇದೇ ದಿನಾಂಕ 14 ರೊಳಗೆ ಹೆಸರು ನೋಂದಾಯಿಸಬೇಕು ಎಂದು ಶ್ರೀಮತಿ ಅಡಿಗ (9964027146), ಶ್ರೀಮತಿ ನಳಿನಿ ಅಚ್ಯುತ್ (9886058866) ತಿಳಿಸಿದ್ದಾರೆ.

## ಹೊನ್ನಾಳಿಯಲ್ಲಿ ಇಂದು ಪ್ರತಿಭಟನೆ

ಬಿಸಿ ಊಟ ಸಂಘಟನೆ ವತಿಯಿಂದ ಇಂದು ಮಧ್ಯಾಹ್ನ 1 ಗಂಟೆಗೆ ಹೊನ್ನಾಳಿ ತಾಲ್ಲೂಕು ಕಚೇರಿ ಬಳಿ ಪ್ರತಿಭಟನೆ ನಡೆಯಲಿದೆ. ಮುಂಬರುವ ಬಜೆಟ್‌ನಲ್ಲಿ ವೇತನ ಹೆಚ್ಚಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲು ತಾಲ್ಲೂಕಿನ ಎಲ್ಲ ಬಿಸಿ ಊಟ ತಯಾರಕರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕೆಂದು ಸಂಘಟನೆಯ ಜಿಲ್ಲಾಧ್ಯಕ್ಷ ಆವರಗೆರೆ ಚಂದ್ರು ತಿಳಿಸಿದ್ದಾರೆ.


**ಮನೆ ಮಾರಾಟಕ್ಕಿದೆ**
ಅಪಾರ್ಟ್‌ಮೆಂಟ್‌ನಲ್ಲಿ ಹೊಸ ಮನೆ ಮಾರಾಕ್ಕಿದೆ ತರಳಬಾಳು ಬಡಾವಣೆಯಲ್ಲಿ 2 ಬೆಡ್ ರೂಮ್, 1ನೇ ಹಂತ ಮನೆ, Rate - 88 ಲಕ್ಷಕ್ಕೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಕುಂದವಾಡ ರಸ್ತೆ ಬಾಲಾಜಿ ಸರ್ಕಲ್ ಹತ್ತಿರ ಡಾ. ಸರ್ಜನ್ ರಾಜ್ ಲೇಔಟ್‌ನಲ್ಲಿ 30x40 ಉತ್ತರ, ಎಸ್.ಎಸ್. 'ಎ' ಬ್ಲಾಕ್‌ನಲ್ಲಿ 30x50 ಪೂರ್ವ, ಶಿರಮಗೊಂಡನಹಳ್ಳಿ ರಸ್ತೆ, ವಿಶ್ವಚೇತನ ಸ್ಕೂಲ್ ಹಿಂಭಾಗ 30x45 ಉತ್ತರ, 60 ಅಡಿ ರಸ್ತೆಗೆ ಹೊಂದಿಕೊಂಡು.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
99868 02097

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ರಾಣೇಬೆನ್ನೂರು, ತುಮಕೂರು, ಸಿರಾ ಇಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಊಟ, ವಸತಿ ESI, PF ಸೌಲಭ್ಯವಿದೆ.
ವೇತನ : 8000 - 15000 (12hrs)
88845 95873, 84949 46474

**ಸೈಟುಗಳು ಮಾರಾಟಕ್ಕಿವೆ**
ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 30x40 West ವಿದ್ಯಾನಗರದಲ್ಲಿ 30x33 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಶಿವ ರೆಸಿಡೆನ್ಸಿ ಲಾಡ್ಜ್ ರಾತ್ರಿ ಮತ್ತು ಹಗಲು ಕೆಲಸಕ್ಕೆ ಆಫೀಸ್ ಬಾಯ್ ಬೇಕಾಗಿದ್ದಾರೆ.
ಸಂಪರ್ಕಿಸಿ. ಶಿವ ರೆಸಿಡೆನ್ಸಿ ಲಾಡ್ಜ್
ಬನಶಂಕರಿ ಬಡಾವಣೆ, ದಾವಣಗೆರೆ
86605 59502, 93410 00773

**ಮಾರಾಟಕ್ಕಿದೆ**
ಬಿ.ಟಿ.ಗಲ್ಲಿ ಕ್ರಾಸ್ ನಲ್ಲಿ ಕಮರ್ಷಿಯಲ್ ಎರಡು ಅಂಗಡಿ ಹಾಗೂ ಡುಪ್ಲೆಕ್ಸ್ ಮನೆ ಇದೆ.
ಸಂಪರ್ಕಿಸಿ :
98448 03000

**ಅನುಭವವವಿರುವ ಆಡಿಟರ್ ಬೇಕಾಗಿದ್ದಾರೆ**
ಸಂಪರ್ಕಿಸಿ :
97317 40827

**ಬಾಡಿಗೆಗೆ**
Old PB Road, Trends Man, Titan World Bldg, Covered Terrace - 3600 Sqft Basement-30x15 Godowns
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಮೊದಲನೇ ಮಹಡಿ 3500 ಅಡಿಗಳು
94480 28103

**ಡ್ರೈವರ್ ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ.
ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
90082 28222, 99001 42052

**ಬೇಕಾಗಿದ್ದಾರೆ**
ನಮ್ಮ ಕಾಫೀ ಶಾಪ್‌ನಲ್ಲಿ ಮತ್ತು ಕಾಫೀ ಕೌಂಟರ್‌ಗಳಲ್ಲಿ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತಿವುಳ್ಳವರು ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**ಬೇಕಾಗಿದ್ದಾರೆ**
ಸೂಪರ್ ಕ್ಯಾರಿ ಕಮರ್ಷಿಯಲ್ ವೆಹಿಕಲ್ ಗೆ ಲೈಸೆನ್ಸ್ ಇರುವ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ:
72596 35931



**ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ**
ನಂ. 657/1A, ಮಂಡಿಪೇಟೆ, ದಾವಣಗೆರೆ 577 001
Ph. : 08192 271537 email : kpsbniyamitha@yahoo.com

**ಸಾರ್ವಜನಿಕ ಮಾರಾಟದ ಸೂಚನೆ**

(ಸ್ಥಿರ ಆಸ್ತಿಗಳಿಗೆ ಮಾತ್ರ)

ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ ದಾವಣಗೆರೆ ಶಾಖೆಗೆ ಅಡಮಾನವಿಟ್ಟಿರುವ ಈ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು 17.07.2023ರಂದು ಕಲಂ 13(4) ರ ಅನುಸಾರವಾಗಿ ಅಧಿಕೃತ ಅಧಿಕಾರಿಯು ಸ್ವಾಧೀನಪಡಿಸಿ ಕೊಂಡಿರುವುದರ ಕುರಿತು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಆಸಕ್ತಿಯ ಜಾರಿ ಕಾಯಿದೆ, 2002. ಈ ಸೂಚನೆಯಲ್ಲಿ ಸೂಚಿಸಲಾದ ದಿನಾಂಕ, ಸ್ಥಳ ಮತ್ತು ಸಮಯದಂದು ಸಾರ್ವಜನಿಕರಿಂದ ಟೆಂಡರ್ಗಳನ್ನು ಆಹ್ವಾನಿಸುವ ಮೂಲಕ ಅದನ್ನು ಮಾರಾಟ ಮಾಡಲಾಗುತ್ತದೆ ಮತ್ತು 'ಎಲ್ಲಿದೆಯೋ ಹಾಗೆ ಹೇಗಿದೆಯೋ ಹಾಗೆ ಇದ್ದಂತೆ' ಮತ್ತು ಕೆಳಗೆ ನಮೂದಿಸಲಾದ ನಿಯಮಗಳು ಮತ್ತು ಷರತ್ತುಗಳ ಮೇಲೆ ಕೆಳಗೆ ವಿವರಿಸಿರುವ ಸ್ಥಿರ ಆಸ್ತಿಗಳಿಗಾಗಿ ಸಾರ್ವಜನಿಕರಿಂದ ಮುಚ್ಚಿದ ಕವರ್‌ಗಳಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಈ ಸೂಚನೆಯನ್ನು ಸಾಲಗಾರರಿಗೆ ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು 2002 ರ ನಿಯಮ (8) ರ ಉಪ-ನಿಯಮ (6) ಅಡಿಯಲ್ಲಿ ನೋಟಿಸ್ ಎಂದು ಪರಿಗಣಿಸಬೇಕು.

**[ಎ] ಸಾಲಗಾರರ ಹೆಸರು ಮತ್ತು ವಿಳಾಸ :** ಶ್ರೀ ಕೃಷ್ಣಮೂರ್ತಿ ಪವಾರ್ ಬಿನ್ ಲೇ. ಎಂ.ಪಿ. ನಿಂಗಪ್ಪ, ನಂ. 1126/1, ಕುಂಬಾರ ಪೇಟೆ, ಶಿವಾಜಿ ನಗರ, ದಾವಣಗೆರೆ.

**[ಬಿ] ಸುರಕ್ಷಿತ ಸಾಲಗಾರನ ಹೆಸರು ಮತ್ತು ವಿಳಾಸ :** ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ, #657, 1 ನೇ ಮಹಡಿ, ಮಂಡಿಪೇಟೆ, ದಾವಣಗೆರೆ-577001.

**[ಸಿ] ಸುರಕ್ಷಿತ ಸಾಲದ ವಿವರಗಳು :** ರೂ. 11,28,516 ದಿನಾಂಕ: 06.03.2023 ರಂತೆ ಖಾತೆ ಸಂಖ್ಯೆ 0001002000000433/TL ಅಡಿಯಲ್ಲಿ ಜೊತೆಗೆ ಭವಿಷ್ಯದ ಬಡ್ಡಿ, ವೆಚ್ಚಗಳು, ವೆಚ್ಚಗಳು ಮತ್ತು ಶುಲ್ಕಗಳು 07.03.2023 ರಿಂದ ಸೇರಿಸಲಾಗುತ್ತದೆ.

**[ಡಿ] ಸ್ಥಿರ ಆಸ್ತಿಗಳ ವಿವರಣೆ :** ಈ ಆಸ್ತಿಯ ಎಲ್ಲಾ ಭಾಗವು ಮತ್ತು ಖಾಲಿ ಜಾಗದ ಆಸ್ತಿಯ ಡೋ.ನಂ. 1126/1, ಕುಂಬಾರ ಪೇಟೆ, ಶಿವಾಜಿ ನಗರ, ದಾವಣಗೆರೆ. ಅಳತೆ : ಪೂರ್ವ-ಪಶ್ಚಿಮಕ್ಕೆ 60 ಅಡಿ, ದಕ್ಷಿಣ ಕಡೆಗೆ 63.5 ಅಡಿ, ಉತ್ತರ-ದಕ್ಷಿಣ 13.5 ಅಡಿ, ಪಶ್ಚಿಮದ ಕಡೆಗೆ 12.3 ಅಡಿ. ಇದರ ಚಕ್ಕುಬಂದಿ:- ಪೂರ್ವ : ರಸ್ತೆ, ಪಶ್ಚಿಮ : ಶ್ರೀಮತಿ ಸರಸ್ವತಿ ಬಾಯಿ ಅವರ ಉಳಿದ ಆಸ್ತಿ, ಉತ್ತರ : ಡೋ.ನಂ. 1126/2, ದಕ್ಷಿಣ : ಕೆ.ಆರ್. ಮಂಜುನಾಥ್, ಕೆ.ಜಿ. ಸಂಗಪ್ಪ ಮತ್ತು ಕೆ.ಇ. ತಿಪ್ಪೇಶಿ ಅವರ ಆಸ್ತಿ.

| | |
|---|---|
| ಟೆಂಡರ್ ಸಂಖ್ಯೆ | KPSBN/DVG/03/24-25 |
| ಮೀಸಲು ಬೆಲೆ | Rs. 24,47,000/- |
| ಠೇವಣಿ ಮಾಡಬೇಕಾದ ಬೆಲೆ /ಟೆಂಡರ್ ಮಾಡಿದ ಇಎಂಡಿ | Rs. 2,45,000/- |

ಠೇವಣಿ ಇಡಲು ಕೊನೆಯ ದಿನಾಂಕ : 19.02.2025 (ಬ್ಯಾಂಕಿನ ವ್ಯವಹಾರದ ಸಮಯ)
ಹರಾಜು ದಿನಾಂಕ 20.02.2025 ಬೆಳಿಗ್ಗೆ 11 ಗಂಟೆಗೆ.
ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತದೆ.
ಹೆಚ್ಚಿನ ಮಾಹಿತಿಗಾಗಿ ಶಾಖೆ ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ # 657, 1ನೇ ಮಹಡಿ, ಮಂಡಿಪೇಟೆ, ದಾವಣಗೆರೆ - 577001 ಹಾಗೂ ಬ್ಯಾಂಕಿನ ಪ್ರತಿನಿಧಿ ಶ್ರೀ ಪ್ರವೀಣ್‌ಕುಮಾರ್ ಮೊ : 78924 01288 ಇವರನ್ನು ಸಂಪರ್ಕಿಸಬಹುದು.

ದಿನಾಂಕ : 20.01.2025 — ಸಹಿ/- ಅಧಿಕೃತ ಅಧಿಕಾರಿ
ಸ್ಥಳ : ದಾವಣಗೆರೆ. — ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ



**SHOP FOR RENT**
1000-sqft Amma Complex, Opp. Jadhav Dr.Clinic, Near Jayadeva Circle, Nituvalli Road, Davangere.
9901033555, 9945713192

**ಸೈಟುಗಳು ಮಾರಾಟಕ್ಕಿವೆ**
ಎರಗುಂಟೆಯ ಹೊಸ ಲೇಔಟ್‌ನಲ್ಲಿ 30x40 ಮತ್ತು 30x45 ಸೈಜ್ ಸೈಟುಗಳು ಮಾರಾಟಕ್ಕಿವೆ.
92414 62457

**ಕೆಲಸಕ್ಕೆ ಬೇಕಾಗಿದ್ದಾರೆ**
ಟೆಲಿಕಾಲಿಂಗ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಬೇಸಿಕ್ ಸ್ಯಾಲರಿ 9,000/-
ಹುಡುಗರಿಗೆ ಬೇಸಿಕ್ ಸ್ಯಾಲರಿ 10,000/-
(ಫೀಲ್ಡ್ ವರ್ಕ್)
7899065603, 8050590494

**ಮನೆ ಲೀಸ್‌ಗಿದೆ**
2 BHK 2ನೇ ಮಹಡಿ ಮನೆ, ಲೀಸ್ ಮೊತ್ತ 5 ಲಕ್ಷ, ದೇವರಾಜ್ ಅರಸ್ ಬಡಾವಣೆ, ಎ ಬ್ಲಾಕ್, 2ನೇ ಮೇನ್, 2ನೇ ಕ್ರಾಸ್, ದಾವಣಗೆರೆ. ಬೋರ್/ಕಾರ್ಪೊರೇಷನ್ ನೀರಿನ ವ್ಯವಸ್ಥೆ ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ.
7349397287, 9741746205

**WANTED**
Applications are invited for the post of AUDIT ASSISTANTS. No. of vacancies - 3 Minimum Qualification : Any Graduate with Computer knowledge. Salary : Rs. 9000/- to Rs. 12,000 depending up on experience.
Shankar & co., Tax practitioner Opp. to Aroghyamatha Hospital, Doggalli Road, Amaravathi housing colony, Harihara.
98808 77101

**ಮಳಿಗೆ ಬಾಡಿಗೆಗೆ ಇದೆ**
ಇಂಡಸ್ಟ್ರೀಯಲ್ ಏರಿಯಾ (SAR ನಗರ), ಲೋಕಿಕೆರೆ ರಸ್ತೆ, ಸರ್ಕಲ್‌ನಲ್ಲಿ ವಾಣಿಜ್ಯ ಮಳಿಗೆಗಳು, 1ನೇ ಮಹಡಿಯಲ್ಲಿ 1000, 600 600 sqft 3 ಮಳಿಗೆಗಳು ಬಾಡಿಗೆಗೆ ಇವೆ.
9900939161, 7676477320

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಊಟ, ತಿಂಡಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ.
ಎಸ್.ಟಿ. ಸೋಮಶೇಖರ್
98803 37686

**ಬೇಕಾಗಿದ್ದಾರೆ**
ಅಶೋಕ್ ಲೇಲ್ಯಾಂಡ್ ಓಡಿಸಬಲ್ಲ ಬ್ಯಾಡ್ಜ್ ವುಳ್ಳ ಡ್ರೈವರ್ ಹಾಗೂ ಎಸ್ ಎಸ್.ಎಲ್.ಸಿ ಪಾಸ್/ ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು.
ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**REQUIRED**
House Keeping and Security Supervisor Required.
8105699985
8971504492

**3 ಬೆಡ್ ರೂಂ ಮನೆ ಬಾಡಿಗೆಗೆ ಇದೆ**
KHB ಕಾಲೋನಿಯಲ್ಲಿ 3 ಬೆಡ್ ರೂಂ ಮನೆ ಸ್ವಂತ ಬೋರ್ ಮತ್ತು ಸೋಲಾರ್ ವಾಟರ್ ವ್ಯವಸ್ಥೆ ಇರುವ ಮನೆ ಬಾಡಿಗೆಗೆ ಇದೆ.
ಆಸಕ್ತರು ಸಂಪರ್ಕಿಸಿ.
95917 25892

**ಸೈಟ್ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಲೇಔಟ್, 2ನೇ ಹಂತ, ಶಿವಗಂಗಾ ಚೌಟ್ರಿ ಹಿಂಭಾಗ, ಉತ್ತರ ದಿಕ್ಕಿನ 38x45 ಅಡಿ ಅಳತೆಯ ಫೈನಲ್ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ.
9342224449, 9738827452

ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ) ದಾವಣಗೆರೆ.
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
www.hindusmatrimony.com
15-01-2025 ರಿಂದ 31-01-2025
ಎಲ್ಲಾ ಹಿಂದೂ ವಧುಗಳಿಗೆ
* (Free Registration)
80509 52637, 9380213677

**ದಾಖಲಾತಿ ಪ್ರಾರಂಭವಾಗಿದೆ**
MBA, MCA, M.Com, LLB. BBA, BCA, D.Pharmacy, B.Pharmacy ದಾಖಲಾತಿಗಳು ಪ್ರಾರಂಭವಾಗಿದೆ.
ಆಸಕ್ತರು ಸಂಪರ್ಕಿಸಿ.
ಶ್ರೀ ದೇವಿ ಗ್ರೂಪ್ ಆಫ್ ಎಜುಕೇಶನ್
ಬನ್ನೇರಘಟ್ಟ ರೋಡ್, ಬೆಂಗಳೂರು, 560076.
ಪಿ.ಜೆ. ಬಡಾವಣೆ, ದಾವಣಗೆರೆ - 577002.
95917 25892

**TUITIONS**
CBSE / ICSE Boards Class 8th, 9th, 10th
CRASH COURSES FOR NEET / CET / IIT - JEE PUC I / PUC II / PCMB
NEET Long Term / Supplementary Exams
97398 65711, 94822 44114

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ರಕ್ತ ದಾನ ಶ್ರೇಷ್ಠ ದಾನ**

**REQUIRED**
Sales and marketing Male and Female - 8 Nos, Experienced Accountant Tally and GST - 2 Nos, Receptionist - 2 Nos.
Sree Devi Tiles and Stones Pvt, Ltd. Near Ananda PU College Davangere - 3.
96118 98622
73490 50115

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಆಯಿಲ್ ಮಸಾಜ್ ಮಾಡಲಾಗುತ್ತದೆ.
85508 36642

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಹೆಸರು ಸ್ಪಷ್ಟೀಕರಣ**
ನಾನು ಶ್ರೀ ಸುಧೀರ್ ಬಿ.ಹೆಚ್. ಬಿನ್ ಬಾಬಣ್ಣ ಹೂಲಿ, #952/2, 2ನೇ ಮೇನ್, 2ನೇ ಕ್ರಾಸ್, ವಿನೋಬನಗರ, ದಾವಣಗೆರೆ ವಾಸಿಯಾದ ನಾನು ನನ್ನ ಎಲ್ಲಾ ದಾಖಲಾತಿಗಳಲ್ಲೂ ಸುಧೀರ್ ಬಿ.ಹೆಚ್. ಎಂದು ಸರಿಯಾಗಿ ನಮೂದಾಗಿದೆ. ಆದರೆ ದಿ ದಾವಣಗೆರೆ ಅರ್ಬನ್ ಕೋ-ಆಪ್ ಬ್ಯಾಂಕ್‌ನಲ್ಲಿ ನನ್ನ SB ಖಾತೆಯಲ್ಲಿ ಸುಧೀರ ಬಿ.ಹೆಚ್. ಬದಲು ಸುಧಿ ಬಿ. ಎಂದು ತಪ್ಪಾಗಿ ನಮೂದಾಗಿದೆ. ಆದ್ದರಿಂದ ಈ ಮೇಲ್ಕಂಡ ಎರಡೂ ಹೆಸರುಗಳೂ ನನ್ನದೇ ಬೇರೆ ಯಾರದೂ ಅಲ್ಲ ಎಂದು ದಿ. : 28.1.2025 ರಂದು ನೋಟರಿ ಮುಂದೆ ಪ್ರಮಾಣ ಮಾಡಿದ್ದೇನೆ.
ಸಹಿ/- ಸುಧೀರ ಬಿ.ಹೆಚ್.


**WANTED**
ROYAL INSURANCE BROKING (INDIA) PVT Ltd.
Telecaller's & Sales Executive Marketing Executives
Age : 18 to 27 Salary+Incentive
Quali:Degree, Work place-Davanagere
Walk in Interview -Time:10.30 am-4 pm
99864 47909

**AdBlue / DEF**
available with Best Quality & Price for All BS6 Diesel Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

**WANTED**
Male candidates any degree with computer knowledge is must. Accomondation & food will be provided
Monthly Salary : 8000/-
Whats app : 99887 72291
P.B. Road, Davanagere

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

## ಮಧ್ವನವಮಿ ಪ್ರಯುಕ್ತ ಮಧ್ವಾಚಾರ್ಯರಿಗೆ ನಮನ



ಮಧ್ವಾಚಾರ್ಯರ ಪಾದವ
ಹಿಡಿಯುವ
ಮಧ್ವನವಮಿಯು
ಬಂದಿಹುದು

ಸದ್ವಿಚಾರದಾಗ
ರರಾದವರನು
ಮಧ್ವಮುನಿಗಳ ಸ್ಮರಿಸುವುದು

ವಾಯುದೇವನವತಾರವಾದರು
ವಾಯು ವೇಗದಲಿ ನಡೆವವರು

ಹನುಮ ಭೀಮ ಮಧ್ವ ರೂಪದಿ ಬಂದರು
ಮನುಕುಲವನು ಉದ್ಧರಿಸಿದರು

ಈಶ ಹರಿಯೆ ನಿನ್ನ ದಾಸ ನಾನೆಂದರು
ವಿಶೇಷವಾಗಿ ಭಕ್ತಿಮಾರ್ಗ ಕೊಟ್ಟರು

ಭಗವದ್ಗೀತೆಗೆರಡು ಭಾಷ್ಯ ಬರೆದರು
ಭಾಗವತ ಧರ್ಮ ಬೋಧಿಸಿದರು.

ಬ್ರಹ್ಮಸೂತ್ರಕೆ ಭಾಷ್ಯ ಬರೆದವರು
ಬ್ರಹ್ಮಜ್ಞಾನ ಶಿಷ್ಯರಿಗೆ ಕೊಟ್ಟರು

ಚೆಂದದ ಕೃಷ್ಣನ ಉಡುಪಿಯಲಿ ಸ್ಥಾಪಿಸಿ
ನಂದದ ಪೂಜೆಗೆ ಅಷ್ಟಮಠ ಕೊಟ್ಟರು

ಕುಂದದಾನಂದದ ಸಾಗರರಿವರು
ನಂದನಂದನ ಕಂಡವರು

ಮಂದಮತಿಗಳನು ಉದ್ಧರಿಸುವರು
ಮಂದರಧರ ಸಿರಿಹರಿ ಪ್ರಿಯರು

ಚೆಂದ ಬಾಲಗೋಪಾಲವಿಠಲನಲಿ
ಎಂದೆಂದೂ ಮನವನಿಟ್ಟಿರುವವರು

**ಶ್ರೀ ಕೃಷ್ಣಾರ್ಪಣಮಸ್ತು ರೂಪಶ್ರೀ ಶಶಿಕಾಂತ್**

## 33ನೇ ವಾರ್ಡಿನಲ್ಲಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ದಾವಣಗೆರೆ, ಫೆ.5- ಮಹಾನಗರ ಪಾಲಿಕೆಯ 15ನೇ ಹಣಕಾಸಿನ ಅನುದಾನದಲ್ಲಿ 33ನೇ ವಾರ್ಡಿನಲ್ಲಿ 55 ಲಕ್ಷದ ಅನುದಾನದಲ್ಲಿ ಜಯ ನಗರ 'ಎ' ಬ್ಲಾಕ್ ನಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಯ ಗುದ್ದಲಿ ಪೂಜೆಗೆ 33ನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯ ಕೆ. ಎಂ. ವೀರೇಶ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಶಿವಮೂರ್ತೆಪ್ಪ ಮತ್ತು ಇತರರು ಈ ಸಂದರ್ಭದಲ್ಲಿ ಇದ್ದರು.

## ಹರಿಹರ : 108 ಸೂರ್ಯ ನಮಸ್ಕಾರ, ಯಜ್ಞ ಕಾರ್ಯಕ್ರಮ

ಹರಿಹರ, ಫೆ. 5 - ನಗರದ ಯೋಗಕ್ಷೇಮ ಯೋಗ ಕೇಂದ್ರ, ಯಶಸ್ವಿ ಸೇವಾ ಕಿರಣ ಹಾಗೂ ತಪೋವನ ಯೋಗ ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಕಾಲೇಜು ಸಹಯೋಗದೊಂದಿಗೆ ಇದೇ ದಿನಾಂಕ 9 ರ ಭಾನುವಾರ ತುಂಗಭದ್ರಾ ನದಿಯ ದಂಡೆಯ ಮೇಲಿರುವ ತುಂಗಾರಾತಿ ಕಾರಿಡಾರ್ ಸ್ಥಳದಲ್ಲಿ ಬೆಳಗ್ಗೆ 5.30 ರಿಂದ 9 ಗಂಟೆಯವರೆಗೆ ರಥ ಸಪ್ತಮಿ ಪ್ರಯುಕ್ತ 108 ಸೂರ್ಯ ನಮಸ್ಕಾರ ಮತ್ತು ಯಜ್ಞ ಹಾಗೂ ಸಾಧಕರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಆರ್.ಜಿ. ರವೀಂದ್ರ ಸಿಂಗ್ ತಿಳಿಸಿದ್ದಾರೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಪುಣ್ಯಕೋಟಿ ಮಠದ ಜಗದೀಶ್ವರ ಸ್ವಾಮಿಗಳು ವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ತಪೋವನ ಛೇರ್ಮನ್ ಹಾಗೂ ಎಸ್.ಎಸ್.ಕೆ. ಸಮಾಜದ ರಾಜ್ಯಾಧ್ಯಕ್ಷ ಡಾ. ಶಶಿಕುಮಾರ್, ವಿ. ಮೆಹರ್ವಾಡೆ ವಹಿಸಲಿದ್ದಾರೆ ಎಂದು ಹೇಳಿದರು.

# ಜಿಲ್ಲೆಯಲ್ಲಿ ಎಚ್‌ಐವಿ ಸೋಂಕು ಪ್ರಕರಣಗಳು ಇಳಿಕೆ



ದಾವಣಗೆರೆ, ಫೆ. 5 - ಏಡ್ಸ್ ರೋಗಿಯನ್ನು ಅಪರಾಧಿ ದೃಷ್ಟಿಯಿಂದ ನೋಡದೇ ಸಮಾನವಾಗಿ ಕಾಣುವುದರಿಂದ ಆತ್ಮಸ್ಥೈರ್ಯ ಹೆಚ್ಚಲಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಏಡ್ಸ್ ಪ್ರತಿ ಬಂಧಕ ಮತ್ತು ನಿಯಂತ್ರಣ ಘಟಕ ಹಾಗೂ ವಿವಿಧ ಇಲಾಖೆಗಳಿಂದ ಇಂದು ಆಯೋಜಿಸಲಾಗಿದ್ದ ವಿವಿಧ ಇಲಾಖಾ ಮುಖ್ಯಸ್ಥರ ಸಮನ್ವಯ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹವಾಮಾನ ಬದಲಾವಣೆ ಕುರಿತು ಮಾತನಾಡಿದ ಅವರು, ಜಗಳೂರಿನಲ್ಲಿ ಬೆಂಕಿ ಅನಾಹುತಗಳು ತುಂಬಾ ಸಂಭವಿಸುತ್ತಿದ್ದು, ಇದಕ್ಕೆ ಎನ್‌ಜಿಟಿ ಗೈಡ್‌ಲೈನ್ಸ್ ಪ್ರಕಾರ ಅವರಿಗೆ ಮಾರ್ಗದರ್ಶನ ನೀಡಬೇಕು. ರಸ್ತೆಗಳಲ್ಲಿ ಹುಲ್ಲಿನ ಲಾರಿಯ ಮೇಲೆ ಬೆಂಕಿ ಅವಘಡ ಸಂಭವಿಸುತ್ತಿದೆ, ಇದನ್ನು ತಡೆಯಬೇಕು. ಪ್ಲಾಸ್ಟಿಕ್ ಬಳಕೆ ನಿಷೇಧ ಮಾಡಬೇಕು. ವಿವಿಧ ಇಲಾಖೆಗಳ ಜೊತೆಗೂಡಿ ಸಂಪೂರ್ಣವಾಗಿ ಪ್ಲಾಸ್ಟಿಕ್ ಬಳಕೆ ತಡೆಗಟ್ಟಲು ಶ್ರಮಿಸಬೇಕು ಎಂದರು.

ಡಾ. ಕೃತಿ ಹೆಚ್‌ಐವಿ ನಿಯಂತ್ರಣ ಕುರಿತು ಮಾಹಿತಿ ನೀಡಿ, ಹೆಚ್.ಐ.ವಿ ಆಪ್ತ ಸಮಾಲೋಚನೆ ನಡೆಸಿ ಎ.ಆರ್.ಟಿ ಔಷಧೋಪಚಾರವನ್ನು ಮಾಡಲಾಗುವುದು, ಡಾಟ್ಸ್ ಟಿ.ಬಿ. ಚಿಕಿತ್ಸೆ, ಸಿ.ಪಿ.ಟಿ ಔಷಧೋಪಾಚಾರ, ಸಮಯ ಸಾಧಕಗಳಿಗೆ, ಸೋಂಕುಗಳಿಗೆ ಚಿಕಿತ್ಸೆ, ನಿರೋಧ್, ಐ.ಇ.ಸಿ ಪೋಸ್ಟರ್ ಮತ್ತು ಕರ ಪತ್ರಗಳನ್ನು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಸೋಂಕಿತ, ಬಾಧಿತ, ಐಸಿಪಿಎಸ್ ಶಿಕ್ಷಣ ಸೌಲಭ್ಯಗಳನ್ನು ನೀಡಲಾಗುವುದು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ರೇಷನ್ ಕಾರ್ಡ್, ಅಂತ್ಯೋದಯ ಕಾರ್ಡ್‌ಗಳನ್ನು ನೀಡಲಾಗುವುದು.

ಸೋಂಕಿತರಿಗೆ ಪ್ರತಿ ದಿನ ಸಮಾಲೋಚನೆ ಮಾಡುವುದರ ಜೊತೆ ಔಷಧಿ ನೀಡಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ತಾಯಿಯಿಂದ ಮಗುವಿಗೆ ಎಚ್‌ಐವಿ ಸೋಂಕು ವರ್ಗಾವಣೆಯಾಗದಂತೆ ತಡೆಯಲು ಪ್ರಮುಖ ಪಾತ್ರ ವಹಿಸುವ ನೆವರಿಪೈನ್ ಸೇರಿ ಕೆಲ ಔಷಧಿಗಳನ್ನು ನೀಡುತ್ತೇವೆ. ಶಿಶು ಜನಿಸಿದ ಬಳಿಕ ಅದರ ತೂಕದ ಅನುಸಾರ ಔಷಧಿ ನೀಡಿ, ನಿಗಾ ವಹಿಸುತ್ತೇವೆ. ನಂತರ ಹಂತ ಹಂತವಾಗಿ ಪರೀಕ್ಷೆಯನ್ನು ಮಾಡುತ್ತೇವೆ. ಐಸಿಟಿಸಿ ಕೇಂದ್ರಗಳಲ್ಲಿ ಎಚ್‌ಐವಿ ಸೋಂಕು ಪೀಡಿತರಿಗೆ ಸೂಕ್ತ ಮಾರ್ಗದರ್ಶನದ ಜೊತೆಗೆ ಔಷಧಿ ಕೊಡಲಾಗುತ್ತಿದೆ. ಯಾವುದೇ ಗೊಂದಲ, ಸಮಸ್ಯೆಗಳಿಗೆ ಆಸ್ಪದ ಮಾಡಿಕೊಡುತ್ತಿಲ್ಲ.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ, ಜಿಲ್ಲಾ ಸರ್ಜನ್ ಡಾ.ನಾಗೇಂದ್ರಪ್ಪ, ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಮುರುಳೀಧರ್, ಡಾ. ಗಂಗಾಧರ ಉಪಸ್ಥಿತರಿದ್ದರು.

> **ಕಳೆದ ಹತ್ತು ವರ್ಷಗಳಲ್ಲಿ ಜಿಲ್ಲೆಯಲ್ಲಿ 0.5 ಎಚ್‌ಐವಿ ಸೋಂಕು ಪ್ರಕರಣಗಳು ಇಳಿಕೆಯಾಗಿದೆ. ಇದೇ ಅವಧಿಯಲ್ಲಿ ತಾಯಿಯಿಂದ ಮಗುವಿಗೆ ಎಚ್‌ಐವಿ ಸೋಂಕು ವರ್ಗವಾಗುವ ಪ್ರಮಾಣ ಕಡಿಮೆಯಾಗಿದೆ. ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಇಲಾಖೆಗಳಲ್ಲಿ ದೊರೆಯುವ ಸೌಲಭ್ಯಗಳನ್ನು ಹೆಚ್.ಐ.ವಿ ಸೋಂಕಿತರಿಗೆ ನೀಡಲು ಮತ್ತು ತಾರತಮ್ಯವಾಗದಂತೆ ಮುಂಜಾಗ್ರತೆ ಕ್ರಮವಹಿಸಬೇಕು.**
>
> **- ಡಾ. ಗಂಗಾಧರ ಸ್ವಾಮಿ, ಜಿಲ್ಲಾಧಿಕಾರಿಗಳು**

## ಸ್ವೀಡನ್ ವಯಸ್ಕರ ಶಿಕ್ಷಣ ಕೇಂದ್ರದ ಮೇಲೆ ಗುಂಡಿನ ದಾಳಿ, 11 ಸಾವು

ಒರೆಬ್ರೊ, ಫೆ. 5 - ಸ್ವೀಡನ್‌ನಲ್ಲಿ ನಡೆದ ಅತ್ಯಂತ ಭೀಕರವಾದ ಶಾಲಾ ಗುಂಡಿನ ದಾಳಿಯಲ್ಲಿ 11 ಜನ ಸಾವನ್ನಪ್ಪಿದ್ದಾರೆ ಹಾಗೂ ಇತರೆ ಐವರು ಗಾಯಗೊಂಡಿದ್ದಾರೆ.

ಸ್ಟಾಕ್ ಹೋಂ ಪಶ್ಚಿಮದಲ್ಲಿರುವ ವಯಸ್ಕರ ಶಿಕ್ಷಣ ಕೇಂದ್ರದ ಮೇಲೆ ಈ ದಾಳಿ ನಡೆಸಲಾಗಿದೆ. ದಾಳಿ ನಡೆಸಿದ ವ್ಯಕ್ತಿ ಸಹ ಸಾವನ್ನಪ್ಪಿದ್ದಾನೆ. ಸ್ವೀಡನ್‌ನ ಶಾಲೆಗಳಲ್ಲಿ ಗುಂಡಿನ ಹಿಂಸಾಚಾರ ನಡೆಯುವುದು ತುಂಬಾ ಅಪರೂಪವಾಗಿದೆ.

## ಕರ್ಕಶ ಶಬ್ಧಗಳ ಸೈಲೆನ್ಸರ್ ನಾಶ: ದ್ವಿಚಕ್ರ ಸವಾರರಿಗೆ ಎಚ್ಚರಿಕೆ




ಹರಿಹರ, ಫೆ.5- ದ್ವಿಚಕ್ರ ವಾಹನ ಚಾಲಕರು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಕರ್ಕಶ ಶಬ್ಧ ಹೊರಡಿಸುವ ಸೈಲೆನ್ಸರ್ ಮತ್ತು ಕಣ್ಣಿಗೆ ಕುಕ್ಕುವಂತಹ ಹೆಡ್ ಲೈಟ್‌ಗಳನ್ನು ಅಳವಡಿಸದಂತೆ ನಗರ ಪೊಲೀಸ್ ವೃತ್ತ ನಿರೀಕ್ಷಕ ಎಸ್. ದೇವಾನಂದ್ ಎಚ್ಚರಿಸಿದ್ದಾರೆ.

ರಸ್ತೆ ಸುರಕ್ಷತಾ ಸಪ್ತಾಹ ಅಂಗವಾಗಿ ವಶಪಡಿಸಿಕೊಂಡಿದ್ದ ದ್ವಿಚಕ್ರ ವಾಹನಗಳ ಸೈಲೆನ್ಸರ್ ಪೈಪುಗಳನ್ನು ರೋಡ್ ರೋಲರ್ ಮೂಲಕ ನಾಶಪಡಿಸಿದ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ನಗರದಲ್ಲಿ ಕಳೆದ ಆರು ತಿಂಗಳಲ್ಲಿ ನಡೆದ ರಸ್ತೆ ಸುರಕ್ಷತಾ ಸಪ್ತಾಹ ಸಮಯದಲ್ಲಿ, ವಾಹನ ಸವಾರರು ಶೋಕಿಗಾಗಿ ಅಳವಡಿಸಿಕೊಂಡಿದ್ದ ಸೈಲೆನ್ಸರ್ ಪೈಪ್ ಕಣ್ಣಿಗೆ ಕುಕ್ಕುವಂತ ಹೆಡ್ ಲೈಟ್‌ಗಳುಳ್ಳ ವಾಹನಗಳನ್ನು ವಶಕ್ಕೆ ಪಡೆದು ದಂಡವನ್ನು ಹಾಕಲಾಗಿತ್ತು. ವಶಪಡಿಸಿಕೊಂಡ ಸೈಲೆನ್ಸರ್‌ಗಳನ್ನು ಇಂದು ನಾಶಪಡಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಎಸ್‌ಐ ಮನಸೂರ್ ಆಹ್ಮದ್, ಪೊಲೀಸ್ ಸಿಬ್ಬಂದಿಗಳಾದ ರವಿಕುಮಾರ್, ಹನುಮಂತಪ್ಪ, ರಾಮಪ್ಪ ಇತರರು ಹಾಜರಿದ್ದರು.

# ನಕಲಿ ಪತ್ರಕರ್ತರ ಹಾವಳಿ ತಡೆಗೆ ಆಗ್ರಹ

## ಜಿಲ್ಲಾ ವರದಿಗಾರರ ಕೂಟದಿಂದ ಜಿಲ್ಲಾಧಿಕಾರಿಗೆ ಮನವಿ



ದಾವಣಗೆರೆ, ಫೆ.5- ಮಾಧ್ಯಮಗಳ ಹೆಸರೇಳಿಕೊಂಡು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ನಕಲಿ ಪತ್ರಕರ್ತರ ಹಾವಳಿಯನ್ನು ತಡೆಗಟ್ಟುವಂತೆ ಕೋರಿ ಬುಧವಾರ ಜಿಲ್ಲಾ ವರದಿಗಾರರ ಕೂಟದ ಸದಸ್ಯರು ಜಿಲ್ಲಾಧಿಕಾರಿಗೆ ಮತ್ತು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಅವರಿಗೆ ಮನವಿ ಸಲ್ಲಿಸಿದರು.

ಮಾಧ್ಯಮ ವೃತ್ತಿಗೆ, ವೃತ್ತಿ ಬಾಂಧವರ ಹೆಸರಿಗೆ ಮಸಿ ಬಳಿಯುವಂತಹ ಕೆಲಸ ನಿರಂತರವಾಗಿ ನಡೆಯುತ್ತಿದೆ ಎಂದು ಪತ್ರಕರ್ತರು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಬಡದಾಳ್ ಮಾತನಾಡಿ, ಮಾಧ್ಯಮಗಳ ಹೆಸರು ಹೇಳುತ್ತಲೇ ಬಡ್ಡಿ ವ್ಯವಹಾರ ಮಾಡುವವರು, ಕಾನೂನು ಬಾಹಿರ ಕೆಲಸ ಮಾಡುವವರು, ಇಸ್ಪೀಟ್ ಜೂಜಾಟ ಆಡಿಸುವವರು, ರಿಯಲ್ ಎಸ್ಟೇಟ್ ದಂಧೆಯವರು, ಗ್ಯಾರೇಜ್, ಮೆಕ್ಯಾನಿಕ್‌ಗಳು, ಆಟೋ ರಿಕ್ಷಾಗಳು, ಪ್ರಿಂಟಿಂಗ್ ಪ್ರೆಸ್‌ನವರು, ಸರಕು ಸಾಗಾಣಿಕೆ ವಾಹನಗಳ ಮೇಲೆ ಪ್ರೆಸ್, ಮೀಡಿಯಾ ಎಂಬುದಾಗಿ ಬರೆಸಿಕೊಂಡು ಸುತ್ತಾಡುತ್ತಿದ್ದು, ಇದರಿಂದ ನೈಜ ಮಾಧ್ಯಮದವರಿಗೆ ನಿರಂತರ ತೊಂದರೆಯಾಗುತ್ತಲೇ ಇದೆ. ಪ್ರೆಸ್, ಮೀಡಿಯಾ ಎಂಬುದಾಗಿ ಇರುವ ವಾಹನಗಳನ್ನೇ ಮೊದಲು ತಪಾಸಣೆ ಮಾಡುವಂತೆ ಜಿಲ್ಲಾಧಿಕಾರಿ, ಜಿಲ್ಲಾ ರಕ್ಷಣಾಧಿಕಾರಿಗಳು ತಮ್ಮ ಅಧೀನ ಅಧಿಕಾರಿ, ಸಿಬ್ಬಂದಿಗೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿಯನ್ನು ಹಾಕಿ, ತಾವು ಪತ್ರಕರ್ತರೆಂದು ಅಧಿಕಾರಿ, ಸಿಬ್ಬಂದಿಗಳನ್ನು ಹೆದರಿಸುವ, ಬೆದರಿಸುವ ಕೆಲಸವೂ ಆಗುತ್ತಿದೆ. ಹಣ ವಸೂಲಿ ಮಾಡುವುದೇ ಇವರ ಉದ್ದೇಶ ವಾಗಿದ್ದು, ಇಂತಹವರಿಂದಾಗಿ ನೈಜವಾಗಿ ಮಾಹಿತಿ ಹಕ್ಕಿನಡಿ ಮಾಹಿತಿ ಕೋರಿ, ಅರ್ಜಿ ಸಲ್ಲಿಸುವ ನೈಜ ಪತ್ರಕರ್ತರಿಗೂ ಸಂಬಂಧಿಸಿದ ಅಧಿಕಾರಿಗಳು, ಸಿಬ್ಬಂದಿ ವ್ಯವಹಾರ ಕುದುರಿಸಲು ಆರ್‌ಟಿಐನಲ್ಲಿ ಮಾಹಿತಿ ಕೋರಿದ್ದಾರೆಂಬ ವ್ಯಂಗ್ಯದ ಮಾತು ಕೇಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಮೊದಲು ತಪ್ಪಿಸುವಂತೆ ಮನವಿ ಮಾಡಿದರು.

ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ, ನಕಲಿ ಪತ್ರಕರ್ತರ ಹಾವಳಿ ತಡೆಗಟ್ಟಲು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ, ಹದಿನೈದು ದಿನಗಳೊಳಗಾಗಿ ಸೂಕ್ತ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕೂಟದ ಗೌರವಾಧ್ಯಕ್ಷ ಬಿ.ಎನ್. ಮಲ್ಲೇಶ್, ಪ್ರಧಾನ ಕಾರ್ಯದರ್ಶಿ ಎಂ.ವೈ. ಸತೀಶ್, ಖಜಾಂಚಿ ಪವನ್ ಕುಮಾರ್, ಹಿರಿಯ ಪತ್ರಕರ್ತರಾದ ಎ.ಎಲ್. ತಾರಾನಾಥ್, ಮಂಜುನಾಥ್ ಗೌರಕ್ಕಳವರ್, ಚಂದ್ರಣ್ಣ, ಸಿದ್ದಯ್ಯ ಹಿರೇಮಠ್, ರಮೇಶ್ ಜಹಗೀರ್‌ದಾರ್, ಆರ್.ಎಸ್. ತಿಪ್ಪೇಸ್ವಾಮಿ, ಸಿಕಂದರ್, ರವಿ ಬಾಬು, ಹೆಚ್.ಎಂ.ಪಿ. ಕುಮಾರ್, ಸಿ. ವರದರಾಜ್, ತೇಜಸ್ವಿನಿ, ಕಾವ್ಯ ಬಿ.ಕೆ., ಸುರೇಶ್ ಕುಣಿಬೆಳಕೆರೆ, ಪುನೀತ್ ಆಪ್ತಿ, ತೇಜಸ್ವಿನಿ, ಸಂಜಯ್ ಕುಂದುವಾಡ, ರಮೇಶ್, ಶಿವುಕುಮಾರ್, ಕಿರಣ್, ಮದನ್, ಸುರೇಶ್ ಕಕ್ಕರಗೊಳ್ಳ ಸೇರಿದಂತೆ ಮತ್ತಿತರರಿದ್ದರು.

## ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಗೆಲುವು

### ಬಹುತೇಕ ಮತದಾನೋತ್ತರ ಸಮೀಕ್ಷೆಗಳ ಭವಿಷ್ಯ

ನವದೆಹಲಿ, ಫೆ. 5 - ದೆಹಲಿ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಹಲವಾರು ಮತದಾನೋತ್ತರ ಸಮೀಕ್ಷೆಗಳು ತಿಳಿಸಿವೆ.

ಆಡಳಿತಾರೂಢ ಆಮ್ ಆದ್ಮಿ ಪಾರ್ಟಿ ಎರಡನೇ ಸ್ಥಾನಕ್ಕೆ ಬರಲಿದೆ ಹಾಗೂ ಕಾಂಗ್ರೆಸ್ ಹೆಚ್ಚೇನೂ ಮುನ್ನಡೆ ಸಾಧಿಸುವು ದಿಲ್ಲ ಎಂದು ಸಮೀಕ್ಷೆಗಳು ಹೇಳಿವೆ.

ಆದರೆ, ಆಮ್ ಆದ್ಮಿ ಪಾರ್ಟಿ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಎರಡು ಸಮೀಕ್ಷೆಗಳು ಹೇಳಿವೆ. ಹಲವು ಸಮೀಕ್ಷೆಗಳು ಆಮ್ ಆದ್ಮಿ ಪಾರ್ಟಿ ಹಾಗೂ ಬಿಜೆಪಿ ನಡುವೆ ಹತ್ತಿರದ ಸ್ಪರ್ಧೆ ಇರಲಿದೆ ಎಂದು ತಿಳಿಸಿವೆ.

ಫೆಬ್ರುವರಿ 8ರಂದು ಮತಗಳ ಎಣಿಕೆ ನಡೆಯಲಿದೆ. ದೆಹಲಿ 70 ಸ್ಥಾನಗಳನ್ನು ಹೊಂದಿದ್ದು ಬಹುಮತಕ್ಕೆ 36 ಸ್ಥಾನ ಗಳಿಸುವ ಅಗತ್ಯವಿದೆ.

ಪೀಪಲ್ಸ್ ಪಲ್ಸ್ ಸಮೀಕ್ಷೆಯ ಪ್ರಕಾರ ಬಿಜೆಪಿ 51 ರಿಂದ 60 ಸ್ಥಾನ ಪಡೆಯಲಿದೆ. ಆಮ್ ಆದ್ಮಿ ಪಾರ್ಟಿ 10ರಿಂದ 19 ಸ್ಥಾನ ಗಳಿಸಲಿದೆ. ಕಾಂಗ್ರೆಸ್ ಖಾತೆ ತೆರೆಯಲು ಸಾಧ್ಯವಾಗುವುದಿಲ್ಲ.

ಪೀಪಲ್ಸ್ ಇನ್‌ಸೈಡ್ ಸಮೀಕ್ಷೆ ಪ್ರಕಾರ ಬಿಜೆಪಿ 40 ರಿಂದ 44 ಸ್ಥಾನ ಪಡೆಯಲಿದೆ. ಆಮ್ ಆದ್ಮಿ ಪಾರ್ಟಿ 25 ರಿಂದ 29 ಸ್ಥಾನ ಪಡೆಯಲಿದೆ. ಕಾಂಗ್ರೆಸ್ ಒಂದು ಸ್ಥಾನ ಗಳಿಸಲಿದೆ.

ಪಿ-ಮಾರ್ಕ್ಸ್ ಸಮೀಕ್ಷೆಯ ಪ್ರಕಾರ ಬಿಜೆಪಿ 39 ರಿಂದ 49 ಸ್ಥಾನ ಗಳಿಸಲಿದೆ. ಆಮ್ ಆದ್ಮಿ ಪಾರ್ಟಿ 21ರಿಂದ 31 ಹಾಗೂ ಕಾಂಗ್ರೆಸ್ ಒಂದು ಸ್ಥಾನ ಗಳಿಸಲಿದೆ.

ವಿ ಪ್ರಿಸೈಡ್ ಸಮೀಕ್ಷೆಯ ಪ್ರಕಾರ ಆಮ್ ಆದ್ಮಿ ಪಾರ್ಟಿ 46 ರಿಂದ 52 ಸ್ಥಾನ ಪಡೆಯಲಿದೆ. ಬಿಜೆಪಿ 18ರಿಂದ 23 ಹಾಗೂ ಕಾಂಗ್ರೆಸ್ ಒಂದು ಸ್ಥಾನ ಗಳಿಸಲಿದೆ.

ಮೈಂಡ್ ಬ್ರಿಂಕ್ ಮೀಡಿಯಾ ಸಮೀಕ್ಷೆ ಪ್ರಕಾರ ಆಮ್ ಆದ್ಮಿ ಪಾರ್ಟಿ 44 ರಿಂದ 49 ಹಾಗೂ ಬಿಜೆಪಿ 21ರಿಂದ 25 ಸ್ಥಾನ ಪಡೆಯಲಿವೆ. ಕಾಂಗ್ರೆಸ್ ಒಂದು ಸ್ಥಾನ ಗಳಿಸಲಿದೆ.

## ಕುಂಬಳೂರಿನಲ್ಲಿ ಇಂದು ದಂತ, ನೇತ್ರಾ ತಪಾಸಣಾ ಶಿಬಿರ

ಮಲೇಬೆನ್ನೂರು ಸಮೀಪದ ಕುಂಬಳೂರು ಗ್ರಾಮದ ಬಸವ ಗುರುಕುಲ ಶಾಲೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಯಿಂದ ಲಯನ್ಸ್ ಕ್ಲಬ್, ಮಲೇಬೆನ್ನೂರು ಮತ್ತು ನೇತ್ರಾಲಯ ಐ-ಕೇರ್ ಹಾಗೂ ಬಾಪೂಜಿ ದಂತ ವೈದ್ಯಕೀಯ ಕಾಲೇಜು, ಆಸ್ಪತ್ರೆ ವತಿಯಿಂದ ಶಾಲಾ ಮಕ್ಕಳಿಗೆ ಹಾಗೂ ಗ್ರಾಮಸ್ಥರಿಗೆ ಉಚಿತ ದಂತ ಹಾಗೂ ನೇತ್ರಾ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ ಎಂದು ಲಯನ್ಸ್ ವಲಯಾಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ತಿಳಿಸಿದ್ದಾರೆ.

## ಹೊನ್ನಾಳಿಯಲ್ಲಿ ನಾಳೆ ದಿಂಡಿ ಮಹೋತ್ಸವ

ಹೊನ್ನಾಳಿ, ಫೆ.5- ಪಟ್ಟಣದ ದೊಡ್ಡಪೇಟೆ ಪಾಂಡುರಂಗ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 7ರಿಂದ 9ರ ವರೆಗೆ 107ನೇ ದಿಂಡಿ ಮಹೋತ್ಸವ ನಡೆಯಲಿದೆ ಎಂದು ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಹೆಚ್.ಪಿ ಶ್ರೀಹರ ಹೊವಳೆ ತಿಳಿಸಿದ್ದಾರೆ.

## 18 ಹಿಂದೂಯೇತರ ಉದ್ಯೋಗಿಗಳ ವಿರುದ್ಧ ಟಿಟಿಡಿ ಶಿಸ್ತು ಕ್ರಮ

ತಿರುಪತಿ, ಫೆ.5 - ಹಿಂದೂಯೇತರ ಪದ್ಧತಿಗಳನ್ನು ಪಾಲಿಸುತ್ತಿದ್ದ 18 ಉದ್ಯೋಗಿಗಳ ವಿರುದ್ಧ ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಕ್ರಮ ತೆಗೆದುಕೊಂಡಿದೆ. ಇವರು ದೇವಾಲಯದ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕಾರ್ಯಕ್ರಮ ಗಳಲ್ಲಿ ಪಾಲ್ಗೊಳ್ಳದಂತೆ ನಿರ್ಬಂಧಿಸಿದೆ. ಟಿಟಿಡಿಯು ಪ್ರಸಿದ್ಧ ತಿರುಪತಿ ತಿಮ್ಮಪ್ಪನ ದೇವಾಲಯವನ್ನು ನಿರ್ವಹಿಸುತ್ತದೆ.

## ಹಿರಿಯ ಸಾಹಿತಿ ಕಲೀಂ ಬಾಷಾ ಅವರಿಗೆ ನುಡಿನಮನ



ಹರಿಹರ

ಹರಿಹರ,ಫೆ.5- ಮೊನ್ನೆ ನಿಧನರಾದ ಬಂಡಾಯ ಸಾಹಿತಿ ಜೆ.ಕಲೀಂ ಬಾಷ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಜಾನಪದ ಪರಿಷತ್ತು ಮತ್ತು ಪರಸ್ಪರ ಬಳಗದಿಂದ ವತಿಯಿಂದ ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನುಡಿ ನಮನ ಸಲ್ಲಿಸಲಾಯಿತು.

ವಿವಿಧ ಸಂಘಟನೆಗಳ ಪದಾಧಿಕಾರಿಗಳು ಮಾತನಾಡಿ, ಕಲೀಂ ಬಾಷಾ ಅವರ ಸೇವೆಯ ಗುಣಗಾನ ಮಾಡಿದರು. ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುವಾಗ ಕವನಗಳ ರಚನೆ ಮಾಡುತ್ತಿದ್ದ ಬಾಷಾ ಅವರು ನಿವೃತ್ತಿ ನಂತರ 'ಶಾಹೀನಾ ಮತ್ತು ಇತರ ಕವಿತೆಗಳು', 'ಗುಜರಾತಿನಲ್ಲಿ ಗಾಂಧಿ ಆತ್ಮ', 'ಮನೆಯಲ್ಲಿ ಬೆಳದಿಂಗಳು', 'ಕಾಡ್ತಾವ ಮನದಾಗ', 'ಖುರಾನಿನ ಆಯ್ದ ಸೂಕ್ತಿಗಳು' ಎಂಬ ಐದು ಕೃತಿಗಳನ್ನು ರಚಿಸಿದ್ದರು.

ಕವಿ ಅಶ್ಫಾಖ್ ಉಲ್ಲಾ ಖಾನ್ ಮತ್ತು ಕ್ರಾಂತಿಕಾರಿ ಸ್ವಾತಂತ್ರ್ಯ ಹುತಾತ್ಮ ಕವಿ ರಾಮ್ ಪ್ರಸಾದ್ ಬಿಸ್ಮಿಲ್ ಎಂಬುವರ ಕೃತಿಗಳನ್ನು ಹಿಂದಿ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸಲು ಉತ್ತರ ಭಾರತದಲ್ಲಿನ ಈ ಇಬ್ಬರು ಕವಿಗಳ ಊರಿಗೆ ಹೋಗಿ ಅವರ ವಂಶಸ್ಥರಿಂದ ಮಾಹಿತಿ ಸಂಗ್ರಹಿಸಿದ್ದರು ಎಂದು ಸ್ಮರಿಸಿದರು.

ಹರಿಹರದ ತುಂಗಭದ್ರ ಹಳೇ ಸೇತುವೆ ಜೀರ್ಣೋದ್ಧಾರ, ಜಿಬಿಎಂಎಸ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೈದಾನ ಉಳಿಸಲು ಸೇರಿದಂತೆ ಹಲವಾರು ಹೋರಾಟ, ಪ್ರತಿಭಟನೆಗಳಲ್ಲಿ ಅವರು ಸಕ್ರಿಯರಾಗಿ ಪಾಲ್ಗೊಂಡಿದ್ದರು. ನಿಷ್ಠುರ ಸ್ವಭಾವದ ಅವರು ನಿಜ ಅರ್ಥದಲ್ಲಿ ಕನ್ನಡದ ಕಟ್ಟಾಳು ಆಗಿದ್ದರು ಎಂದು ಸ್ಮರಿಸಲಾಯಿತು.

ವಿವಿಧ ಸಂಘ, ಸಂಸ್ಥೆಗಳ ಪದಾಧಿಕಾರಿಗಳಾದ ಪ್ರೊ. ಸಿ.ವಿ.ಪಾಟೀಲ್, ಪ್ರೊ.ಎಚ್.ಎ.ಭಿಕ್ಷಾವರ್ತಿ ಮಠ, ಡಿ. ಎಂ.ಮಂಜುನಾಥಯ್ಯ, ಎಚ್.ನಿಜಗುಣ, ಎಚ್.ಕೆ. ಕೊಟ್ರಪ್ಪ, ಎಸ್.ಎಚ್.ಹೂಗಾರ್, ರೇವಣಸಿದ್ದಪ್ಪ ಅಂಗಡಿ, ಎ.ರಿಯಾಜ್ ಅಹ್ಮದ್, ಚಿದಾನಂದ ಕಂಚಿಕೇರಿ, ಬಿ.ಬಿ.ರೇವಣ್ಣ ನಾಯ್ಕ್, ವಿ.ಬಿ.ಕೊಟ್ರೇಶಪ್ಪ, ನ್ಯಾಯವಾದಿ ಅನೀಸ್ ಪಾಷಾ, ಸೈಯದ್ ಅಜೀಜ್ ಉರ್ ರಹಮಾನ್, ವೈ.ಕೃಷ್ಣಮೂರ್ತಿ, ಟಿ.ಜೆ. ಮುರುಗೇಶಪ್ಪ, ಮಲ್ಲಿಕಾರ್ಜುನ್, ಪ್ರೊ.ಎಸ್.ಎಚ್. ಪ್ಯಾಟಿ, ಎನ್.ರುದ್ರಮುನಿ, ಕೆ.ಬಿ.ರಾಜಶೇಖರ್, ಸ್ಯಾಮ್‌ಸನ್, ವೈದ್ಯ ಜಗನ್ನಾಥ್, ಎಂ.ವಿ.ಹೊರಕೇರಿ, ಪರಮೇಶ್ವರ ಕತ್ತಿಗೆ, ಹುಲಿಕಟ್ಟೆ ಚನ್ನಬಸಪ್ಪ, ಎನ್.ಇ.ಸುರೇಶ್‌ಸ್ವಾಮಿ ಈ ಸಂದರ್ಭದಲ್ಲಿ ಇದ್ದರು.

## ವ್ಯಾಸಂಗ ವೇತನಕ್ಕೆ ಅರ್ಜಿ : ಅವಧಿ ವಿಸ್ತರಣೆ

ದಾವಣಗೆರೆ,ಫೆ.5- ಪ್ರಥಮ ವರ್ಷದಲ್ಲಿ ಪೂರ್ಣಾವಧಿ ಪಿಹೆಚ್‌ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಹೊಸ ವಿದ್ಯಾರ್ಥಿಗಳಿಗೆ ಮಾಸಿಕ ವ್ಯಾಸಂಗ ವೇತನ, ಫೆಲೋಶಿಪ್ ನೀಡಲು ಅರ್ಹ ವಿದ್ಯಾರ್ಥಿಗಳಿಂದ ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 10 ರವರೆಗೆ ವಿಸ್ತರಿಸಲಾಗಿದೆ ಎಂದು ಬಿಸಿಎಂ ಇಲಾಖೆ ಅಧಿಕಾರಿ ಗಾಯತ್ರಿ ತಿಳಿಸಿದ್ದಾರೆ.

**ಫ್ಲಾಟ್‌ಗಳು ಮಾರಾಟಕ್ಕಿವೆ**

ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕಿವೆ

**ಬಿ.ಎಸ್. ಸಂತೋಷ, 96322 67555**

**ಕ್ರಯಪತ್ರ ಕಳುವಾಗಿದೆ**

ಶ್ರೀಮತಿ ಶಾರದಬಾಯಿ ಕೋಂ ಶಿವಾಜಿ ರಾವ್ ಹೆಚ್ ಆರ್, ಆದ ನಾನು, ನನ್ನ ಖಾತೆ ಹಾಗೂ ಸ್ವಾಧೀನಾನುಭವದಲ್ಲಿರುವ ರಾಮನಗರ ತಾ. ಬಿಡದಿ ಹೋಬಳಿ, ಮಂಚನಾಯ್ಕನಹಳ್ಳಿ ಗ್ರಾಮದ ಸರ್ವೆ ನಂ.45 ರಲ್ಲಿ ಬರತಕ್ಕ ಖಾನೇಷುಮಾರಿ ನಂಬರ್ 131/44, ವಿಸ್ತೀರ್ಣ ಪೂರ್ವ- ಪಶ್ಚಿಮ 60 ಅಡಿ, ಉತ್ತರ- ದಕ್ಷಿಣ 40 ಅಡಿಗೆ ಸಂಬಂಧಪಟ್ಟಂತೆ ಮೂಲ ಕ್ರಯಪತ್ರ ನೋಂದಣಿ ಸಂಖ್ಯೆ: 1ನೇ ಪುಸ್ತಕದ 1838ನೇ ಸಂಪುಟದ 107-109 ಪುಟಗಳಲ್ಲಿ 1997-98ನೇ ಇಸವಿಯ ಪತ್ರ ಸಂಖ್ಯೆ: 2883 ದಿನಾಂಕ 02.03.1998ರ ಮೂಲ ಕ್ರಯಪತ್ರ ಕಳೆದಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಕಂಡ ವಿಳಾಸಕ್ಕೆ ಅಥವಾ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಲು ವಿನಂತಿ.

ವಿಳಾಸ: **ಶ್ರೀಮತಿ ಶಾರದಬಾಯಿ ಕೋಂ ಶಿವಾಜಿ ರಾವ್ ಹೆಚ್.ಆರ್.**
#389/2-61-62, ಶಕ್ತಿನಗರ 2ನೇ ಹಂತ, ದಾವಣಗೆರೆ
**ಮೊ. : 98867 50070**

**ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ**
**ನಂ. 657/1A, ಮಂಡಿಪೇಟೆ, ದಾವಣಗೆರೆ 577 001**
Ph. : 08192 271537 email : kpsbniyamitha@yahoo.com

**ಸಾರ್ವಜನಿಕ ಮಾರಾಟದ ಸೂಚನೆ**

**(ಸ್ಥಿರ ಆಸ್ತಿಗಳಿಗೆ ಮಾತ್ರ)**

ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ ದಾವಣಗೆರೆ ಶಾಖೆಗೆ ಅಡಮಾನವಿಟ್ಟಿರುವ ಈ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು 17.07.2023ರಂದು ಕಲಂ 13(4) ರ ಅನುಸಾರವಾಗಿ ಅಧಿಕೃತ ಅಧಿಕಾರಿಯು ಸ್ವಾಧೀನಪಡಿಸಿ ಕೊಂಡಿರುವುದರ ಕುರಿತು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಆಸಕ್ತಿಯ ಜಾರಿ ಕಾಯಿದೆ, 2002. ಈ ಸೂಚನೆಯಲ್ಲಿ ಸೂಚಿಸಲಾದ ದಿನಾಂಕ, ಸ್ಥಳ ಮತ್ತು ಸಮಯದಂದು ಸಾರ್ವಜನಿಕರಿಂದ ಟೆಂಡರ್‌ಗಳನ್ನು ಆಹ್ವಾನಿಸುವ ಮೂಲಕ ಅದನ್ನು ಮಾರಾಟ ಮಾಡಲಾಗುತ್ತದೆ ಮತ್ತು 'ಎಲ್ಲಿದೆಯೋ ಹಾಗೆ ಹೇಗಿದೆಯೋ ಹಾಗೆ ಇದ್ದಂತೆ' ಮತ್ತು ಕೆಳಗೆ ನಮೂದಿಸಲಾದ ನಿಯಮಗಳು ಮತ್ತು ಷರತ್ತುಗಳ ಮೇಲೆ ಕೆಳಗೆ ವಿವರಿಸಿರುವ ಸ್ಥಿರ ಆಸ್ತಿಗಳಿಗಾಗಿ ಸಾರ್ವಜನಿಕರಿಂದ ಮುಚ್ಚಿದ ಕವರ್‌ಗಳಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಈ ಸೂಚನೆಯನ್ನು ಸಾಲಗಾರರಿಗೆ ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು 2002 ರ ನಿಯಮ (8) ರ ಉಪ-ನಿಯಮ (6) ಅಡಿಯಲ್ಲಿ ನೋಟಿಸ್ ಎಂದು ಪರಿಗಣಿಸಬೇಕು.

**[ಎ] ಸಾಲಗಾರರ ಹೆಸರು ಮತ್ತು ವಿಳಾಸ :** ಶ್ರೀ ನೀಲಪ್ಪ ತಂದೆ ಲೇ. ಬಿ. ಬಸಪ್ಪ, ನಂ. 1115/2, ಕುರುಬರಕೇರಿ, ದಾವಣಗೆರೆ ಸಿಟಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

**[ಬಿ] ಸುರಕ್ಷಿತ ಸಾಲಗಾರನ ಹೆಸರು ಮತ್ತು ವಿಳಾಸ :** ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ, #657, 1 ನೇ ಮಹಡಿ, ಮಂಡಿಪೇಟೆ, ದಾವಣಗೆರೆ-577001.

**[ಸಿ] ಸುರಕ್ಷಿತ ಸಾಲದ ವಿವರಗಳು :** ರೂ. 18,06,579-00 ದಿನಾಂಕ: 06.03.2023 ರಂತೆ ಖಾತೆ ಸಂಖ್ಯೆ 0001002000001261/CCS ಅಡಿಯಲ್ಲಿ ಜೊತೆಗೆ ಭವಿಷ್ಯದ ಬಡ್ಡಿ, ವೆಚ್ಚಗಳು, ವೆಚ್ಚಗಳು ಮತ್ತು ಶುಲ್ಕಗಳು 07.03.2023 ರಿಂದ ಸೇರಿಸಲಾಗುತ್ತದೆ.

**[ಡಿ] ಸ್ಥಿರ ಆಸ್ತಿಗಳ ವಿವರಣೆ :** ಪ್ರಸ್ತುತ ಮುನ್ಸಿಪಲ್ ಡೋ.ನಂ. 73/2 ಸಂಖ್ಯೆ ಹೊಂದಿರುವ ಆರ್‌ಸಿಸಿ ರೂಫಿಂಗ್ ಹೌಸ್ ಆಸ್ತಿ, 3ನೇ ವಾರ್ಡ್, 4ನೇ ಡಿವಿಜನ್, ಬೇತೂರು ರಸ್ತೆ, ದಾವಣಗೆರೆ. ಅಳತೆ : ಪೂರ್ವ-ಪಶ್ಚಿಮ 26 ಅಡಿ, ಉತ್ತರ-ದಕ್ಷಿಣ 121/2 (26x121/2) ಅಡಿ ಇದರ ಚಕ್ಕುಬಂದಿ:- ಪೂರ್ವ : ಹಾಸ್ಪಿಟಲ್ ಶಿವಣ್ಣನವರ ಮನೆ, ಪಶ್ಚಿಮ : 4 ಅಡಿ ಖಾಲಿ ಜಾಗ ಬಸಪ್ಪನವರಿಗೆ ಸೇರಿದ ಉಳಿದ ಆಸ್ತಿ, ಉತ್ತರ : ಪಾಲಾಕ್ಷಪ್ಪನವರ ಮನೆ, ದಕ್ಷಿಣ : ಶ್ರೀಮತಿ ಸರೋಜಮ್ಮ ಬಿನ್ ಲೇಟ್ ಮಲ್ಲೇಶಪ್ಪನವರ ಆಸ್ತಿ.

| | |
|---|---|
| ಟೆಂಡರ್ ಸಂಖ್ಯೆ | KPSBN/DVG/02/24-25 |
| ಮೀಸಲು ಬೆಲೆ | Rs. 8,20,000/- |
| ಠೇವಣಿ ಮಾಡಬೇಕಾದ ಬೆಲೆ /ಟೆಂಡರ್ ಮಾಡಿದ ಇಎಂಡಿ | Rs. 82,000/- |

**ಠೇವಣಿ ಇಡಲು ಕೊನೆಯ ದಿನಾಂಕ : 19.02.2025 (ಬ್ಯಾಂಕಿನ ವ್ಯವಹಾರದ ಸಮಯ)**
**ಹರಾಜು ದಿನಾಂಕ 20.02.2025 ಬೆಳಿಗ್ಗೆ 11 ಗಂಟೆಗೆ.**
**ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತದೆ.**
**ಹೆಚ್ಚಿನ ಮಾಹಿತಿಗಾಗಿ ಶಾಖೆ ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ # 657, 1ನೇ ಮಹಡಿ, ಮಂಡಿಪೇಟೆ, ದಾವಣಗೆರೆ - 577001 ಹಾಗೂ ಬ್ಯಾಂಕಿನ ಪ್ರತಿನಿಧಿ ಶ್ರೀ ಪ್ರವೀಣ್‌ಕುಮಾರ್ ಮೊ : 78924 01288 ಇವರನ್ನು ಸಂಪರ್ಕಿಸಬಹುದು.**

**ದಿನಾಂಕ : 20.01.2025** **ಸಹಿ/- ಅಧಿಕೃತ ಅಧಿಕಾರಿ**
**ಸ್ಥಳ : ದಾವಣಗೆರೆ.** **ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ**

## ಚಾಟ್ ಜಿಪಿಟಿ, ಡೀಪ್‌ಸೀಕ್ ಮತ್ತಿತರೆ ಎಐಗಳ ಬಳಸದಂತೆ ಆದೇಶ

ನವದೆಹಲಿ, ಫೆ. 5 - ಚಾಟ್ ಜಿಪಿಟಿ ಹಾಗೂ ಡೀಪ್‌ಸೀಕ್ ಮುಂತಾದ ಎಐ ಆಪ್‌ಗಳು ಹಾಗೂ ತಂತ್ರಾಂಶಗಳನ್ನು ಕಚೇರಿಗಳ ಕಂಪ್ಯೂಟರ್‌ಗಳಲ್ಲಿ ಬಳಕೆ ಮಾಡದಂತೆ ಹಣಕಾಸು ಸಚಿವಾಲಯವು ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ. ಇವುಗಳು ಡಾಟಾ ಹಾಗೂ ದಾಖಲೆಗಳಿಗೆ ಅಪಾಯ ತರುತ್ತವೆ ಎಂದು ಎಚ್ಚರಿಸಲಾಗಿದೆ. ಕಳೆದ ತಿಂಗಳು ಹಣಕಾಸು ಸಚಿವಾಲಯದ ಎಲ್ಲಾ ಇಲಾಖೆಗಳಿಗೆ ಈ ಬಗ್ಗೆ ಸೂಚನೆ ನೀಡಲಾಗಿದೆ. ಇವುಗಳನ್ನು ಕಚೇರಿಗಳ ಉಪಕರಣಗಳಲ್ಲಿ ಬಳಸದಂತೆ ಸ್ಪಷ್ಟವಾಗಿ ತಿಳಿಸಲಾಗಿದೆ.

ಆಸ್ಟ್ರೇಲಿಯಾ ಹಾಗೂ ಇಟಲಿ ಮುಂತಾದ ದೇಶಗಳು ತಮ್ಮ ಕಚೇರಿ ವ್ಯವಸ್ಥೆಯಿಂದ ಚೀನಾದ ಡೀಪ್‌ಸೀಕ್ ನಿಷೇಧಿಸಿದ್ದವು. ಖಾಸಗಿತನ ಹಾಗೂ ಡಾಟಾ ಸುರಕ್ಷತೆ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿತ್ತು.

## ಸಂಗಮದಲ್ಲಿ ಮೋದಿ ಪವಿತ್ರ ಸ್ನಾನ



ಮಹಾಕುಂಭ ನಗರ, ಫೆ. 5 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬುಧವಾರ ಮಹಾ ಕುಂಭ ಮೇಳಕ್ಕೆ ಭೇಟಿ ನೀಡಿದ್ದಾರೆ ಹಾಗೂ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ.

ರುದ್ರಾಕ್ಷಿ ಮಾಲೆ ಹಿಡಿದಿದ್ದ ಪ್ರಧಾನಿ ಮೋದಿ ಮಂತ್ರೋಚ್ಚಾರಗಳ ನಡುವೆ ಪವಿತ್ರ ಸ್ನಾನ ಕೈಗೊಂಡಿದ್ದಾರೆ. ಕೊರಳಲ್ಲಿಯೂ ರುದ್ರಾಕ್ಷಿ ಮಾಲೆ ಧರಿಸಿದ್ದ ಪ್ರಧಾನಿ, ಸೂರ್ಯದೇವನಿಗೆ ಹಾಗೂ ಗಂಗಾಮಾತೆಗೆ ಪೂಜೆ ಸಲ್ಲಿಸಿದರು.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಜೊತೆ ಪ್ರಧಾನಿ ಮೋದಿ ಅರೈಲ್ ಘಾಟ್‌ನಿಂದ ತ್ರಿವೇಣಿ ಸಂಗಮಕ್ಕೆ ದೋಣಿಯಲ್ಲಿ ತೆರಳಿದರು. ಈ ಸಂದರ್ಭದಲ್ಲಿ ಗಂಗಾ ನದಿಯ ಎರಡೂ ದಡಗಳಲ್ಲಿ ಕಿಕ್ಕಿರಿದು ನೆರೆದಿದ್ದ ಜನರ ಕಡೆ ಮೋದಿ ಕೈ ಬೀಸಿದರು. ಪವಿತ್ರ ಸ್ನಾನದ ನಂತರ ಅವರು ಗಂಗಾ ಆರತಿಯಲ್ಲಿ ಪಾಲ್ಗೊಂಡರು. ದೆಹಲಿ ವಿಧಾನಸಭೆ ಹಾಗೂ ಉತ್ತರ ಪ್ರದೇಶದ ಮಿಲ್ಕಿಪುರ ಕ್ಷೇತ್ರಕ್ಕೆ ಉಪಚುನಾವಣೆ ನಡೆದ ದಿನದಂದು ಪ್ರಧಾನಿ ಮಹಾ ಕುಂಭಕ್ಕೆ ಭೇಟಿ ನೀಡಿದ್ದಾರೆ.

ಪ್ರಧಾನಿ ಭೇಟಿ ಹಿನ್ನೆಲೆಯಲ್ಲಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಲಾಗಿತ್ತು. ಆದರೆ ಕೆಲ ಭಾಗಗಳಲ್ಲಿ ತಡೆಗಳನ್ನು ಹಾಕಿದ್ದನ್ನು ಹೊರತುಪಡಿಸಿದರೆ ಉಳಿದೆಡೆ ಭಕ್ತರು ಪವಿತ್ರ ಸ್ನಾನ ಮುಂದುವರಿಸಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ.

## 7 ರಿಂದ 17 ರವರೆಗೆ ನಗರದಲ್ಲಿ ಶ್ರೀ ಕೊಟ್ಟೂರೇಶ್ವರ ಸ್ವಾಮಿ ಪ್ರವಚನ



ದಾವಣಗೆರೆ, ಫೆ. 2- ನಗರದ ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ಭಕ್ತರು ಪಾದಯಾತ್ರೆ ಕೈಗೊಳ್ಳುವ ಮುನ್ನ ವಿರಕ್ತಮಠದ ಆವರಣದಲ್ಲಿ ಇದೇ ದಿನಾಂಕ 7 ರಿಂದ 17 ರವರೆಗೆ ಪ್ರತಿ ದಿನ ಸಂಜೆ 6 ರಿಂದ 8.30 ರವರೆಗೆ ಶ್ರೀ ಕೊಟ್ಟೂರು ಗುರು ಬಸವೇಶ್ವರರ ಪುರಾಣ-ಪ್ರವಚನ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ. ಮರೋಳ ಹಿರೇಮಠದ ಮುದುಕಯ್ಯ ಶಾಸ್ತ್ರಿಗಳು ಪ್ರವಚನ ನಡೆಸಿಕೊಡಲಿದ್ದು, ಭಕ್ತರು ಪ್ರವಚನ ಭಾಗವಹಿಸಲು ಕೋರಿದೆ.

## ಸರ್ಕಾರಿ ಪ್ರ.ದ.ಕಾಲೇಜಿಗೆ 3 ರ್‍ಯಾಂಕ್





ದಾವಣಗೆರೆ, ಫೆ. 5 - ನಗರದ ಸರ್ಕಾರಿ ಪ್ರಥಮ ಕಾಲೇಜಿನ ಸ್ನಾತಕೊತ್ತರ ನಿರ್ವಹಣಾ ಶಾಸ್ತ್ರ (ಎಂಬಿಎ) ವಿಭಾಗದ ವಿದ್ಯಾರ್ಥಿಗಳು ದಾವಣಗೆರೆ ವಿಶ್ವವಿದ್ಯಾನಿಲಯದ 2023-24 ಸಾಲಿನ ಸೆಪ್ಟಂಬರ್‌ನಲ್ಲಿ ನಡೆದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯನ್ನು ಪಡೆದಿರುತ್ತಾರೆ.

ಕಾಲೇಜಿನ ವಿದ್ಯಾರ್ಥಿಗಳಾದ ಬಿ. ಹಾಲ ಶಂಕರ್ ಮತ್ತು ರಶ್ಮಿ ಎಸ್. ನಾಯ್ಕ 9ನೇ ಸ್ಥಾನ ಹಾಗೂ ಬಿಂದು ಜಿ.ಎಸ್. 10ನೇ ಸ್ಥಾನವನ್ನು ಪಡೆದಿದ್ದಾರೆ.

## ಭಾರತದ 104 ಅಕ್ರಮ ವಲಸಿಗರು ಅಮೆರಿಕದಿಂದ ವಾಪಸ್

ನವದೆಹಲಿ, ಫೆ. 5 - ಅಮೆರಿಕಾಗೆ ಅಕ್ರಮವಾಗಿ ತೆರಳಿದ್ದ 104 ಭಾರತೀಯರನ್ನು ಸೈನಿಕ ವಿಮಾನದಲ್ಲಿ ಅಮೆರಿಕ ವಾಪಸ್ ಕಳಿಸಿದೆ. ಅಕ್ರಮವಾಗಿ ವಲಸೆ ತೆರಳಿದ್ದ ಮೊದಲ ತಂಡ ಪಂಜಾಬ್‌ನ ಅಮೃತ್‌ಸರ್‌ಗೆ ಬಂದಿಳಿದಿದೆ.

ಇವರಲ್ಲಿ ತಲಾ 33 ಜನ ಹರಿಯಾಣ ಹಾಗೂ ಗುಜರಾತ್, 30 ಜನ ಪಂಜಾಬ್, ತಲಾ ಮೂವರು ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶ ಮತ್ತು ಇಬ್ಬರು ಚಂಡಿಘಡಕ್ಕೆ ಸೇರಿದವರಾಗಿದ್ದಾರೆ. ಹಸ್ತಾಂತರಗೊಂಡವರಲ್ಲಿ 19 ಮಹಿಳೆಯರು ಹಾಗೂ 13 ಅಪ್ರಾಪ್ತರು ಸೇರಿದ್ದಾರೆ.

## ದೇಶದ ಸೇವಾ ವಲಯದ ಬೆಳವಣಿಗೆ ಎರಡು ವರ್ಷಗಳಲ್ಲೇ ಅತಿ ಕಡಿಮೆ

ನವದೆಹಲಿ, ಫೆ. 5 - ದೇಶದ ಸೇವಾ ವಲಯದ ಬೆಳವಣಿಗೆ ಕಳೆದ ಎರಡು ವರ್ಷಗಳಲ್ಲೇ ಅತಿ ಮಂದವಾಗಿದೆ ಎಂದು ಮಾಸಿಕ ಸಮೀಕ್ಷೆಯೊಂದು ತಿಳಿಸಿದೆ.

ಹೆಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಸೂಚ್ಯಂಕದ ಪ್ರಕಾರ ಜನವರಿ ತಿಂಗಳಲ್ಲಿ ಬೆಳವಣಿಗೆ ಪ್ರಮಾಣ 56.5ರಷ್ಟಿದೆ. ಇದು ಡಿಸೆಂಬರ್ ತಿಂಗಳಲ್ಲಿ 59.3 ರಷ್ಟಿತ್ತು. ಬೆಳವಣಿಗೆ ಪ್ರಮಾಣ ಕಳೆದ ಎರಡು ವರ್ಷಗಳಲ್ಲಿ ಅತಿ ಕಡಿಮೆ ಇದೆ ಎಂದು ಸೂಚ್ಯಂಕ ತಿಳಿಸಿದೆ.

# ಹಿಂದುಳಿದ ಸಮಾಜಗಳು ಸರ್ಕಾರದ ಸೌಲಭ್ಯ ಸದುಪಯೋಗ ಪಡೆದು ಸಂಘಟಿತರಾಗಲಿ



**ಜಿಲ್ಲಾಡಳಿತದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ ಆಶಯ**

ದಾವಣಗೆರೆ, ಫೆ. 5 - ಸವಿತಾ ಸಮಾಜ ಹಿಂದುಳಿದ ಸಮಾಜವಾಗಿದ್ದು, ಸಮಾಜವು ಸಂಘಟನೆಯಿಂದ ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಬೆಳೆಯಬೇಕು ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹಿತ ನುಡಿದರು.

ಅಪರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಡಳಿತ ವತಿಯಿಂದ ಇಂದು ಆಯೋಜಿಸಲಾಗಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತಾನಾಡಿದರು.

ಸವಿತಾ ಸಮಾಜದ ಪ್ರತಿಯೊಬ್ಬರೂ ಶಿಕ್ಷಣವಂತರಾಗಬೇಕು, ಆಗ ಮಾತ್ರ ಶ್ರೀಮಂತ, ಬಡವ, ಮೇಲು-ಕೀಳು ಎಂಬ ಮನೋಭಾವನೆ ಬರಲು ಸಾಧ್ಯವಿಲ್ಲ. ನಾವೆಲ್ಲರೂ ಒಗ್ಗಟ್ಟಾಗಿ ಇರಬೇಕು. ಸಮಾಜದಲ್ಲಿ ಇರುವಂತಹ ತೊಡಕುಗಳನ್ನು ತೊರೆದು ನಡೆದರೆ ಮಾತ್ರ ಅಭಿವೃದ್ಧಿ ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ನಗರದ ಶ್ರೀ ವೀರ ಮದಕರಿ ನಾಯಕ ವೃತ್ತದ ಬಳಿ ನಿರ್ಮಾಣ ಹಂತದಲ್ಲಿರುವ ಸವಿತಾ ಸಮಾಜದ ಸಮುದಾಯ ಭವನವನ್ನು ಪೂರ್ಣಗೊಳಿಸಲು ಸಚಿವರೊಂದಿಗೆ ಮಾತನಾಡಿ, ಅಗತ್ಯ ಕ್ರಮ ಕೈಗೊಳ್ಳುವುದಾಗಿ ಬಸವಂತಪ್ಪ ಭರವಸೆ ನೀಡಿದರು.

ಸವಿತಾ ಮಹರ್ಷಿಗಳು ಸಮಾಜಮುಖಿಯಾಗಿ ಬೆಳೆದು ದಾರಿದೀಪವಾಗಿದ್ದಾರೆ. ಇಂತಹ ಮಹಾತ್ಮರ ಜಯಂತಿಗಳನ್ನು ಆಚರಿಸುವ ಮೂಲಕ ಇವರ ಆದರ್ಶಗಳ ಹಾದಿಯಲ್ಲಿ ನಡೆಯಲು ಮಾರ್ಗದರ್ಶಿಯಾಗಿದೆ. ಸವಿತಾ ಸಮಾಜದ ಬಂಧುಗಳು ಮಹರ್ಷಿಗಳ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು ಎಂದು ಹೇಳಿದರು.

ಸವಿತಾ ಮಹರ್ಷಿ ಜಯಂತಿ ಆಚರಣೆಯಿಂದ ಸಮುದಾಯದ ಜನರನ್ನು ಸಂಘಟಿಸಲು ಸಹಾಯವಾಗುತ್ತದೆ. ಕಡಿಮೆ ಜನಸಂಖ್ಯೆ ಹೊಂದಿರುವ ಸವಿತಾ ಸಮಾಜದವರು ಸಂಘಟಿತರಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಆಶಯ ವ್ಯಕ್ತಪಡಿಸಿದರು.

ದೂಡಾ ಅಧ್ಯಕ್ಷ ದಿನೇಶ್.ಕೆ. ಶೆಟ್ಟಿ, ಪಾಲಿಕೆ ಮಹಾಪೌರರಾದ ಕೆ. ಚಮನ್ ಸಾಬ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ತಹಶೀಲ್ದಾರ್ ಅಶ್ವಥ್, ಸಂಘದ ಜಿಲ್ಲಾಧ್ಯಕ್ಷ ಬಾಲರಾಜ್, ವಕೀಲ ಎನ್. ರಂಗಸ್ವಾಮಿ ಹಾಗೂ ಸಮಾಜದ ಮುಖಂಡರು ಭಾಗವಹಿಸಿದ್ದರು.

# ಮಕ್ಕಳಲ್ಲಿ ಉತ್ತಮ ಮೌಲ್ಯಗಳನ್ನು ಬಿತ್ತಬೇಕು



**ಬಸಾಪುರದ ಸರ್ಕಾರಿ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್**

ದಾವಣಗೆರೆ, ಫೆ. 5- ಮಕ್ಕಳಲ್ಲಿ ಸೃಜನಶೀಲತೆ ಹಾಗೂ ಉತ್ತಮ ಮೌಲ್ಯಗಳನ್ನು ಬಿತ್ತಬೇಕು ಎಂದು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಸಲಹೆ ನೀಡಿದರು.

ಬಸಾಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೊನ್ನೆ ನಡೆದ ವಾರ್ಷಿಕೋತ್ಸವ ಸಮಾರಂಭದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಮಕ್ಕಳ ಚಟುವಟಿಕೆಗಳ ಬಗ್ಗೆ ಪೋಷಕರು ಪಟ್ಟಿ ಮಾಡಿ ಅವರು ಉತ್ತಮ ವಿದ್ಯಾಭ್ಯಾಸಗೈದು ಸಾಧನೆ ತೋರುವಂತೆ ಮಾಡಬೇಕು ಎಂದರು.

ಬಸಾಪುರ ಗ್ರಾಮಸ್ಥರೆಲ್ಲಾ ಕೈಜೋಡಿಸಿ ಶಾಲೆ ಹಾಗೂ ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಅಭಿವೃದ್ಧಿಗೆ ಸಹಕಾರ ನೀಡಬೇಕು. ಹಳೆಯ ವಿದ್ಯಾರ್ಥಿಗಳ ಸಂಘ ರಚಿಸುವ ಮೂಲಕ ಶಾಲೆಯ ಉನ್ನತಿಗೆ ಸಹಕಾರ ನೀಡಬೇಕು ಎಂದರು.

ಐದು ವರ್ಷಕ್ಕೊಮ್ಮೆ ಎಲ್ಲಾ ಹಳೆಯ ವಿದ್ಯಾರ್ಥಿಗಳು ಒಂದೆಡೆ ಸೇರಿ ಶಾಲೆಯ ವಾರ್ಷಿಕೋತ್ಸವ ಸೇರಿದಂತೆ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಶಾಲೆಯ ಋಣ ತೀರಿಸಬೇಕು ಹಾಗೂ ಸಮಾಜಕ್ಕೆ ಒಂದು ಉತ್ತಮ ಸಂದೇಶ ನೀಡಬೇಕು ಎಂದರು.


ಮಕ್ಕಳಿಗೆ ಶಿಸ್ತು ಪಾಲನೆ ಮುಖ್ಯ. ಪ್ರತಿಯೊಬ್ಬರೂ ಓದಿಗೆ ಪ್ರಾಮುಖ್ಯತೆ ನೀಡಬೇಕು.ಗ್ರಂಥಾಲಯದಲ್ಲಿ ಉತ್ತಮ ಪುಸ್ತಕಗಳಿರುತ್ತವೆ ಅದನ್ನು ಪಡೆದುಕೊಂಡು ಮನನ ಮಾಡಬೇಕು.ಒಳ್ಳೆಯ ಸಮಾಜ ಕಟ್ಟುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಇದೇ ವೇಳೆ ಗ್ರಾಮಸ್ಥರು ಸಂಸದರಿಗೆ ಆರತಿ ಬೆಳಗಿ ಸಾರೋಟಿನಲ್ಲಿ ಕಾರ್ಯಕ್ರಮದ ಸ್ಥಳಕ್ಕೆ ಕರೆತಂದಿದ್ದು ವಿಶೇಷವಾಗಿತ್ತು.

ಎಂ.ಎಸ್ ಕೊಟ್ರಯ್ಯ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮೇಯರ್ ಕೆ.ಚಮನ್ ಸಾಬ್ ಮಾತನಾಡಿದರು.

ಈ ವೇಳೆ ಎಸ್.ಡಿ.ಎಂ.ಸಿ ಅಧ್ಯಕ್ಷ ಕೆ.ಹೆಚ್. ಗುರುಸಿದ್ದಯ್ಯ, ಪಾಲಿಕೆ ಸದಸ್ಯರಾದ ಶಿವಲೀಲಾ ಕೊಟ್ರಯ್ಯ, ಸಂಸದರ ಆಪ್ತ ಕಾರ್ಯದರ್ಶಿ ಹರೀಶ್ ಬಸಾಪುರ, ಮಾಜಿ ಉಪಮೇಯರ್ ಗೌಡ್ರ ರಾಜಶೇಖರಪ್ಪ, ಡಿಡಿಪಿಐ ಜಿ. ಕೊಟ್ರೇಶ್, ಬಿಇಒ ಶೇರ್ ಅಲಿ, ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ, ಕ್ಷೇತ್ರ ಸಮನ್ವಯಾಧಿಕಾರಿ ಫಸೀಹ್ ಉದ್ದೀನ್ ಶಾಕೀರ್, ಮಂಜುಳಾ ಸುರೇಂದ್ರಪ್ಪ ಹಾಗೂ ಗ್ರಾಮಸ್ಥರಾದ ಸುರೇಂದ್ರಪ್ಪ, ಮಹೇಶ್ವರಪ್ಪ, ಸಿದ್ದನಗೌಡ್ರು, ಕೆಂಪನಹಳ್ಳಿ ಲಿಂಗೇಶ್ವರಪ್ಪ, ನಾಗೇಂದ್ರಚಾರ್, ಮರುಳಪ್ಪ, ಕೊಟ್ರಯ್ಯ, ಲಿಂಗರಾಜ್, ದೇವೇಂದ್ರಪ್ಪ, ಪ್ರಕಾಶ್, ಶಿವಕುಮಾರ್, ತಿಪ್ಪೇಸ್ವಾಮಿ, ತಿಪ್ಪೇಶ್, ಮೌನೇಶ್ವರಚಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಾಲಕ್ಕಿಂತ ಹಲವು ಪಟ್ಟು ಹಣ ವಸೂಲಿ ಎಂದು ಮಲ್ಯ ದೂರು, ಬ್ಯಾಂಕುಗಳಿಗೆ ಹೈಕೋರ್ಟ್ ನೋಟಿಸ್



ಬೆಂಗಳೂರು, ಫೆ. 5 - ಬ್ಯಾಂಕುಗಳು ತಮಗೆ ಬರಬೇಕಾದ ಸಾಲಕ್ಕಿಂತ ಹಲವು ಪಟ್ಟು ಹೆಚ್ಚು ಹಣ ವಸೂಲಿ ಮಾಡಿವೆ ಎಂದು ಉದ್ಯಮಿ ವಿಜಯ್ ಮಲ್ಯ ಕರ್ನಾಟಕ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ.

ಈಗ ನಿಷ್ಕ್ರಿಯವಾಗಿರುವ ಯುನೈಟೆಡ್ ಬ್ರಿವರೀಸ್ ಹೋಲ್ಡಿಂಗ್ ಲಿಮಿಟೆಡ್ (ಯು.ಬಿ.ಹೆಚ್.ಎಲ್.) ಹಾಗೂ ಇತರೆ ಸಂಸ್ಥೆಗಳಿಂದ ವಸೂಲಿ ಮಾಡಲಾಗಿರುವ ಹಣದ ಬಗ್ಗೆ ದಾಖಲೆಗಳನ್ನು ಬ್ಯಾಂಕುಗಳು ಸಲ್ಲಿಸಬೇಕು ಎಂದು ಮಲ್ಯ ಅರ್ಜಿ ಸಲ್ಲಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಬ್ಯಾಂಕುಗಳಿಗೆ ನೋಟಿಸ್ ಕಳಿಸಿರುವ ನ್ಯಾಯಮೂರ್ತಿ ಆರ್.ದೇವದಾಸ್, ಫೆಬ್ರವರಿ 13ರ ಒಳಗೆ ಪ್ರತಿಕ್ರಿಯೆ ದಾಖಲಿಸುವಂತೆ ತಿಳಿಸಿದ್ದಾರೆ.

ಮಲ್ಯ ಪರವಾಗಿ ಹಾಜರಿದ್ದ ಹಿರಿಯ ವಕೀಲ ಸಂಜನ್ ಪೂವಯ್ಯ, ಕಿಂಗ್‌ಫಿಶರ್ ಏರ್‌ಲೈನ್ಸ್ ಹಾಗೂ ಅದರ ಮಾತೃ ಸಂಸ್ಥೆಯಾದ ಯು ಬಿ ಹೆ ಚ್ ಎ ಲ್ ವಿಸರ್ಜನೆಗಾಗಿ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್‌ವರೆಗೆ ಎಲ್ಲಾ ನ್ಯಾಯಿಕ ಹಂತಗಳಲ್ಲಿ ಒಪ್ಪಿಗೆ ನೀಡಲಾಗಿದೆ ಎಂದು ಹೇಳಿದರು.

ಇದಕ್ಕೆ ಸಂಬಂಧಿಸಿದಂತೆ ಎಲ್ಲಾ ಹಣವನ್ನು ವಸೂಲಿ ಮಾಡಲಾಗಿದೆ. ಆದರೂ ಮಲ್ಯ ವಿರುದ್ಧ ಹೆಚ್ಚುವರಿ ಹಣದ ವಸೂಲಿ ಪ್ರಕ್ರಿಯೆ ನಡೆದಿದೆ ಎಂದು ವಕೀಲರು ಹೇಳಿದರು.

ಪ್ರಮುಖ ಸಾಲಗಾರ ಕಂಪನಿಯಾದ ಕಿಂಗ್‌ಫಿಶರ್ ಏರ್‌ಲೈನ್ಸ್ ಹಾಗೂ ಅದರ ಗ್ಯಾರಂಟರ್ ಆಗಿರುವ ಯುಬಿಹೆಚ್‌ಎಲ್‌ನಿಂದ 6,200 ಕೋಟಿ ರೂ. ವಸೂಲಿ ಮಾಡಲು ಸಾಲ ವಸೂಲಿ ಟ್ರಿಬ್ಯುನಲ್ ಆದೇಶಿಸಿದೆ.

ಆದರೆ, 2017 ರಿಂದ ಇಲ್ಲಿಯವರೆಗೂ 6,200 ಕೋಟಿ ರೂ.ಗಳನ್ನು ಹಲವು ಬಾರಿ ವಸೂಲಿ ಮಾಡಲಾಗಿದೆ. ಇದುವರೆಗೂ 10,200 ಕೋಟಿ ರೂ.ಗಳನ್ನು ವಸೂಲಿ ಮಾಡಲಾಗಿದೆ ಎಂದು ಸಾಲ ವಸೂಲಿ ಅಧಿಕಾರಿ ಖಚಿತಪಡಿಸಿದ್ದಾರೆ. 14 ಸಾವಿರ ಕೋಟಿ ರೂ.ಗಳ ವಸೂಲಿ ಮಾಡಿರುವುದನ್ನು ಕೇಂದ್ರ ಹಣಕಾಸು ಸಚಿವಾಲಯವು ಸಂಸತ್ತಿಗೆ ತಿಳಿಸಿದೆ ಎಂದು ಮಲ್ಯ ಅರ್ಜಿಯಲ್ಲಿ ಹೇಳಲಾಗಿದೆ.

ಸಾಲ ವಸೂಲಿ ಬಗ್ಗೆ ನಾವು ಆಕ್ಷೇಪಿಸುತ್ತಿಲ್ಲ. ಆದರೆ ಕಂಪನಿಗಳ ಕಾಯ್ದೆಯ ಅನ್ವಯ ಒಂದು ಬಾರಿ ಸಾಲ ಪೂರ್ಣ ವಸೂಲಿಯಾದ ನಂತರ ಗಾರಂಟರ್ ಕಂಪನಿಯಾದ ಯುಬಿಹೆಚ್‌ಎಲ್ ಯಾವುದೇ ಹೊಣೆಗಾರಿಕೆ ಹೊಂದಿರುವುದಿಲ್ಲ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಆದರೆ ಇದುವರೆಗೂ ಸಾಲ ಸಂಪೂರ್ಣವಾಗಿ ವಸೂಲಾಗಿರುವ ಬಗ್ಗೆ ಅಧಿಕಾರಿಗಳು ಪ್ರಮಾಣ ಪತ್ರ ನೀಡುತ್ತಿಲ್ಲ. ಈ ನಡುವೆ ಮೂಲ ಸಾಲ ಸಂಪೂರ್ಣ ಮರುಪಾವತಿ ಆಗಿದೆಯೇ ಎಂಬುದರ ಸ್ಪಷ್ಟನೆಯೇ ಇಲ್ಲದಂತೆ ವಸೂಲಿ ಪ್ರಕ್ರಿಯೆ ಮುಂದುವರೆದಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

## ಜರ್ಮನ್ ಪ್ರವಾಸದಲ್ಲಿ ಸಚಿವ ಎಸ್ಸೆಸ್ಸೆಂ ತಂತ್ರಜ್ಞಾನ ಉಪಯೋಗಗಳ ಅಧ್ಯಯನ



ದಾವಣಗೆರೆ, ಫೆ. 5 - ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕಾ ಮತ್ತು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಜರ್ಮನ್ ಪ್ರವಾಸದಲ್ಲಿದ್ದು, ಆ ದೇಶದಲ್ಲಿನ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕಾ ವಿಷಯಗಳು, ತಂತ್ರಜ್ಞಾನ ಬೆಳವಣಿಗೆ ಹಾಗೂ ಅವುಗಳ ಉಪಯೋಗದ ಮಾಹಿತಿಯನ್ನು ಸಚಿವರು ಪಡೆದರು.

ತಮ್ಮ ಇಲಾಖೆಗೆ ಸಂಬಂಧ ಪಟ್ಟಂತೆ ಅತ್ಯಾಧುನಿಕ ಅಧ್ಯಯನ ನಡೆಸಿದರು. ಈ ವೇಳೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಶ್ರೀ ಹರಿಹರೇಶ್ವರ ರಥೋತ್ಸವಕ್ಕೆ ಸಿದ್ಧತೆ



ಹರಿಹರ, ಫೆ. 5 - ನಗರದ ಐತಿಹಾಸಿಕ ಪ್ರಸಿದ್ಧ ಶ್ರೀ ಹರಿಹರೇಶ್ವರ ಸ್ವಾಮಿಯ ರಥೋತ್ಸವವು ಇದೇ ದಿನಾಂಕ 12 ರಂದು ನಡೆಯುವುದರ ನಿಮಿತ್ತವಾಗಿ, ಶ್ರೀ ಹರಿಹರೇಶ್ವರ ಮತ್ತು ಮಹಾಲಕ್ಷ್ಮಿ ದೇವಸ್ಥಾನಕ್ಕೆ ವಿದ್ಯುತ್ ದೀಪಗಳಿಂದ ಶೃಂಗಾರ ಮಾಡಲಾಗಿದ್ದು, ಭಕ್ತರನ್ನು ಆಕರ್ಷಿಸುತ್ತದೆ. ಈ ಸಂದರ್ಭದಲ್ಲಿ ದೇವಸ್ಥಾನದ ಪ್ರಧಾನ ಅರ್ಚಕ ಶ್ರೀನಿವಾಸ್ ಮೂರ್ತಿ, ಗುರುಪ್ರಸಾದ್ ಇತರರು ಹಾಜರಿದ್ದರು.


**ಜನ್ಮದಿನದ ಶುಭಾಶಯಗಳು**



ದುರ್ಗಾಂಬಿಕಾ ವೆಜಿಟೇಬಲ್ಸ್
ಹಣ್ಣು ಮತ್ತು ತರಕಾರಿ
ದಲ್ಲಾಳಿ ಮಂಡಿ ದಾವಣಗೆರೆ.
ಮಾಲೀಕರಾದ
**ಟಿ. ನಾಗರಾಜ್**
ಅವರಿಗೆ 51ನೇ ವರ್ಷದ
ಹುಟ್ಟು ಹಬ್ಬವನ್ನು
ಆಚರಿಸಿಕೊಳ್ಳುತ್ತಿರುವ
ಇವರಿಗೆ ಭಗವಂತನು
ಆಯುರಾರೋಗ್ಯವನ್ನಿತ್ತು
ಕಾಪಾಡಲೆಂದು ಹಾರೈಸುತ್ತೇವೆ.

ಶುಭ ಕೋರುವವರು....
**ಗೆಳೆಯರ ಬಳಗ ದಾವಣಗೆರೆ**



ಶ್ರೀ ಲಕ್ಷ್ಮಿ ವೆಂಕಟೇಶ್ವರ ಪ್ರಸನ್ನ

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ನಗರ ನಿಟ್ಟುವಳ್ಳಿ ಚಿಕ್ಕಮ್ಮಣಿ ದೇವರಾಜ್ ಅರಸ್ ಬಡಾವಣೆ ವಾಸಿ ಶ್ರೀಮತಿ ಸುನೀತ ಇವರು ಮಾಡುವ ವಿಜ್ಞಾಪನೆಗಳು ದಿನಾಂಕ : 29.01.2025ನೇ ಬುಧವಾರ ಸಂಜೆ 6.30ಕ್ಕೆ ನನ್ನ ಪೂಜ್ಯ ಪತಿಯವರಾದ **ಶ್ರೀ ಶಿವಾನಂದಪ್ಪ ಜಿ.ಹೆಚ್.** ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ : 06.02.2025ನೇ ಗುರುವಾರ ಬೆಳಿಗ್ಗೆ 8.30ಕ್ಕೆ ಮೃತರ ಸ್ವಗೃಹ, # 2110/384, ನಿಟ್ಟುವಳ್ಳಿ ಚಿಕ್ಕಮ್ಮಣಿ ದೇವರಾಜ್ ಅರಸ್ ಬಡಾವಣೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಸುನೀತ ಮತ್ತು ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೆ ಆಹ್ವಾನವೆಂದು ಭಾವಸಿ ಆಗಮಿಸಬೇಕಾಗಿ ವಿನಂತಿ


# ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರಗೆ 'ಅಮಿತ' ಬಲ

**ಗೃಹ ಸಚಿವ ಅಮಿತ್ ಷಾ ಜೊತೆ ಚರ್ಚಿಸಿದ ಮಾಜಿ ಸಿ.ಎಂ ಬಿಎಸ್‌ವೈ**

ಬೆಂಗಳೂರು,ಫೆ.5- ಪಕ್ಷದ ಕೆಲವು ಮುಖಂಡರು ವಿರೋಧ ವ್ಯಕ್ತಪಡಿಸಿದರೂ ಬಿ.ವೈ.ವಿಜಯೇಂದ್ರ ಅವರೇ ರಾಜ್ಯಾಧ್ಯಕ್ಷರಾಗಿ ಮುಂದುವರೆಯಲಿದ್ದಾರೆ.

ರಾಜ್ಯ ಬಿಜೆಪಿಯಲ್ಲಿ ಕೆಲವು ನಾಯಕರು ರಾಜ್ಯಾಧ್ಯಕ್ಷ ಹಾಗೂ ತಮ್ಮ ಕುಟುಂಬದ ವಿರುದ್ಧ ಅಪಸ್ವರ ಎತ್ತಿ, ಬೀದಿಗಿಳಿದಿರುವ ಬಗ್ಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಗಮನಕ್ಕೆ ತಂದಿದ್ದಾರೆ. ಚುನಾವಣೆ ಹಾಗೂ ವಿಜಯೇಂದ್ರ ಅವರನ್ನು ಮುಂದುವರೆಸುವ ಸಂಬಂಧ ಬುಧವಾರ ಯಡಿಯೂರಪ್ಪ ಅವರು ಅಮಿತ್ ಷಾ ಜೊತೆ ಚರ್ಚಿಸಿದ್ದಾರೆ.

ನನಗೆಲ್ಲವೂ ತಿಳಿದಿದೆ, ವಿಜಯೇಂದ್ರ ಯುವಕ ಇದ್ದಾರೆ, ಅವರೇ ಮುಂದುವರೆಯುತ್ತಾರೆ, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟಿಸಲಿ, ಉಳಿದ ವಿಚಾರದ ಬಗ್ಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡ ಹಾಗೂ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದಿದ್ದಾರೆ.

ವಿಜಯೇಂದ್ರಗೆ ಒಂದೆಡೆ ಷಾ ಅವರ ಒಲವು, ಮತ್ತೊಂದೆಡೆ ರಾಜ್ಯದ 39 ಜಿಲ್ಲಾಧ್ಯಕ್ಷರಲ್ಲಿ 28 ಮಂದಿ ಹಾಲಿ ರಾಜ್ಯಾಧ್ಯಕ್ಷರ ಪರ ಇರುವುದು ವಿರೋಧಿಗಳಿಗೆ ಸಹಿಸಲು ಆಗುತ್ತಿಲ್ಲ.

ಚುನಾವಣೆ ನಡೆದರೂ ವಿಜಯೇಂದ್ರ ಅವರೇ ಗೆಲ್ಲುವರೆಂಬ ನಿರೀಕ್ಷೆ ಇವರದ್ದಾಗಿದ್ದು, ಹೀಗಾಗಿ, ಅವರಿಗೆ ಧಕ್ಕುವ ಅಧಿಕಾರ ತಪ್ಪಿಸಲು ಬಸನಗೌಡ ಪಾಟೀಲ್ ಯತ್ನಾಳ್ ಪಡೆ ದೆಹಲಿಯಲ್ಲಿ ಬಿಡಾರ ಹೂಡಿ ದಿನನಿತ್ಯ ಒಬ್ಬರಲ್ಲಾ ಒಬ್ಬರು ನಾಯಕರನ್ನು ಭೇಟಿ ಮಾಡಿ ರಾಜ್ಯಕ್ಕೆ ಪರ್ಯಾಯ ನಾಯಕನನ್ನು ಕೊಡಿ ಎಂದು ಕೇಳಿಕೊಳ್ಳುತ್ತಿದ್ದಾರೆ.

ಮತ್ತೊಂದೆಡೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್, ಆರ್‌ಎಸ್‌ಎಸ್ ನಾಯಕ ಮುಕುಂದ್ ಅವರನ್ನು ಭೇಟಿ ಮಾಡಿ, ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಆಗಬೇಕು ಎಂಬುದನ್ನು ಹೇಳಿದ್ದಾರೆ.

ಅವರನ್ನೇ ಅಧ್ಯಕ್ಷರನ್ನಾಗಿ ಮುಂದುರೆಸಿದರೆ ಪಕ್ಷದಲ್ಲಿ ಆಂತರಿಕ ಕಲಹ ಮತ್ತಷ್ಟು ಮುಂದುವರೆಯುತ್ತದೆ, ನಿಮಗೂ ಎಲ್ಲಾ ಮಾಹಿತಿ ಇದೆ, ನೀವು ಪಕ್ಷದ ವರಿಷ್ಠರ ಗಮನಕ್ಕೆ ತಂದು ಎಲ್ಲವನ್ನೂ ಸರಿಪಡಿಸಬೇಕು ಎಂದಿದ್ದಾರೆ.

ಆದರೆ, ವಿಜಯೇಂದ್ರ ಮಾತ್ರ ತಮ್ಮ ವಿರುದ್ಧ ಸ್ವಪಕ್ಷೀಯರಿಂದಲೇ ಟೀಕಾ ಪ್ರಹಾರಗಳು ಎದುರಾದರೂ ಏನನ್ನೂ ಪ್ರತಿಕ್ರಿಯಿಸಿದೆ, ನಾನೇ ಅಧ್ಯಕ್ಷನಾಗಿ ಮುಂದುವರೆಯುತ್ತೇನೆ, ಒಂದೆರಡು ವಾರಗಳಲ್ಲಿ ಎಲ್ಲವೂ ಸರಿಹೋಗಲಿದೆ ಎಂದಿದ್ದಾರೆ.


**ನಲ್ಕುಂದ ಗ್ರಾಮದ ಮುರುಡಬಸಪ್ಪರ ವನಜಾಕ್ಷಮ್ಮ ನಿಧನ**



ದಾವಣಗೆರೆ ತಾಲ್ಲೂಕು ನಲ್ಕುಂದ ಗ್ರಾಮದ ವಾಸಿ ಮುರುಡಬಸಪ್ಪರ ದಿ. ಈಶ್ವರಪ್ಪನವರ ಧರ್ಮಪತ್ನಿ
**ಶ್ರೀಮತಿ ಮುರುಡಬಸಪ್ಪರ ವನಜಾಕ್ಷಮ್ಮ**
ಇವರು ದಿನಾಂಕ 05.02.2025ರ ಬುಧವಾರ ಸಂಜೆ 3.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6.02.2025ರ ಗುರುವಾರ ಮಧ್ಯಾಹ್ನ 12.30ಕ್ಕೆ ನಲ್ಕುಂದ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ. : 97403 95614


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas